# ಕನ್ನಡ ಚಲನಚಿತ್ರರಂಗ
# ೯೦ ವರ್ಷಗಳ ಸಂಭ್ರಮ
# ಸಾಧನೆಗಳ ಪರ್ವ

ಗಂಗಾಧರ ಮೊದಲಿಯಾರ್

ಕರ್ನಾಟಕ ಚಲನಚಿತ್ರ ಅಕಾಡೆಮಿ
Karnataka Chalanachitra Academy

ಕನ್ನಡ ಚಲನಚಿತ್ರ ೯೦ ಸಾಧನೆಗಳ ಪರ್ವ : ಇತಿಹಾಸ

Brief History of Kannada Cinema


ಕೃತಿ ಲೇಖಕರು : ಗಂಗಾಧರ ಮೊದಲಿಯಾರ್

ಪ್ರಕಟವಾದ ವರ್ಷ : 2024


ಕನ್ನಡ ಚಲನಚಿತ್ರರಂಗಕ್ಕೆ ಈಗ ೯೦ ವರ್ಷ. ಈ ಸಂಭ್ರಮದ ಸಂದರ್ಭದ ವಿಶೇಷ ಸಂಚಿಕೆ **"ಸಾಧನೆಗಳ ಪರ್ವ"**– 15ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಸಂದರ್ಭದಲ್ಲಿ ಬಿಡುಗಡೆಯಾದ ನೆನಪಿನ ಕಾಣಿಕೆ. ಈ ವಿಶೇಷ ಸಂಗ್ರಾಹ್ಯ ಸಂಚಿಕೆಯನ್ನು ಚಿತ್ರೋತ್ಸವದಲ್ಲಿ ಪಾಲ್ಗೊಳ್ಳುವ ಪ್ರತಿನಿಧಿಗಳಿಗೆ ಉಚಿತವಾಗಿ ನೀಡುವ ಉದ್ದೇಶದಿಂದ ರೂಪಿಸಲಾಗಿದೆ. ಯಾವುದೇ ರೀತಿಯ ಮಾರಾಟ, ಆರ್ಥಿಕ ಉದ್ದೇಶದಿಂದಲ್ಲ.


ಕೃತಿಯ ಹೊಳಹು : ಎನ್.ವಿದ್ಯಾಶಂಕರ್, ಕಲಾತ್ಮಕ ನಿರ್ದೇಶಕರು

ಮಾಹಿತಿ ನೆರವು : ಪಿ.ಶೇಷಾದ್ರಿ, ಜಂಟಿ ಕಲಾತ್ಮಕ ನಿರ್ದೇಶಕರು

ತಾಂತ್ರಿಕ ನೆರವು : ಮುರುಳಿ ಪಿ.ಬಿ., ಉಪ ಕಲಾತ್ಮಕ ನಿರ್ದೇಶಕರು

ಛಾಯಾಚಿತ್ರ ಆಯ್ಕೆ ನೆರವು : ಬಿ.ಎನ್.ಸುಬ್ರಹ್ಮಣ್ಯ, (ಹಿರಿಯ ಪತ್ರಕರ್ತರು)
ಸಚಿನ್ ಗೌಡರ್

ಸಂಪಾದಕೀಯ ನೆರವು : ಜನಾರ್ಧನ್ ಮೌರ್ಯ
ಜಯಂತ್ ನಿಟ್ಟಡೆ
ಸಚಿನ್ ಗೌಡರ್

ಮುಖಪುಟ ವಿನ್ಯಾಸ : ವಿಷ್ಣುಕುಮಾರ್ ಎಸ್

ಒಳಪುಟ ವಿನ್ಯಾಸಕಾರರು : ವೀರೇಶ ಹೊಗೆಸೊಪ್ಪಿನವರ,
ಶಶಿಕಿರಣ್ ದೇಸಾಯಿ ಬಿ,
ನಾಗಭೂಷಣ್ ಹೆಚ್.ಎನ್


ಪುಟಗಳು : 104

ಪ್ರಕಾಶಕರು : ರಿಜಿಸ್ಟ್ರಾರ್, ಕರ್ನಾಟಕ ಚಲನಚಿತ್ರ ಅಕಾಡೆಮಿ,
ನಂದಿನಿ ಎಫ್ ಹೆಚ್ ಎಸ್ ಲೇಔಟ್,
ಪ್ರೆಸಿಡೆನ್ಸಿ ಸ್ಕೂಲ್ ಹತ್ತಿರ, ಬೆಂಗಳೂರು– 560 096

ಚಿತ್ರಕೃಪೆ : ಅಕಾಡೆಮಿ ಪ್ರಕಟಣೆಗಳು : ಚಂದನವನ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಂಗ್ರಹ
ಅಂತರ್ಜಾಲಗಳಿಂದ ಸೌಜನ್ಯಪೂರ್ವಕವಾಗಿ

ಮುದ್ರಣ : ಉಜ್ವಲ್ ಎಂಟರ್‌ಪ್ರೈಸಸ್

# ಆಶಯ ನುಡಿ



ಕನ್ನಡ ಚಿತ್ರರಂಗಕ್ಕೆ ಈ ವರ್ಷ ೯೦. ಇದು ನಿಜಕ್ಕೂ ಹೆಮ್ಮೆಯ ವಿಷಯ. ಕನ್ನಡ ಚಿತ್ರರಂಗದ ಸಾಧನೆಯನ್ನು ವಿಶ್ವ ಭೂಪಟದಲ್ಲಿ ರಾರಾಜಿಸುವಂತೆ ಮಾಡಲು ಶ್ರಮಿಸಿದ ಚಿತ್ರರಂಗದ ಎಲ್ಲ ಸಾಧಕರಿಗೆ, ಉದ್ಯಮದ ಎಲ್ಲ ವಲಯದ ಶ್ರಮಜೀವಿಗಳಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳು.

ಕನ್ನಡ ಚಿತ್ರರಂಗ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಡುವ, ಸಮಾಜ ಸುಧಾರಣೆಯ ಸಂದೇಶಗಳನ್ನು ತಲುಪಿಸುವ, ಮೌಲ್ಯಗಳನ್ನು ಪ್ರತಿಪಾದಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿಕೊಂಡು ಬರುತ್ತಿದೆ. ಹಂತಹಂತವಾಗಿ ಚಿತ್ರರಂಗ ಬೆಳೆದು ಬಂದ ರೀತಿಯನ್ನು ನೋಡಿದರೆ, ಕನ್ನಡ ಚಿತ್ರರಂಗ ಇಂದು ವಿಶ್ವವೇ ತಿರುಗಿ ನೋಡುವಂತಹ ಸಾಧನೆಯನ್ನು ಮೆರೆದಿರುವುದು ಅಭಿನಂದನಾರ್ಹ. ಆಧುನಿಕ ತಂತ್ರಜ್ಞಾನ ಸಿನಿಮಾ ಕ್ಷೇತ್ರವನ್ನು ಪ್ರವೇಶಿಸಿದ ಮೇಲೆ, ಅದನ್ನು ಸಮರ್ಥವಾಗಿ ಬಳಸಿಕೊಂಡ ಅಗ್ರಗಣ್ಯರಾಜ್ಯ ಕರ್ನಾಟಕ ಎನ್ನುವುದು ವೇದ್ಯ.. ಕರ್ನಾಟಕ ಚಲನಚಿತ್ರ ರಂಗ ಇಂತಹ ಸಾಧನೆ ಮಾಡಲು ಕರ್ನಾಟಕ ರಾಜ್ಯ ಸರ್ಕಾರ ಸೂಕ್ತ ಅವಕಾಶ ಒದಗಿಸಿ ಕೊಟ್ಟಿದೆ. ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಪ್ರತೀ ವರ್ಷ ನಡೆಸಿಕೊಂಡು ಬರುತ್ತಿರುವುದು, ಅಲ್ಲಿ ದೇಶವಿದೇಶಗಳ ಅತ್ಯುತ್ತಮ ಚಲನಚಿತ್ರಗಳನ್ನು ಪ್ರದರ್ಶಿಸುತ್ತಿರುವುದು ಗಮನಾರ್ಹ. ಅಲ್ಲದೆ ಈ ಸಂದರ್ಭದಲ್ಲಿ ಸಿನಿಮಾದ ಬೆಳವಣಿಗೆ ಕುರಿತಂತೆ ದೇಶವಿದೇಶಗಳ ತಜ್ಞರೊಂದಿಗೆ ಶೈಕ್ಷಣಿಕ ಸಂವಾದ ನಡೆಸುತ್ತಿರುವುದು ಕನ್ನಡ ಚಲನಚಿತ್ರರಂಗದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ ಎನ್ನುವುದು ನನ್ನ ನಂಬಿಕೆ. ಕನ್ನಡ ಚಲನಚಿತ್ರರಂಗದ ಬೆಳವಣಿಗೆಗೆ ರಾಜ್ಯ ಸರ್ಕಾರ ಎಲ್ಲ ಸಹಕಾರ ನೀಡುತ್ತಿದೆ. ಗುಣಮಟ್ಟದ ಚಲನಚಿತ್ರಗಳಿಗೆ ಸಬ್ಸಿಡಿ, ಉತ್ತಮ ಚಲನಚಿತ್ರಗಳಿಗೆ ಪ್ರಶಸ್ತಿ ನೀಡುವುದಲ್ಲದೆ, ಮೈಸೂರಿನಲ್ಲಿ ಚಿತ್ರರಂಗದ ಬೆಳವಣಿಗೆಗೆ ಪೂರಕವಾದ ಫಿಲಂ ಸಿಟಿ ನಿರ್ಮಿಸಲು ಮುಂದಾಗಿದ್ದೇವೆ.

15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯುತ್ತಿದೆ. ಇದೇ ಸಂದರ್ಭದಲ್ಲಿ ಕನ್ನಡ ಚಲನ ಚಿತ್ರಗಳ ಮಹತ್ವವನ್ನು ಎತ್ತಿ ತೋರುವ ಚಲನಚಿತ್ರ ಪ್ರದರ್ಶನ ನಡೆಯುತ್ತಿರುವುದು, ಹಾಗೂ ಕನ್ನಡ ಸಿನಿಮಾ ಸಾಧನೆಗಳನ್ನು ಪರಿಚಯಿಸುವ ವಿಶೇಷ ಸಂಚಿಕೆಯೊಂದನ್ನು ಹೊರತರುತ್ತಿರುವುದು ಸಂತೋಷದ ಸಂಗತಿ. ೯೦ರ ಸಂಭ್ರಮದಲ್ಲಿರುವ ಕನ್ನಡ ಚಿತ್ರರಂಗಕ್ಕೆ ಇದು ಮತ್ತಷ್ಟು ಹುರುಪು ನೀಡಲಿ ಎಂದು ಹಾರೈಸುತ್ತೇನೆ.

**ಶ್ರೀ ಸಿದ್ಧರಾಮಯ್ಯ**
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕನ್ನಡ ಚಲನಚಿತ್ರ ಸಾಧನೆಗಳ ಪರ್ವ



15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯುತ್ತಿರುವ ಸಂದರ್ಭದಲ್ಲಿ ಕನ್ನಡ ಚಿತ್ರರಂಗದ 90 ವರ್ಷಗಳ ಸಾಧನೆಯನ್ನು ಕೂಡ ಸ್ಮರಿಸುತ್ತಿರುವುದು ಎಲ್ಲ ಕನ್ನಡಿಗರೂ ಹೆಮ್ಮೆ ಪಡುವ ಸಂಗತಿ. ಇಂದು ಜಾಗತಿಕವಾಗಿ ಕನ್ನಡ ಚಿತ್ರರಂಗದ ಬಗ್ಗೆ, ಕನ್ನಡ ಸಿನಿಮಾಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಕನ್ನಡ ಚಿತ್ರಗಳು ಇಂದು ಭಾರತೀಯ ಇತರ ಭಾಷಾ ಚಿತ್ರಗಳಿಗೆ ಸಮಾನ ಸ್ಪರ್ಧೆ ನೀಡುತ್ತಿರುವುದು ವ್ಯಾವಹಾರಿಕವಾಗಿ ಚಿತ್ರರಂಗ ಬೆಳೆದ ಸೂಚನೆಯಾಗಿದೆ. ಕನ್ನಡ ಚಿತ್ರಗಳು ಗುಣಮಟ್ಟದಲ್ಲಿ ಅತ್ಯುತ್ತಮವಾಗಿದೆ ಎನ್ನುವುದು ಎಲ್ಲೆಡೆ ಕೇಳಬರುತ್ತಿದೆ. ಅಲ್ಲದೆ ಬೆಂಗಳೂರು ಇಂದು ಆಧುನಿಕ ತಾಂತ್ರಿಕತಜ್ಞರ ನಗರವಾಗಿ ಬೆಳೆದಿದೆ. ವಿಶ್ವದ ಹಲವು ಕಡೆಗಳಿಂದ ಸಿನಿಮಾ ನಿರ್ಮಾಪಕರು ರಾಜಧಾನಿಗೆ ಆಗಮಿಸಿ, ಇಲ್ಲಿನ ತಂತ್ರಜ್ಞರ ಸಲಹೆ, ಸಹಕಾರ ಪಡೆದು ಸಿನಿಮಾಗಳನ್ನು ನಿರ್ಮಿಸುತ್ತಿದ್ದಾರೆ. ಸರ್ಕಾರವೂ ಚಿತ್ರರಂಗಕ್ಕೆ ಬೇಕಾದ ಸಕಲ ಸೌಕರ್ಯಗಳನ್ನೂ ಒದಗಿಸಿದೆ. ಕನ್ನಡ ಚಿತ್ರರಂಗದ ಸಾಧನೆಗಳ ಪರ್ವ ಕಿರು ಹೊತ್ತಿಗೆ ಕನ್ನಡ ಚಿತ್ರರಂಗದ ಒಂದು ಹೆಮ್ಮೆಯ ನೋಟವನ್ನು ನೀಡಲಿದೆ.

**ಡಾ. ತ್ರಿಲೋಕ್‌ಚಂದ್ರ ಕೆ.ವಿ.** ಐಎಎಸ್

*ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,*

*ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ*

*ಕರ್ನಾಟಕ ಸರ್ಕಾರ*




ಕನ್ನಡ ಸಂಸ್ಕೃತಿ ಮತ್ತು ಕಲೆಯನ್ನು ಪ್ರತಿಬಿಂಬಿಸುತ್ತಿರುವ ಕನ್ನಡ ಚಲನಚಿತ್ರರಂಗ ೯೦ವರ್ಷಗಳ ಸಾಧನೆಯನ್ನು ಮೆರೆಯುತ್ತಿದೆ ಎನ್ನುವುದು ಸಂತೋಷದ ಸಂಗತಿ. 15 ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯುತ್ತಿರುವ ಸಂದರ್ಭದಲ್ಲಿ ಇಂತಹ ಒಂದು ಐತಿಹಾಸಿಕ ಸಂಗತಿಯನ್ನು ಸಂಭ್ರಮಿಸುತ್ತಿರುವುದಕ್ಕೆ ಹೆಮ್ಮೆ ಎನಿಸುತ್ತದೆ. ಕನ್ನಡ ಚಿತ್ರರಂಗದ ಸಾಧನೆಯಲ್ಲಿ ಅನೇಕರ ಕೊಡುಗೆ ಇದೆ. ಶ್ರಮವಹಿಸಿ ಚಿತ್ರರಂಗ ಕಟ್ಟಿದ, ಅದನ್ನು ಹೆಮ್ಮರವಾಗಿ ಬೆಳೆಸಿದ ನಿರ್ದೇಶಕರ, ನಿರ್ಮಾಪಕರ ಕೊಡುಗೆ ಅನನ್ಯವಾದುದು. ಅದೇ ರೀತಿ ಕನ್ನಡ ಕಲಾವಿದರು ಜನಮನದಲ್ಲಿ ಬೇರೂರಿ ಕನ್ನಡದ ಬಗ್ಗೆ, ನಾಡುನುಡಿಯ ಬಗ್ಗೆ ಅಭಿಮಾನ ಮೂಡಿಸಿದ್ದಾರೆ. ಸರ್ಕಾರವೂ ಕನ್ನಡ ಚಿತ್ರರಂಗದ ಅಭಿವೃದ್ಧಿಗೆ ಉದಾರವಾಗಿ ಸಹಾಯ ಹಸ್ತ ಚಾಚಿದೆ. ಸಹಾಯ ಧನವೂ ಸೇರಿ ರೂಪಿಸಿರುವ ಯೋಜನೆಗಳು ಹೊಸ ನಿರ್ಮಾಪಕರಿಗೆ ಹಾದಿ ಕನ್ನಡ ಚಿತ್ರರಂಗದ ಸಾಂಸ್ಕೃತಿಕ ವೈಭವದ ಪ್ರತೀಕವಾಗಿದೆ. ಕನ್ನಡ ಚಿತ್ರರಂಗ ೯೦ ರ ಸಾಧನೆಯನ್ನು ಸಂಭ್ರಮಿಸುತ್ತಿರುವ ಈ ಸಂದರ್ಭದಲ್ಲಿ ಹೊರತರಲಾಗುತ್ತಿರುವ ಈ ಸಂಚಿಕೆ ಉಪಯುಕ್ತ ಕೈಪಿಡಿಯಾಗಿದೆ.

**ಶ್ರೀ ಹೇಮಂತ ಎಂ. ನಿಂಬಾಳ್ಕರ್,** ಐಪಿಎಸ್

*ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ*

*ಕರ್ನಾಟಕ ಸರ್ಕಾರ*



ಕನ್ನಡ ಚಲನಚಿತ್ರರಂಗಕ್ಕೆ ಈಗ ೯೦. ಇದೊಂದು ಹೆಮ್ಮೆಯ ವಿಷಯ. 15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕನ್ನಡ ಚಿತ್ರರಂಗದ ೯೦ನೇ ವರ್ಷಾಚರಣೆಯನ್ನು ಆಚರಿಸುವುದು, ಚಿತ್ರರಂಗದ ಒಂಬತ್ತು ದಶಕಗಳ ಸಾಧನೆಯ ಸಂಕೇತವೆನಿಸುವ ಕನ್ನಡದ್ದೇ ಚಿತ್ರೋತ್ಸವವನ್ನು ಇಲ್ಲಿ ಏರ್ಪಡಿಸಿರುವುದು ಎಲ್ಲರಿಗೂ ಹೆಮ್ಮೆಯ ವಿಷಯ. ಕನ್ನಡ ಚಲನಚಿತ್ರ ರಂಗದ ಬಗ್ಗೆ ಹೆಮ್ಮೆ ಪಡಲು ನಿಜವಾದ ಕಾರಣಗಳಿವೆ. ಕನ್ನಡ ಚಿತ್ರರಂಗದ ೯೦ ವರ್ಷದ ಬೆಳವಣಿಗೆ ಒಟ್ಟಾರೆ ಭಾರತೀಯ ಚಿತ್ರರಂಗದ ಬೆಳವಣಿಗೆಯನ್ನು ಅನುಸರಿಸಿದೆ. ಮೂವತ್ತರ ದಶಕದಲ್ಲಿ ಪೌರಾಣಿಕ, ಐತಿಹಾಸಿಕ ಪರಂಪರೆಗಳನ್ನು ಆಧರಿಸಿ ನಿರ್ಮಿತವಾಗುತ್ತಿದ್ದ ಸಿನಿಮಾ ೬೦ರ ದಶಕದಲ್ಲಿ ಕನ್ನಡ ಜಾಗೃತಿಯ ಆಶಯಗಳನ್ನು ಪ್ರತಿನಿಧಿಸಲು ಪ್ರಾರಂಭಿಸಿತು. ಕರ್ನಾಟಕವು ವೈವಿಧ್ಯಮಯ ಸಂಸ್ಕೃತಿಗಳ, ಭಾಷೆಗಳ, ಉಪಭಾಷೆಗಳ, ಹವಾಗುಣಗಳ, ಭೌಗೋಳಿಕ ಏರುಪೇರುಗಳ ರಾಜ್ಯ. ರಾಜಕೀಯವಾಗಿಯೂ ಕೂಡ ಕನ್ನಡ ನೆಲ, ಸಾಂಸ್ಕೃತಿಕ ಭಾಷೆಯಾಗಿ ಒಂದುಗೂಡಿದ ರಾಜ್ಯವಲ್ಲ. ಇಂತಹ ಸಂದರ್ಭದಲ್ಲಿ ಕನ್ನಡ ಸಿನಿಮಾ ಅದರಲ್ಲೂ ಮುಖ್ಯವಾಗಿ ಐವತ್ತರ ದಶಕದಿಂದ ಇತ್ತೀಚೆಗೆ ಎಲ್ಲ ಪ್ರದೇಶಗಳಲ್ಲೂ ಕನ್ನಡದ ಏಕತೆಯನ್ನು ಸಾಧಿಸಿದೆ.

ಕನ್ನಡ ಚಲನಚಿತ್ರರಂಗದ ಸಾಧನೆಯ ಬಗ್ಗೆ ಮಾತನಾಡುವಾಗ ಇಡೀ ಕನ್ನಡ ಚಿತ್ರರಂಗವನ್ನು ಕನ್ನಡಮಯವಾಗಿಸಿ, ಕನ್ನಡ ಪ್ರೇಕ್ಷಕರನ್ನು ಒಂದುಗೂಡಿಸಿದ ಡಾ.ರಾಜ್‌ಕುಮಾರ್‌ಅವರ ಕೊಡುಗೆಯನ್ನು ಸ್ಮರಿಸಲೇ ಬೇಕು. ಇಡೀ ಕರ್ನಾಟಕವನ್ನು ಒಂದಾಗಿ ನೋಡುವ ದೃಷ್ಟಿಕೋನವನ್ನು ಭಾಷೆಯ ಮೂಲಕ ಒದಗಿಸಿಕೊಟ್ಟವರು ಡಾ.ರಾಜ್‌ಕುಮಾರ್. ಅರವತ್ತರ ದಶಕದಲ್ಲಿ ಕರ್ನಾಟಕದಲ್ಲಿ ಕನ್ನ,ಡ ಚಲನಚಿತ್ರಗಳೇ ಪ್ರದರ್ಶನವಾಗಬೇಕು, ಕನ್ನಡಕ್ಕೆ ಆದ್ಯತೆ ಇರಬೇಕೆಂದು ಅನಕೃ, ರಾಮಮೂರ್ತಿ ಅವರ ನೇತೃತ್ವದಲ್ಲಿ ನಡೆದ ನಡೆದ ಚಳವಳಿ, ಡಾ.ರಾಜ್‌ಕುಮಾರ್‌ಅವರ ನೇತೃತ್ವದಲ್ಲಿ ನಡೆದ ಗೋಕಾಕ್‌ಚಳವಳಿಗಳು ಚಿತ್ರ ಮಾಧ್ಯಮದಲ್ಲಿ ಬದಲಾವಣೆಗೆ ಕಾರಣವಾದುದನ್ನು ಸ್ಮರಿಸಲೇ ಬೇಕು. ಕನ್ನಡ ಸಿನಿಮಾಕ್ಕೆ ೯೦ ರ ಈ ಸಂದರ್ಭದಲ್ಲಿ ಸಿನಿಮಾ ಸಾಧನೆ ಕುರಿತು , ಕನ್ನಡ ಚಿತ್ರಗಳ ಸಂಕ್ಷಿಪ್ತ ಇತಿಹಾಸ ಈಗ ನಿಮ್ಮ ಮುಂದಿದೆ.

**ಶ್ರೀ ಎನ್. ವಿದ್ಯಾಶಂಕರ್,** *ಕಲಾತ್ಮಕ ನಿರ್ದೇಶಕರು*
*15 ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ*




ಕನ್ನಡ ಚಲನಚಿತ್ರ ರಂಗ ಈಗ ೯೦ರ ಸಂಭ್ರಮದಲ್ಲಿದೆ. ಇಷ್ಟು ವರ್ಷದ ಹಾದಿಯಲ್ಲಿ ಹಲವಾರು ಏಳುಬೀಳುಗಳವೆ ಇಂದು ಅದೆಲ್ಲವನ್ನೂ ದಾಟಿ, ಕನ್ನಡ ಚಿತ್ರರಂಗ ಸದೃಢತೆಯಲ್ಲಿದೆ. ಗುಣಮಟ್ಟದ ಚಿತ್ರಗಳು ಕನ್ನಡದ ಖ್ಯಾತಿಯನ್ನು ವಿಶ್ವಮಟ್ಟಕ್ಕೆ ಏರಿಸಿವೆ. ಕನ್ನಡ ಚಿತ್ರರಂಗದ ಈ ಸಾಧನೆಯಲ್ಲಿ ಹಲವಾರು ಜನರ ಪರಿಶ್ರಮವಿದೆ. ಕಲಾವಿದರು, ನಿರ್ಮಾಪಕರು, ನಿರ್ದೇಶಕರು, ಚಿತ್ರಮಂದಿರದ ಮಾಲೀಕರು, ವಿತರಕರು ಹೀಗೆ ಬಹಳಷ್ಟು ಮಂದಿ ಒಂದು ಚಿತ್ರದ ಯಶಸ್ಸಿಗೆ ಕಾರಣೀಭೂತರಾಗಿದ್ದಾರೆ. ಕನ್ನಡದ ಮೊದಲ ವಾಕ್ಚಿತ್ರದ ನಾಯಕ ನಟ ಸುಬ್ಬಯ್ಯ ನಾಯ್ಡು ಅವರಿಂದ ಆರಂಭಿಸಿ ಡಾ.ರಾಜ್‌ಕುಮಾರ್‌ರವರೆಗೆ ಎಲ್ಲ ನಾಯಕನಟರೂ ಕನ್ನಡ ಚಿತ್ರರಂಗವನ್ನು ಕಟ್ಟಿ ಬೆಳೆಸಿದ್ದಾರೆ. ರಾಜ್ಯ ಸರ್ಕಾರವೂ ಕನ್ನಡ ಚಿತ್ರರಂಗದ ಹಿತಕ್ಕಾಗಿ ಎಲ್ಲ ಸೌಕರ್ಯಗಳನ್ನು ನೀಡಿದೆ. ಸಹಾಯಧನ ಎಷ್ಟೋ ನಿರ್ಮಾಪಕರ ಕೈ ಹಿಡಿದಿದೆ. ಸಿನಿಮಾದಲ್ಲಿ ಆಧುನಿಕತೆ ತರಲು ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಲು ಬೆಂಗಳೂರು ನಗರದಲ್ಲಿ ಯುವಕರಿಗೆ ಸಹಾಯ, ಸೌಲಭ್ಯಗಳನ್ನು ನೀಡಲಾಗಿದೆ. ಕನ್ನಡ ಚಲನಚಿತ್ರ ಬೆಳೆದು ಬಂದ ದಾರಿಯನ್ನು ಈ ಸಂದರ್ಭದಲ್ಲಿ ಹೊರತರುತ್ತಿರುವ ಹೊತ್ತಿಗೆಯಲ್ಲಿ ನೀಡಲಾಗಿದೆ. ಇದು ಕನ್ನಡ ಸಿನಿಮಾ ಇತಿಹಾಸದ ಕೈಪಿಡಿ. ಕನ್ನಡ ಚಿತ್ರರಂಗ ೯೦ ದಾಟಿರುವ ಈ ಸಂದರ್ಭದಲ್ಲಿ ಉದ್ಯಮದ ಎಲ್ಲರಿಗೂ ಅಭಿನಂದನೆಗಳು.

**ಶ್ರೀ ಹಿಮಂತರಾಜು ಜಿ.**

*ರಿಜಿಸ್ಟ್ರಾರ್, ಕರ್ನಾಟಕ ಸರ್ಕಾರ*

# ಓದುವ ಮುನ್ನ...



"ಸೌಂದರ್ಯ, ಸಂಪತ್ತು ತುಂಬಿ ತುಳುಕುತ್ತಿರುವ ಸುಂದರ ಕನ್ನಡನಾಡಿನಲ್ಲಿ ಹುಟ್ಟಿದ ಮನುಷ್ಯರೇ ಧನ್ಯರು" ಎನ್ನುತ್ತಾನೆ ಆದಿ ಕವಿ ಪಂಪ. ಮರುಜನ್ಮವಿರುವುದಾದರೆ ಇಲ್ಲಿ ಮನುಷ್ಯನಾಗಿ ಹುಟ್ಟಬೇಕು, ಕಡೆಯ ಪಕ್ಷ ಕೋಗಿಲೆ, ಗಿಳಿ ಮರಿದುಂಬಿಯಾಗಿಯಾದರೂ ಹುಟ್ಟಿ ಈ ಸಂಪತ್ತನ್ನು ಅನುಭವಿಸಬೇಕು ಎಂದು ಪಂಪ ನಮ್ಮ ನಾಡಿನ ಸಿರಿ ಸೌಂದರ್ಯವನ್ನು ಮತ್ತಷ್ಟು ವರ್ಣಿಸುತ್ತಾನೆ. ಕನ್ನಡ ನಾಡು, ಕನ್ನಡ ಭಾಷೆ, ಕವಿರಾಜಮಾರ್ಗಕಾರನಿಂದ ಇತ್ತೀಚಿನ ಕವಿಯವರೆಗೆ ಎಲ್ಲರ ಮೈದುಂಬಿ ಬಂದಿದೆ. ಪ್ರಸ್ತುತ ತೊಂಬತ್ತು ವರ್ಷಗಳನ್ನು ತುಂಬಿಕೊಂಡಿರುವ ಸುದೀರ್ಘ ಇತಿಹಾಸ ಹೊಂದಿದ, ನಮ್ಮ ಸಾಂಸ್ಕೃತಿಕ ಮಾಧ್ಯಮವಾದ ಸಿನಿಮಾರಂಗದಲ್ಲೂ ಕೂಡ "ಹುಟ್ಟಿದರೇ ಕನ್ನಡನಾಡಲಿ ಹುಟ್ಟಬೇಕು" ಎಂಬ ಭಾವವೇ ಪ್ರಧಾನವಾಗಿ ಮೆರೆಯುತ್ತಿದೆ. ಇದು ನಮ್ಮ ಸಾಹಿತ್ಯ ಸಂಸ್ಕೃತಿ ಪರಂಪರೆಯ ಭಾಗವೇ ಎನ್ನಬಹುದು. ಈ ಚೌಕಟ್ಟಿನಲ್ಲೇ ನಮ್ಮ ಕನ್ನಡ ಸಿನಿಮಾ ಇಂದಿಗೂ ನಾಡುನುಡಿಯ ಪ್ರಬಲ ವಕ್ತಾರನ ಪಾತ್ರ ವಹಿಸುತ್ತಾ ಮುಂದುವರೆದಿದೆ.

ಇಂತಹ ಭವ್ಯ ಪರಂಪರೆ ಹೊಂದಿರುವ ಕನ್ನಡ ಸಾಹಿತ್ಯ ಚರಿತ್ರೆ ಸಮೃದ್ಧತೆಯಿಂದ ತುಳುಕುತ್ತಿದೆ. ಜಾನಪದ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನೆಲೆಗಟ್ಟಿನ ಚಲನಚಿತ್ರಗಳು ಕಾಲಘಟ್ಟದ ಇತಿಹಾಸವನ್ನೂ ಒಳಗೊಳ್ಳುತ್ತಾ, ಆ ಮೂಲಕ ಭಾಷೆ, ಸಾಮಾಜಿಕ ಕಳಕಳಿ, ಸಮಕಾಲೀನ ಸ್ಪಂದನೆಗಳಿಗೆ ತುಡಿಯುತ್ತಾ ಸಮಾಜದ ಪ್ರತಿಬಿಂಬವಾಗಿ ಸ್ಥಾಪಿತವಾಗಿದೆ. ಅಂತಹ ಇತಿಹಾಸ ನಮಗೆ ಕನ್ನಡ ಚಲನಚಿತ್ರಗಳ ತೊಂಬತ್ತುವರ್ಷಗಳ ನಡೆಯಲ್ಲಿ ಕಾಣಸಿಗುತ್ತದೆ. ಅಂತಹ ಒಂದು ಚಿತ್ರಣವನ್ನು, ಕನ್ನಡ ಚಲನಚಿತ್ರರಂಗದ ೯೦ ವರ್ಷದ ಈ ಸಂದರ್ಭದಲ್ಲಿ ಕಿರುಪರಿಚಯದ ಮೂಲಕ ನಿಮ್ಮ ಮುಂದೆ ತರಲಾಗಿದೆ. ಸಿನಿಮಾ ಚರಿತ್ರೆಗೆ ನಮಗಿರುವ ಒಂದೇ ದಾರಿಯೆಂದರೆ ಅದು ಗತಕಾಲದ ಸಿನಿಮಾಗಳತ್ತ ನೋಟ ಹರಿಸುವುದು. ಅದರೆ ಚರಿತ್ರಕಾರರಿಗೆ ಅಂತಹ ಸಿನಿಮಾಗಳು ಅಲಭ್ಯ. ಸಿನಿಮಾ ಚರಿತ್ರೆಯ ಪರಿಕರಗಳನ್ನು ರಕ್ಷಿಸಲು ನಾವು ವಿಫಲರಾಗಿದ್ದೇವೆ. ಈ ಸೀಮಿತ ಚೌಕಟ್ಟಿನಲ್ಲಿ ಸಿನಿಮಾ ಚರಿತ್ರೆ ರೂಪುಗೊಂಡಿದೆ. 15 ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯುತ್ತಿರುವ ಈ ಸಂದರ್ಭದಲ್ಲಿ ಕನ್ನಡ ಚಿತ್ರರಂಗದ ತೊಂಬತ್ತು ಹಾಗೂ ಸುವರ್ಣ ಕರ್ನಾಟಕ-50 ಸಂಭ್ರಮಕ್ಕೂ ರಾಜ್ಯ ಸರ್ಕಾರ ಹಾಗೂ ಚಲನಚಿತ್ರ ಅಕಾಡೆಮಿ ಮುಂದಾಗಿರುವುದು ಸ್ವಾಗತಾರ್ಹ. ಈ ಕಿರುಪರಿಚಯ ಹೊತ್ತಿಗೆ ಸಮಗ್ರವಲ್ಲ. ಇತಿಹಾಸದತ್ತ ಒಂದು ನೋಟವಷ್ಟೇ.

**ಗಂಗಾಧರ ಮೊದಲಿಯಾರ್**

*ಸಂಪಾದಕ*

ಕನ್ನಡ ಚಲನಚಿತ್ರ ಸಾಧನೆಗಳ ಪರ್ವ



# ಇತಿಹಾಸ ಸೃಷ್ಟಿಸಿದ ವರ್ಷ

ಕನ್ನಡ ಚಿತ್ರರಂಗಕ್ಕೆ ಈಗ ೯೦. ಕನ್ನಡಿಗರು ಹೆಮ್ಮೆ ಪಡುವಂತಹ ಸಾಧನೆ. ಈಗ ಇತರ ಚಿತ್ರರಂಗದಲ್ಲಿ ಕುತೂಹಲವಿದೆ. ಸ್ಯಾಂಡಲ್‌ವುಡ್ ತಯಾರಿಕೆ ಎಂದರೆ ಅದರಲ್ಲಿ ಏನೋ ಒಂದು ವಿಶೇಷವಿರುತ್ತದೆ ಎನ್ನುವುದು ದೇಶದಾದ್ಯಂತದ ಅಭಿಪ್ರಾಯವಾಗಿದೆ. ಕನ್ನಡ ಚಲನಚಿತ್ರಗಳ ಬಿಡುಗಡೆಗೆ ಚಿತ್ರಮಂದಿರಗಳೇ ದೊರಕದ ಪರಿಸ್ಥಿತಿಯಿಂದ ಇಂದು ಏಕಕಾಕಕ್ಕೆ ದೇಶ ವಿದೇಶಗಳ ಸಾವಿರಾರು ಚಿತ್ರಮಂದಿರಗಳಲ್ಲಿ ಬಿಡುಗಡೆ ಕಾಣುತ್ತಿದೆ.

ಅಖಂಡ ಕರ್ನಾಟಕದಲ್ಲಿ ಸಿನಿಮಾ ಪರಂಪರೆ ಆರಂಭವಾಗಿ ೯೦ ವರ್ಷ ಕಳೆದನಂತರ ಅದರ ಸಿಂಹಾವಲೋಕನದತ್ತ ಹೊರಳಿದರೆ ಅಲ್ಲಿ ನಮಗೆ ಕಾಣುವುದೆಲ್ಲಾ ಬಂಗಾರದ ಬೆಳೆ. ಕನ್ನಡನಾಡಿನ ಸಾಂಸ್ಕೃತಿಕ ಸಂಪತ್ತು ಅದು.

ಇಂದಿನ ಕನ್ನಡ ಚಿತ್ರರಂಗದ ಸಾಧನೆ ಬಗ್ಗೆ ನಾವು ಸ್ವಲ್ಪ ಹೆಮ್ಮೆಯಿಂದ ಮಾತನಾಡೋಣ. ೨೦೧೮ ರಲ್ಲಿ ಕನ್ನಡ ಚಿತ್ರರಂಗದಲ್ಲಿ ಸದ್ದಿಲ್ಲದೆ ಒಂದು ದೊಡ್ಡ ಬೆಳವಣಿಗೆ ಆರಂಭವಾಗಿತ್ತು. ವಿಜಯ್ ಕಿರಂಗದೂರ್ ನಿರ್ಮಾಣದ, ಪ್ರಶಾಂತ್ ನೀಲ್ ನಿರ್ದೇಶನದ "ಕೆ.ಜಿ.ಎಫ್." ಎಂಬ ಚಿತ್ರ ಇಡೀ ಚಿತ್ರರಂಗದ ದಿಕ್ಕನ್ನೇ ಬದಲಿಸುವ ಚಿತ್ರವಾಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಬಹು ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ, ಅದುವರೆಗೆ ಚಿತ್ರರಂಗದಲ್ಲಿನ ಅತಿ ದೊಡ್ಡ ಬಜೆಟ್‌ನ ಚಿತ್ರವಾಗಿತ್ತು. ಕೆಜಿಎಫ್‌ಗಾಗಿ ನಿರ್ಮಿಸಿದ ಬೃಹತ್‌ಸೆಟ್‌ಗಳು, ವರ್ಷಕಾಲದ ಚಿತ್ರೀಕರಣ, ನಾಯಕ ನಟ ಯಶ್ ಅವರ ವಿಭಿನ್ನ ಗೆಟಪ್, ಕತ್ತಲೆ ಬೆಳಕಿನ ಕ್ಯಾಮರಾ ಕೈ ಚಳಕ ಸೃಷ್ಟಿಸಿದ ಭುವನ್‌ಗೌಡ, ಮುಂಬೈನಲ್ಲಿ ಕತೆಯ ಕೆಲವು ಭಾಗ ಸಾಗುವ ರೀತಿ, ಎಲ್ಲವೂ ಚಿತ್ರದ ಗುಣಮಟ್ಟವನ್ನು ಹಾಲಿವುಡ್ ಚಿತ್ರಗಳ





ಗುಣಮಟ್ಟದ ಹತ್ತಿರಕ್ಕೆ ತಂದು ನಿಲ್ಲಿಸಿತ್ತು. 2018 ರ ಡಿಸೆಂಬರ್‌ನಲ್ಲಿ ಅಮೆರಿಕಾದಲ್ಲಿ ಪ್ರಥಮ ಪ್ರದರ್ಶನ ಕಂಡ ನಂತರ ಕರ್ನಾಟಕದಲ್ಲಿ ಚಿತ್ರ ಬಿಡುಗಡೆಯಾಯಿತು. ಚಿತ್ರಕ್ಕೆ ಸಿಕ್ಕ ಯಶಸ್ಸು, ಬೆಂಬಲ ಕೆ.ಜಿ.ಎಫ್.–2 ನಿರ್ಮಾಣಕ್ಕೆ ಪ್ರೇರಣೆಯಾಯಿತು. ಈ ಚಿತ್ರವನ್ನು ವ್ಯವಸ್ಥಿತವಾಗಿ ವಿಶ್ವದಾದ್ಯಂತ ಬಿಡುಗಡೆಯಾಗಿ, ತಾಂತ್ರಿಕವಾಗಿ ವಿಭಿನ್ನ ನಿರ್ಮಾಣವಾಗಿದ್ದ "ಕೆ.ಜಿ.ಎಫ್.–2" ಜಾಗತಿಕ ಸಿನಿಮಾ ಲೋಕದ ಗಮನವನ್ನು ಸೆಳೆಯಿತು.

ಈ ಚಿತ್ರವನ್ನು ಪ್ಯಾನ್ ಇಂಡಿಯಾ ಕಲ್ಪನೆಗೆ ರೂಪಿಸುವ ಆಲೋಚನೆ ನಿರ್ದೇಶಕರಿಗೆ ಬಂದಿತು. ಭಾರತೀಯ ಚಿತ್ರರಂಗ ಆ ವೇಳೆಗೆ ಡಿಜಿಟಲ್‌ಯುಗ ಪ್ರವೇಶಿಸಿಯಾಗಿತ್ತು. ತೆಲುಗಿನಲ್ಲಿ ಎಸ್. ಎಸ್. ರಾಜಮೌಳಿ ನಿರ್ದೇಶನದ "ಬಾಹುಬಲಿ" 2015 ರಲ್ಲಿ ಇಡೀ ಭಾರತೀಯ ಚಿತ್ರರಂಗದಲ್ಲೇ ಸಂಚಲನ ಮೂಡಿಸಿತ್ತು. ಭಾರತದಲ್ಲೇ ಅತಿ ಹೆಚ್ಚುಹಣ ಸಂಗ್ರಹಿಸಿದ ಚಿತ್ರವೆನಿಸಿತು. ಎಲ್ಲ ಭಾಷೆಗಳಲ್ಲೂ ತೆರೆಕಂಡು, ದೇಶವಿದೇಶಗಳಲ್ಲಿ ಜೈತ್ರಯಾತ್ರೆ ಕೈಗೊಂಡು, ದಾಖಲೆ ಸೃಷ್ಟಿಸಿತು. ಅದನ್ನು ಮೀರಿಸುವಂತೆ ಕೆ.ಜಿ.ಎಫ್.–2 ಬಹುತೇಕ ಎಲ್ಲ ಭಾಷೆಗಳಲ್ಲಿ ಡಬ್‌ಆಗಿ, ಭಾರತದಾದ್ಯಂತ ಬಿಡುಗಡೆಯಾಗಿ ಕನ್ನಡದ ಚಿತ್ರವೊಂದು ಈ ಪ್ರಮಾಣದಲ್ಲಿ ಬೆಳೆಯಬಹುದು ಎಂಬುದನ್ನು ತೋರಿಸಿಕೊಟ್ಟಿತು. ಕೆ.ಜಿ.ಎಫ್–2 ಚಿತ್ರದ ಯಶಸ್ಸು, ಪ್ಯಾನ್ ಇಂಡಿಯಾ ಕಲ್ಪನೆಯಲ್ಲಿ ಚಲನಚಿತ್ರಗಳನ್ನು ನಿರ್ಮಿಸುವ ನಿರ್ಮಾಪಕರಿಗೆ




ಹೊಸ ಹಾದಿಯನ್ನು ತೋರಿಸಿಕೊಟ್ಟಿತು. ನಾಯಕ ನಟ ಯಶ್ ಅವರಿಗೆ ದೊರೆತ ಜನಪ್ರಿಯತೆ, ಕನ್ನಡ ಸಿನಿಮಾಗಳ ವಸ್ತು ನಿರೂಪಣಾ ವಿಧಾನ ಇವೆಲ್ಲಾ ಕನ್ನಡ ಚಿತ್ರರಂಗದ ಮಾರುಕಟ್ಟೆಯನ್ನು ವಿಸ್ತರಿಸಲು ಕಾರಣವಾಯಿತು.

ಇದೇ ಹಾದಿಯಲ್ಲಿ "ಕಾಂತಾರ" ಚಲನಚಿತ್ರ ಕೂಡ ವಿಶ್ವದಾದ್ಯಂತ ಯಶಸ್ವಿಯಾದ ಚಿತ್ರ. ರಿಷಬ್‌ಶೆಟ್ಟಿ ಅವರ ಅಭಿನಯ ಶೈಲಿ, ಪ್ರಾದೇಶಿಕ ವಸ್ತು, ಜನಪದ ನಂಬಿಕೆಗಳ ಸುತ್ತ, ಅರಣ್ಯ ಸಂರಕ್ಷಣೆಯ ಸಾಮಾಜಿಕ ಸಂದೇಶ ಇವೆಲ್ಲಾ ಪ್ರೇಕ್ಷಕರಿಗೆ ಹೊಸ ಅನುಭವ ನೀಡಿದವು. ರಿಷಬ್‌ಶೆಟ್ಟಿ ನಿರ್ದೇಶಕರಾಗಿ ಯಶಸ್ವಿಯಾಗಿದ್ದರು. 2023 ರಲ್ಲಿ ಕನ್ನಡ ಚಿತ್ರರಂಗಕ್ಕೆ ದೊರೆತ ಅದ್ಭುತ ಯಶಸ್ಸು ಇದು. ಈ ಚಿತ್ರವೂ ಕೂಡ ಸಮುದ್ರದಾಚೆಗೂ ಕನ್ನಡದ ಕೀರ್ತಿಯನ್ನು ತೆಗೆದುಕೊಂಡು ಹೋಯಿತು. ಹೀಗಾಗಿ ಕನ್ನಡ ಚಿತ್ರರಂಗ ಭಾರತೀಯ ಚಿತ್ರರಂಗದಲ್ಲಿ ಮಹತ್ವ ಪಡೆದುಕೊಂಡಿತು.


ಈ ಎರಡು ಚಿತ್ರಗಳು ಹಾಕಿಕೊಟ್ಟ ಬುನಾದಿಯ ಮೇಲೆ ಕನ್ನಡ ಚಿತ್ರರಂಗದಲ್ಲಿ ಪಾನ್‌ಇಂಡಿಯಾ ಚಲನಚಿತ್ರಗಳ ಪೈಪೋಟಿ ಆರಂಭವಾಗಿದೆ. ಕನ್ನಡ ಚಿತ್ರರಂಗದ ಎಲ್ಲ ನಾಯಕನಟರೂ ಕೂಡ ಈಗ ಅಂತಹ ಚಿತ್ರ ನಿರ್ಮಾಣದತ್ತ ಮನಸ್ಸು ಮಾಡಿರುವುದರಿಂದ ಕನ್ನಡ ಚಿತ್ರರಂಗದ ಮಾರುಕಟ್ಟೆ ಮೌಲ್ಯ ತಾನಾಗಿಯೇ ಏರಿಕೆ ಕಂಡಿದೆ. ದರ್ಶನ್ ಅಭಿನಯದ “ರಾಬರ್ಟ್” ಧ್ರುವಸರ್ಜಾ ಅಭಿನಯದ “ಪೊಗರು” ಚಲನಚಿತ್ರಗಳು ನಾಲ್ಕು ಭಾಷೆಗಳಲ್ಲಿ ಬಿಡುಗಡೆಯಾದವು. ಅಲ್ಲದೆ ವಿದೇಶಿ ಮಾರುಕಟ್ಟೆಯಲ್ಲೂ ಬೇಡಿಕೆ ಕಂಡಿತು. ಅದೇ ರೀತಿ ಸುದೀಪ್ ಅವರ ಅಭಿನಯದ “ವಿಕ್ರಾಂತ್‌ರೋಣ”, ರಕ್ಷಿತ್‌ಶೆಟ್ಟಿ ಅಭಿನಯದ “ಚಾರ್ಲಿ 777” ಚಿತ್ರಗಳು ಜಾಗತಿಕವಾಗಿ ಮೆಚ್ಚುಗೆ ಪಡೆದಿವೆ. ಶಿವರಾಜ್‌ಕುಮಾರ್ ಅಭಿನಯದ ವೇದ, ಘೋಸ್ಟ್ ಚಿತ್ರಗಳು ಕೂಡ ಬಹುಭಾಷಿಕರನ್ನು ಆಕರ್ಷಿಸಿದೆ. ಜನಪ್ರಿಯ ನಟರ ಚಿತ್ರಗಳು ಒಂದೇ ಭಾಷೆಗೆ ಸೀಮಿತವಾಗಿರುವುದಿಲ್ಲ. ಉಪೇಂದ್ರ ಅಭಿನಯದ ಚಂದ್ರು ನಿರ್ದೇಶನದ “ಕಬ್ಜ” ಕೂಡ ಪ್ಯಾನ್‌ಇಂಡಿಯಾ ಚಿತ್ರವಾಗಿ ತೆರೆಕಂಡಿತು. ಪುನೀತ್ ಅಭಿನಯದ ಕೊನೆಯ ಚಲನಚಿತ್ರ “ಜೇಮ್ಸ್” ಕೂಡ ಬಹುಭಾಷೆಗೆ ಡಬ್ ಆಗಿ ತೆರೆಕಂಡಿತು. ವಿಜಯ್, ಶ್ರೀಮುರುಳಿ, ಗಣೇಶ್ ಸೇರಿದಂತೆ ಜನಪ್ರಿಯ ನಾಯಕರ ಚಿತ್ರಗಳು ಪ್ಯಾನ್ ಇಂಡಿಯಾ ಮಟ್ಟದಲ್ಲಿ ತಯಾರಾಗುತ್ತಿವೆ. ಆಧುನಿಕ ತಂತ್ರಜ್ಞಾನ, ಡಿಜಿಟಲ್, ಮೊದಲಾದವುಗಳ ಪ್ರಯೋಗದಲ್ಲಿ ನಾಗಾಲೋಟದಲ್ಲಿರುವ ಕನ್ನಡ ಚಿತ್ರರಂಗದ ಭವಿಷ್ಯ ಉಜ್ವಲವಾಗಿರುವುದು ಗೋಚರವಾಗುತ್ತಿದೆ. ಸಂತೋಷ್ ಆನಂದರಾಮ್(ರಾಜಕುಮಾರ), ಹೇಮಂತರಾವ್ (ಗೋಧಿ ಬಣ್ಣ ಸಾಧಾರಣ ಮೈಕಟ್ಟು, ಸಪ್ತ ಸಾಗರದಾಚೆ, ಕವಲು ದಾರಿ), ಪವನ್‌ಕುಮಾರ್ ( ಲೂಸಿಯಾ) ರಾಜ್‌ಬಿ.ಶೆಟ್ಟಿ (ಸ್ವಾತಿ ಮುತ್ತಿನ ಮಳೆಯೇ), ಪ್ರೇಮ್, ಹರಿಕೃಷ್ಣ, ತರುಣ್ ಸುಧೀರ್ ಸೇರಿದಂತೆ ಬಹಳಷ್ಟು ಪ್ರತಿಭಾವಂತ ನಿರ್ದೇಶಕರುಗಳು ಪ್ರಯೋಗಶೀಲರಾಗಿದ್ದಾರೆ.





# ಹಿಂತಿರುಗಿ ನೋಡಿದಾಗ

ಕನ್ನಡ ಚಿತ್ರರಂಗದ ಇಂದಿನ ಇಂತಹ ವೈಭವಕ್ಕೆ ಸಾವಿರಾರು ಜನರ ಶ್ರಮವಿದೆ. ಜೊತೆಗೆ ನಮ್ಮ ಸಂಸ್ಕೃತಿ ಎಷ್ಟು ವೈಭವೋಪೇತವಾಗಿದೆಯೋ, ಕನ್ನಡ ಚಿತ್ರರಂಗದ ಸಂಸ್ಕೃತಿಯೂ ಅಷ್ಟೇ ಗಟ್ಟಿಯಾಗಿದೆ. ಚಿತ್ರರಂಗದ ಇತಿಹಾಸದುದ್ದಕ್ಕೂ ನಾವು ನೋಡುವುದು ಸೃಜನಶೀಲತೆ, ಸದಭಿರುಚಿ, ಕಲಾತ್ಮಕ ಚೌಕಟ್ಟು. ಇದು ನಮ್ಮ ಸಾಹಿತ್ಯ, ಸಂಸ್ಕೃತಿ, ಪರಂಪರೆಯ ಭಾಗವೇ ಎನ್ನಬಹುದು. ಈ ಚೌಕಟ್ಟಿನಲ್ಲೇ ನಮ್ಮ ಕನ್ನಡ ಸಿನಿಮಾ ೯೦ ವರ್ಷಗಳಿಂದ ನಾಡು ನುಡಿಯ ಪ್ರಬಲ ವಕ್ತಾರನ ಪಾತ್ರ ವಹಿಸುತ್ತಾ ಮುಂದುವರೆದಿದೆ. ಪರಭಾಷಾ ಚಿತ್ರಗಳ ಪೈಪೋಟಿ, ಪರಭಾಷಾ ನಟನಟಿಯರ ಸವಾಲು, ಪೈರಸಿ, ಚಿತ್ರಮಂದಿರಗಳ ಕೊರತೆ, ಮೊದಲಾದ ಅನ್ಯಾಕ್ರಮಣಗಳಿಗೆ ಅಂಜದೆ, ಅಳುಕದೆ ಆದರೆ ಪ್ರತಿಸ್ಪರ್ಧೆಯನ್ನೂ ಬಿಡದೆ ತನ್ನ ಮುಡಿಗೆ ಸಾಧನೆಗಳ ಗರಿಯನ್ನು ಪೇರಿಸುತ್ತಾ ಹೋಗಿರುವ ಕನ್ನಡ ಚಿತ್ರರಂಗದ ಸಾಧನೆ ಕಡಿಮೆ ಏನೂ ಇಲ್ಲ. ನಾಡು ನುಡಿಯ ಅಭಿನದ ತಂತು ಕನ್ನಡ ಸಿನಿಮಾ ರಂಗವನ್ನು ಭದ್ರನೆಲೆಯಲ್ಲಿ ನಿಲ್ಲಿಸಿದೆ. ಹೀಗಾಗಿ ಕನ್ನಡ ಚಿತ್ರರಂಗ ಎಷ್ಟೋ ಕಾಡ್ಗಿಚ್ಚುಗಳಿಂದ ಪಾರಾಗಿ ನಿಂತಿದೆ. ವೈಭವವನ್ನು ಸಾರುತ್ತಿದೆ. ಈ ಸಂಭ್ರಮದಲ್ಲಿ ಕನ್ನಡ ಸಿನಿಮಾ ಸಿಂಹಾವಲೋಕನ ಮಾಡಿದರೆ ಅಲ್ಲಿ ಕಾಣುವುದೆಲ್ಲಾ ಬಂಗಾರ ಬೆಳೆ.







# ವಾಕ್ಚಿತ್ರದ ಉದಯಕಾಲ

ಇದೊಂದು ಅಮೃತಗಳಿಗೆ. 03-03-1934 ರಂದು ಕನ್ನಡದ ಮೊದಲ ವಾಕ್ಚಿತ್ರ "ಸತಿ ಸುಲೋಚನ" ಬಿಡುಗಡೆಯ ದಿನ. ೯೦ ವರ್ಷಗಳ ಹಿಂದೆ ಬೆಂಗಳೂರಿನ ಕೃಷ್ಣ ರಾಜೇಂದ್ರ ಮಾರ್ಕೆಟ್ ಎದುರು ಇರುವ ಗಯಟಿ ಎನ್ನುವ ಒಂದು ಹಾಲ್.ಕುಸ್ತಿ, ಮನರಂಜನೆ ಮೊದಲಾದವು ನಡೆಯುತ್ತಿದ್ದ ಕೇಂದ್ರವದು. ಅಂದು ಅಲ್ಲೊಂದು ದೊಡ್ಡ ವಿಸ್ಮಯ. ಜಾತ್ರೆಯ ಸಂಭ್ರಮ. ಸುತ್ತಮುತ್ತಲ ಹಳ್ಳಿಗಳಿಂದ ಜನ ಎತ್ತಿನಗಾಡಿಗಳಲ್ಲಿ ಬಂದು ಅಲ್ಲಿ ಸೇರುತ್ತಿದ್ದರು. ದೊಡ್ಡಣ್ಣ ಹಾಲ್ ಎಂದು ಹೆಸರು ಬದಲಿಸಿದ ಚಿತ್ರಮಂದಿರದಲ್ಲಿ ಕನ್ನಡದ ಮೊದಲ ವಾಕ್ಚಿತ್ರ "ಸತಿ ಸುಲೋಚನ" ಬಿಡುಗಡೆಯಾದಾಗ ಕನ್ನಡದ ಪ್ರೇಕ್ಷಕರು ಮೂಕವಿಸ್ಮಿತರಾದ ಬಗೆ ಇದು.





1931 ರಲ್ಲಿ ಮೂಕಿ ಚಿತ್ರಯುಗ ಮುಕ್ತಾಯಗೊಂಡು, ಹಿಂದಿ ಭಾಷೆಯ "ಆಲಂ ಆರಾ" ಮೊದಲ ವಾಕ್ಚಿತ್ರವಾಗಿ ತೆರೆಕಂಡಿತು. ಎರಡು ವರ್ಷಗಳ ನಂತರ ಕರ್ನಾಟಕದಲ್ಲೂ ಅಂತಹ ಒಂದು ಕ್ರಾಂತಿಗೆ ನಾಂದಿ ಆದಾಗ ಒಂದು ರೀತಿಯ ಪುಳಕ. ಕನ್ನಡನಾಡಿನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಇದು ಸಂಚಲನ ಮೂಡಿಸಿತ್ತು.

ಅದುವರೆಗೆ ರಂಗಭೂಮಿ ವೈಭವದಿಂದ ಮೆರೆಯುತ್ತಿತ್ತು. ರಂಗದ ಮೇಲೆ, ಚಲಿಸುವ ಸೀನರಿಗಳು, ಪ್ರಾಣಿಗಳು ಲೈಟ್‌ಗಳು ಮಿಂಚುವುದನ್ನೇ ಅಚ್ಚರಿಯಿಂದ ನೋಡುತ್ತಿದ್ದ ಪ್ರೇಕ್ಷಕರು ಮೂಕಿ ಚಿತ್ರಗಳ ಯುಗ ಆರಂಭವಾದಾಗ ರೋಮಾಂಚನಗೊಂಡಿದ್ದರು 1934 ರವರೆಗೆ ಕರ್ನಾಟಕದಲ್ಲಿ ತಯಾರಾದ 175 ಮೂಕಿ ಚಿತ್ರಗಳು ಪ್ರೇಕ್ಷಕರಿಗೆ ಚಲಿಸುವ ದೃಶ್ಯಗಳ ಮೂಲಕ ಬಯೋಸ್ಕೋಪಿನ ಖುಷಿ ತೋರಿಸಿಕೊಟ್ಟಿದ್ದವು. "ಸತಿ ಸುಲೋಚನಾ" ದ ಮೂಲಕ ತೆರೆಯ ಮೇಲೆ ವಾಗ್ವಾದ, ಯುದ್ಧ, ಹಾಡು, ಓಟ, ಆಟಗಳ ಚಮತ್ಕಾರಗಳು ಮೂಡಿದವು. ಜನರಿಗೆ ಸಖೇದಾಶ್ಚರ್ಯ. ಮೊದಲನೆಯ ವಾಕ್ಚಿತ್ರದಲ್ಲಿ ಸುಲೋಚನಳ ದುರಂತ ಕಂಡು ಜನ ಅತ್ತರು. ಯುದ್ಧದ ಆರ್ಭಟಕ್ಕೆ ಓಡಿದರು. 90 ವರುಷಗಳ ಹಿಂದೆ ಸಿನಿಮಾ ಬಗ್ಗೆ ಇದ್ದ ಕುತೂಹಲ ಪ್ರೇಕ್ಷಕರಿಗೆ ಇಂದೂ ಅದೇ ರೀತಿ ಇರುವುದೇ ಸಿನಿಮಾದ ಮ್ಯಾಜಿಕ್.

"ಸತಿ ಸುಲೋಚನಾ" ಚಿತ್ರದ ಮೂಲಕ ಎಂ.ವಿ.ಸುಬ್ಬಯ್ಯ ನಾಯ್ಡು ಕನ್ನಡ ಚಿತ್ರರಂಗದ


ಮೊದಲ ನಾಯಕನಟರಾದರು. ಆರ್.ನಾಗೇಂದ್ರರಾವ್ ಅವರು ಮೊದಲ ವಾಕ್ಚಿತ್ರದ ನಟರೂ, ಸಂಗೀತ ನಿರ್ದೇಶಕರೂ ಆಗಿ ಇತಿಹಾಸದಲ್ಲಿ ದಾಖಲಾದರು. ವೈ.ವಿ.ರಾವ್ ಈ ಚಿತ್ರದ ನಿರ್ದೇಶಕರು. ಸತಿ ಸುಲೋಚನ ತೆರೆಗೆ ಬಂದ ಮೊದಲ ಕನ್ನಡ ಚಿತ್ರ. ಆದರೆ ಇದಕ್ಕೂ ಮುಂಚೆ ತಯಾರಿಕೆ ಆರಂಭಿಸಿದ್ದು "ಭಕ್ತಧ್ರುವ" ಇದರ ಚಿತ್ರೀಕರಣ 1934 ರ ಆರಂಭದಲ್ಲಿ. ನಾಟಕ ರಚನೆಯಲ್ಲಿ ಅಪಾರ ಸಾಧನೆ ಮಾಡಿರುವ ಬೆಳ್ಳಾವೆ ನರಹರಿ ಶಾಸ್ತ್ರಿಗಳು ಬರೆದ ಪೌರಾಣಿಕ ನಾಟಕವೇ ಈ ಮೊದಲ ಚಿತ್ರಕ್ಕೆ ವಸ್ತು. ಹೀಗೆ ಎರಡು ಪೌರಾಣಿಕ ಚಿತ್ರಗಳೊಡನೆ 1934 ರಲ್ಲಿ ಕನ್ನಡದ ವಾಕ್ಚಿತ್ರ ಪರಂಪರೆ ಆರಂಭವಾಯಿತು. ಸತಿ ಸುಲೋಚನ, ಭಕ್ತ ಧ್ರುವ ಗಳ ನಂತರ ಬಿಡುಗಡೆಯಾದ "ಸದಾರಮೆ" ಕನ್ನಡದ ಮೂರನೇ ಚಿತ್ರ (1935). ಆ ವೇಳೆಗಾಗಲೇ ಕರ್ನಾಟಕದಾದ್ಯಂತ ಜನಪ್ರಿಯವಾಗಿದ್ದ ಗುಬ್ಬಿ ಕಂಪನಿಯ ಗುಬ್ಬಿ ವೀರಣ್ಣ ಅವರು, ತಮ್ಮ ಕಂಪನಿಯಲ್ಲಿ ಆಡುತ್ತಿದ್ದ ಜನಪ್ರಿಯ ನಾಟಕ ಸದಾರಮೆಯನ್ನೇ ಚಲನಚಿತ್ರವಾಗಿಸಿದರು. ರಾಜಾ ಚಂದ್ರಶೇಖರ್ ಈ ಚಿತ್ರವನ್ನು ನಿರ್ದೇಶಿಸಿದ್ದರು. ಈ ಚಿತ್ರ ಜಾನಪದ ಚಿತ್ರಗಳ ವೈಶಿಷ್ಟ್ಯವನ್ನು ಮೆರೆಯಿತು.

ಹೀಗೆ ಅರ್ಥಪೂರ್ಣವಾಗಿ ಆರಂಭವಾದ ಸಿನಿಮಾ, 1936ರ ವೇಳೆಗೆ ಮತ್ತೊಂದು ಮಜಲು ಪ್ರವೇಶಿಸಿತು. "ಸಂಸಾರ ನೌಕ" ಎಂಬ ಸಾಮಾಜಿಕ ಚಿತ್ರ ಕನ್ನಡದ ಪ್ರಥಮ ಸಾಮಾಜಿಕ ಚಿತ್ರ ಎಂಬ ದಾಖಲೆ ಬರೆಯಿತು. ಎಚ್. ಎಲ್.ಎನ್.ಸಿಂಹ ಅವರೇ ಬರೆದ ನಾಟಕ "ಸಂಸಾರ ನೌಕ". ಅದೇ ವರ್ಷ ತೆರೆಗೆ ಬಂದ ಮತ್ತೊಂದು ಚಿತ್ರ "ಚಿರಂಜೀವಿ". ದೇವುಡು ನರಸಿಂಹ ಶಾಸ್ತ್ರಿಗಳು ಈ ಚಿತ್ರದಲ್ಲಿ ಅಭಿನಯಿಸಿದರು. ಹೀಗೆ ಆರಂಭವಾದ ಪೌರಾಣಿಕ, ಸಾಮಾಜಿಕ ಚಲನಚಿತ್ರಗಳು ಜನರಲ್ಲಿ ದಿನೇದಿನೇ ಕನ್ನಡ ಚಲನಚಿತ್ರಗಳ ಬಗ್ಗೆ ಆಸಕ್ತಿ ಹುಟ್ಟಿಸಿದವು. ಸ್ವಾತಂತ್ರ್ಯ ಬರುವವರೆಗೆ ಕನ್ನಡದಲ್ಲಿ ತಯಾರಾದ ಚಿತ್ರಗಳ ಸಂಖ್ಯೆ 16 ಆ ವೇಳೆಗಾಗಲೆ ಕನ್ನಡ ಚಿತ್ರರಂಗದಲ್ಲಿ ಎಲ್ಲ ದಾಖಲೆಗಳೂ ಸ್ಥಾಪಿತವಾಗಿದ್ದವು.


ರಂಗಭೂಮಿಯಲ್ಲಿ ಪ್ರಖ್ಯಾತರಾಗಿದ್ದ ಗುಬ್ಬಿ ವೀರಣ್ಣ, ಆರ್.ನಾಗೇಂದ್ರರಾವ್, ಕನ್ನಡ ಚಿತ್ರರಂಗದ ಮೊದಲ ನಾಯಕನಟ ಎಂ.ವಿ.ಸುಬ್ಬಯ್ಯ ನಾಯ್ಡು, ಬಿ.ಆರ್.ಪಂತಲು, ಕೆ.ಹಿರಣ್ಣಯ್ಯ, ಜಿ.ಆರ್.ರಾಮಯ್ಯ, ಟಿ.ಚೌಡಯ್ಯ ಮೊದಲಾದ



ಗುಬ್ಬಿ ವೀರಣ್ಣ



ಆರ್. ನಾಗೇಂದ್ರ ರಾವ್




ಎಚ್. ಎಲ್.ಎನ್.ಸಿಂಹ




ಬಿ.ಆರ್.ಪಂತಲು



ಟಿ.ಚೌಡಯ್ಯ



ವೈ. ವಿ. ರಾವ್



ಟಿ.ಎನ್.ಬಾಲಕೃಷ್ಣ



ಕೆ. ಹಿರಣ್ಣಯ್ಯ




ಅನಕೃ

ಘಟಾನುಘಟಿಗಳೆಲ್ಲಾ ಚಿತ್ರರಂಗದಲ್ಲಿ ತೊಡಗಿಸಿಕೊಂಡು ಒಂದಲ್ಲಾ ಒಂದು ಪ್ರಯೋಗಗಳಲ್ಲಿ ನಿರತರಾಗಿದ್ದರು. ಕಾದಂಬರಿಕಾರರಾದ ಅನಕೃ ಅವರೂ ಕೂಡ "ಜೀವನ ನಾಟಕ" ಸಿನಿಮಾಕ್ಕೆ ಚಿತ್ರಕಥೆ, ಸಂಭಾಷಣೆ ಬರೆಯುವ ಮೂಲಕ ಚಿತ್ರರಂಗ ಪ್ರವೇಶಿಸಿದ್ದರು. ಕನ್ನಡ ಚಿತ್ರರಂಗದ ಮೊದಲ ಮಹಿಳಾ ನಿರ್ಮಾಪಕಿ ಎಂ.ವಿ.ರಾಜಮ್ಮ"ರಾಧಾರಮಣ" ತಯಾರಿಸುವ ಮೂಲಕ ಚಿತ್ರರಂಗ ಪ್ರವೇಶಿಸಿದ್ದರು. ಹಾಸ್ಯನಟ ಟಿ.ಎನ್.ಬಾಲಕೃಷ್ಣ, ಜಿ.ವಿ.ಅಯ್ಯರ್ ಚಿತ್ರರಂಗ ಪ್ರವೇಶಿದ್ದರು.

1947 ರಿಂದ 1954 ಏಳು ವರ್ಷಗಳ ಕಾಲವನ್ನು ಚಿತ್ರರಂಗದಲ್ಲಿ ಬೆಳವಣಿಗೆಯ ಪರ್ವಕಾಲ ಎಂದು ಹೇಳಬಹುದು. ಏಳು ವರ್ಷಗಳಲ್ಲಿ ಬಿಡುಗಡೆಯಾಗಿರುವ ಇಪ್ಪತ್ತನಾಲ್ಕು ಚಿತ್ರಗಳು ಕೂಡ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ, ಮೈಲುಗಲ್ಲುಗಳಾಗಿಯೇ ಉಳಯುತ್ತದೆ. ಮಹಾತ್ಮ ಪಿಕ್ಚರ್ಸ್, ಆರ್. ಎನ್. ಆರ್.ಪಿಕ್ಚರ್ಸ್, ಪಂಪಾ ಪಿಕ್ಚರ್ಸ್, ಚಿತ್ರ ಸಂಸ್ಥೆಗಳು ಕನ್ನಡ ಚಿತ್ರರಂಗದಲ್ಲಿ ಗುಣಮಟ್ಟದ ಚಿತ್ರಗಳನ್ನು ನಿರ್ಮಿಸಲು ಶ್ರಮಿಸಿದವು. 1947ರಲ್ಲೇ ಆರ್.ನಾಗೇಂದ್ರರಾವ್ ಅವರು ನಿರ್ಮಿಸಿದ ಮಹಾತ್ಮ ಕಬೀರ್ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಏಕತೆ ಸಾರುವ ಸಂದೇಶವಿರುವ ಸಾಮಾಜಿಕ ಕಳಕಳಯ ಚಿತ್ರವಾಗಿ ನಮೂದಿಸಲಾಗುವ ಚಿತ್ರ.

ಚಿತ್ರರಂಗದ ಆರಂಭದ ದಶಕಗಳಲ್ಲಿ ಸತತವಾಗಿ ಚಿತ್ರ ನಿರ್ಮಾಣದಲ್ಲಿ ತೊಡಗಿದ್ದ ಸಂಸ್ಥೆಗಳು ಕಾಲಾನಂತರ ಮರೆಯಾಗಿ ಹೋದವು. ಶೈಲಶ್ರೀ ಪ್ರೊಡಕ್ಷನ್ಸ್, ಪದ್ಮಿನಿ ಪಿಕ್ಚರ್ಸ್, ಆರ್.ಎನ್.ಆರ್, ಶ್ರೀಕಾಂತ್, ಮಹಾತ್ಮ ಪಿಕ್ಚರ್ಸ್ ಆರಂಭದ ದಿನಗಳಲ್ಲಿ ಸತತವಾಗಿ ಚಿತ್ರ ನಿರ್ಮಾಣದಲ್ಲಿ ತೊಡಗಿಕೊಂಡು ಕನ್ನಡ ಚಲನಚಿತ್ರಗಳಗೆ ಪ್ರೇಕ್ಷಕರನ್ನು ಸೃಷ್ಟಿಸಿದ ಸಂಸ್ಥೆಗಳು. ಉಳಿದ ಸಂಸ್ಥೆಗಳು ತೆರೆಮರೆಗೆ


ಶಂಕರ್ ಸಿಂಗ್


ಹುಣಸೂರು ಕೃಷ್ಣಮೂರ್ತಿ


ಕಣಗಾಲ್ ಪ್ರಭಾಕರ ಶಾಸ್ತ್ರೀ

ಸರಿದಿವೆ. ಮಹಾತ್ಮ ಪಿಕ್ಚರ್ಸ್ ಸಂಸ್ಥೆಯನ್ನು ಶಂಕರ್‌ಸಿಂಗ್ ಅವರ ಪುತ್ರ ಎಸ್.ವಿ. ರಾಜೇಂದ್ರಸಿಂಗ್ ಅವರು ಮುನ್ನಡೆಸುತ್ತಿದ್ದಾರೆ. ಕನ್ನಡ ಚಿತ್ರರಂಗ ಕರ್ನಾಟಕದಲ್ಲೇ ನೆಲೆ ಊರಬೇಕೆಂದು ಪಣ ತೊಟ್ಟಿದ್ದ ಶಂಕರ್‌ಸಿಂಗ್, ಮದರಾಸಿನಲ್ಲಿ ಎಲ್ಲರೂ ಚಿತ್ರೀಕರಣ ನಡೆಸುತ್ತಿದ್ದರೆ, ಮೈಸೂರಿನಲ್ಲೇ ಚಿತ್ರರಂಗ ನೆಲೆಸಬೇಕು ಎಂದು ಪಣತೊಟ್ಟು, ತಮ್ಮ ಎಲ್ಲ ಚಿತ್ರಗಳನ್ನೂ ಮೈಸೂರಿನಲ್ಲೇ ಚಿತ್ರೀಕರಿಸಿದರು. ಅದರಲ್ಲಿ ಯಶಸ್ವಿಯಾದರು. ಅವರದು ಸ್ಮರಣೀಯ ಸಾಧನೆ. ಈ ಸಂಸ್ಥೆಯ ಮೂಲಕ ಮೊದಲು ತಯಾರಾದ ಚಿತ್ರ "ಶ್ರೀ ಕೃಷ್ಣ ಲೀಲ" (1947), ಕಣಗಾಲ್ ಪ್ರಭಾಕರ ಶಾಸ್ತ್ರೀ ಅವರು ಗೀತೆ ರಚಿಸಿದ, ಹುಣಸೂರು ಕೃಷ್ಣಮೂರ್ತಿ ಅವರು ಸಾಹಿತ್ಯ ರಚಿಸಿದ ಮೊದಲ ಚಿತ್ರವಿದು. ದೊರೆ–ಭಗವಾನ್ ಛಾಯಾಗ್ರಾಹಕರಾಗಿ ಬೆಳ್ಳಿತೆರೆ ಪ್ರವೇಶಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ ಮೈಸೂರಿನ ನವಜ್ಯೋತಿ ಸ್ಟುಡಿಯೋದಲ್ಲಿ ಈ ಚಿತ್ರದ ಚಿತ್ರೀಕರಣ ನಡೆಯಿತು. ಆ ಸಮಯದಲ್ಲಿ ಪೌರಾಣಿಕ ಚಲನಚಿತ್ರಗಳನ್ನು ನಿರ್ಮಿಸುವ ನಿರ್ಮಾಪಕರು ಕೊಲ್ಲಾಪುರ ಇಲ್ಲವೇ ಮದ್ರಾಸಿಗೆ ಹೋಗಬೇಕಿತ್ತು. ಆದರೆ ಶಂಕರ್‌ಸಿಂಗ್ ಅವರು ಅದನ್ನೆಲ್ಲಾ ಮೈಸೂರಿನ ನವಜ್ಯೋತಿ ಹಾಗೂ ಪ್ರೀಮಿಯರ್ ಸ್ಟುಡಿಯೋದಲ್ಲೇ ಸಾಧ್ಯವಾಗಿಸಿದರು. 1949 ರಲ್ಲೇ ಶಂಕರ್‌ಸಿಂಗ್ ಅವರು ಕನ್ನಡದ ಮೊದಲ ಚಿತ್ರವಾದ "ನಾಗಕನ್ನಿಕಾ" ಚಿತ್ರವನ್ನು ನಿರ್ಮಿಸಿದರು. ಈ ಚಿತ್ರ ಶತದಿನೋತ್ಸವ ಆಚರಿಸಿ, ಕನ್ನಡ ಚಿತ್ರರಂಗದಲ್ಲಿ ನಿರ್ಮಾಪಕರಿಗೆ ಧೈರ್ಯ ಮೂಡಿಸಿತು. ಮಹಾತ್ಮ ಪಿಕ್ಚರ್ಸ್‌ಗೆ ಭದ್ರ ಬುನಾದಿ ಹಾಕಿದ ಚಿತ್ರವಿದು. ಈ ಚಿತ್ರದ ಯಶಸ್ಸಿನಿಂದ ಪ್ರೇರಿತರಾದ ಶಂಕರ್‌ಸಿಂಗ್, 1951 ರಲ್ಲಿ "ಜಗನ್ಮೋಹಿನಿ" ಎಂಬ ಚಿತ್ರವನ್ನು ನಿರ್ಮಿಸಿದರು. ಅದು ಕನ್ನಡ ಚಿತ್ರರಂಗದಲ್ಲಿ ಇತಿಹಾಸ ಸೃಷ್ಟಿಸಿತು. 36 ವಾರಗಳ ಕಾಲ ಈ ಚಿತ್ರ ದಾವಣಗೆರೆ ನಗರದಲ್ಲೇ ಸತತವಾಗಿ ಪ್ರದರ್ಶನಗೊಂಡು ದಾಖಲೆ ಸ್ಥಾಪಿಸಿತು. ಗ್ರಾಫಿಕ್‌ತಂತ್ರಜ್ಞಾನ ಬರುವುದಕ್ಕಿಂತ ಮುಂಚೆಯೇ ಶಂಕರ್‌ಸಿಂಗ್ ಅಂತಹ ಚಮತ್ಕಾರಗಳನ್ನು ತಮ್ಮ ಚಿತ್ರದಲ್ಲಿ ತಂದಿದ್ದರು ಎನ್ನುವುದು ಮಹತ್ವದ ವಿಷಯ.

ಮಹಾತ್ಮ ಪಿಕ್ಚರ್ಸ್ ಸಂಸ್ಥೆಯ ಮೂಲಕವೇ ಕನ್ನಡದ ವರನಟ ರಾಜ್‌ಕುಮಾರ್ ಅವರೂ ಬೆಳ್ಳಿತೆರೆ ಪ್ರವೇಶಿಸಿದರು. 1952 ರಲ್ಲಿ ಮಹಾತ್ಮ ಪಿಕ್ಚರ್ಸ್ ತಯಾರಿಸಿದ "ಶ್ರೀನಿವಾಸ ಕಲ್ಯಾಣ" ಚಿತ್ರದಲ್ಲಿ ಮುತ್ತುರಾಜ್ ಸಪ್ತಋಷಿಗಳಲ್ಲಿ ಒಬ್ಬರಾಗಿ ಕಾಣಿಸಿಕೊಂಡಿದ್ದರು. 1955 ರಲ್ಲಿ ಆಷಾಢ ಭೂತಿ ಮೂಲಕ ಬಿ.ಸರೋಜಾದೇವಿ ಅವರು ಚಿತ್ರರಂಗ ಪ್ರವೇಶಿಸಿದರು. 1947ರಲ್ಲಿ ತೆರೆಕಂಡ "ಚಂದ್ರಹಾಸ" ಉತ್ತರ ಕರ್ನಾಟಕ ಭಾಗದಲ್ಲಿ ತಯಾರಾಗಿ ಬಿಡುಗಡೆಯಾದ ಎರಡನೇ ಚಿತ್ರ.





ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಸ್ಮರಣೀಯ ಹೆಸರು ಆರ್.ನಾಗೇಂದ್ರರಾವ್ ಅವರದು. 1953 ರಲ್ಲಿ ಆರ್ ಎನ್ಆರ್ ಚಿತ್ರಸಂಸ್ಥೆ ಸ್ಥಾಪಿಸುವ ಮೂಲಕ ಕನ್ನಡ ಚಿತ್ರಗಳ ನಿರ್ಮಾಣ ಕಾರ್ಯಕ್ಕೆ ಚುರುಕು ತಂದವರು ಅವರು. "ಜಾತಕ ಫಲ" ಈ ಸಂಸ್ಥೆಯ ಚೊಚ್ಚಲ ಚಿತ್ರ. ಈ ಚಿತ್ರದ ಮೂಲಕವೇ ಖ್ಯಾತ ಹಿನ್ನೆಲೆ ಗಾಯಕ ಪಿ.ಬಿ.ಶ್ರೀನಿವಾಸ್ ಚಿತ್ರರಂಗ ಪ್ರವೇಶಿಸಿದರು. ಈ ಚಿತ್ರದ ಮೂಲಕವೇ ಛಾಯಾಗ್ರಾಹಕರಾಗಿ ಆರ್. ಎನ್. ಕೃಷ್ಣಪ್ರಸಾದ್, ಚಿತ್ರ ಸಾಹಿತಿಯಾಗಿ ಆರ್.ಎನ್.ಜಯಗೋಪಾಲ್ ಚಿತ್ರರಂಗ ಪ್ರವೇಶಿಸಿದರು. ಅವರ ಮತ್ತೊಬ್ಬ ಪುತ್ರ ಆರ್.ಎನ್.ಸುದರ್ಶನ್, 1964ರಲ್ಲಿ "ವಿಜಯನಗರದ ವೀರಪುತ್ರ" ಚಿತ್ರದ ಮೂಲಕ ನಾಯಕ ನಟರಾದರು.





ಐವತ್ತರ ದಶಕದಲ್ಲೇ ಕರ್ನಾಟಕದಲ್ಲಿ ಸ್ಟುಡಿಯೋಗಳ ಸ್ಥಾಪನೆಯ ಶಕೆ ಆರಂಭವಾಯಿತು. ಮೈಸೂರಿನಲ್ಲಿ ನವಜ್ಯೋತಿ ಸ್ಟುಡಿಯೋ ತಲೆ ಎತ್ತಿತು. ಅದಕ್ಕೆ ಮುನ್ನ ಸ್ಥಾಪಿಸಲಾಗಿದ್ದ ಮೈಸೂರು ಮೂವಿಟೋನ್ ಸ್ಟುಡಿಯೋ, ಮೈಸೂರು ಸೌಂಡ್ ಸ್ಟುಡಿಯೋಗಳೆಲ್ಲಾ ನಷ್ಟದಿಂದ ಮುಚ್ಚಿದವು. ನವಜ್ಯೋತಿಯಲ್ಲಿ ಮೂವತ್ತು ಸಿನಿಮಾಗಳು ತಯಾರಾದ ದಾಖಲೆ ಇದೆ. ಜಿ.ಆರ್.ರಾಮಯ್ಯ ಅವರ ಶ್ರಮದಿಂದ ಈ ಕಾರ್ಯ ಸಾಧ್ಯವಾಯಿತು. ಅಂದಿನ ದಿನಗಳಲ್ಲಿ ಅದು ದಕ್ಷಿಣ ಭಾರತದ ಸುಸಜ್ಜಿತ ಸ್ಟುಡಿಯೋ ಎಂಬ ಖ್ಯಾತಿ ಪಡೆದಿತ್ತು. 1954 ರಲ್ಲಿ ನವಜ್ಯೋತಿ ಕಣ್ಣು ಮುಚ್ಚಿದಾಗ ಮೈಸೂರಿನಲ್ಲಿ ಪ್ರೀಮಿಯರ್ ಸ್ಟುಡಿಯೋ ಆರಂಭವಾಯಿತು. ಕನ್ನಡ ಚಿತ್ರರಂಗ ಮೈಸೂರಿನಲ್ಲೇ ಉಳಿಯ ಬೇಕೆಂಬ ಕಾರಣಕ್ಕೆ ಎಂ.ಎನ್.ಬಸರಾಜಯ್ಯ ಪ್ರೀಮಿಯರ್ ಸ್ಟುಡಿಯೋ ನಿರ್ಮಿಸಿದರು. ನಂತರದ ಬೆಳವಣಿಗೆಯಲ್ಲಿ ಬೆಂಗಳೂರಿನಲ್ಲಿ ಚಾಮುಂಡೇಶ್ವರಿ, ಅಭಿಮಾನ್, ಕಂಠೀರವ ಸ್ಟುಡಿಯೋಗಳು ಕನ್ನಡ ಚಿತ್ರ ತಯಾರಿಕೆ ಬೆಳವಣಿಗೆಗೆ ಪ್ರೋತ್ಸಾಹ ನೀಡಿದವು.
















# ಬುನಾದಿ ಹಾಕಿದವರು

ಆರಂಭದ ಇಪ್ಪತ್ತು ವರ್ಷಗಳ ಹಾದಿಯಲ್ಲಿ ಕನ್ನಡ ಚಲನಚಿತ್ರರಂಗದಲ್ಲಿ ತಯಾರಾಗಿರುವುದು ಕೇವಲ 39 ಚಲನಚಿತ್ರಗಳು . ಮಂದಗತಿಯ ಹಾದಿ. ವಾಕ್ಚಿತ್ರ ಆರಂಭಕಾಲದ ಪ್ರಭಾವವೇ ಈ ಇಪ್ಪತ್ತು ವರುಷಗಳಂದಲೂ ಅನುರಣನ ಗೊಳ್ಳುತ್ತಲೇ ಇದ್ದುದರಿಂದ, ಚಿತ್ರ ಕತೆಯ ಆಯ್ಕೆ ಕೂಡ ಪೌರಾಣಿಕ, ಜಾನಪದಗಳ ಸುತ್ತಲೇ ಸುತ್ತುತ್ತಿತ್ತು. ಇಂತಹ ಪರಿಸ್ಥಿತಿ 1954 ರ ನಂತರದ ದಿನಗಳಲ್ಲಿ ಕ್ರಮೇಣವಾಗಿ ಬದಲಾಗುತ್ತಾ ಬಂದದ್ದು, ಹಾಗೂ ಕ್ಷಿಪ್ರಗತಿಯ ಕೆಲವು ಘಟನೆಗಳು ಚಿತ್ರರಂಗದ ದಿಕ್ಕನ್ನೇ ಬದಲಿಸಿದ್ದು ಇತಿಹಾಸ. ಚಲನಚಿತ್ರರಂಗದಲ್ಲಿ ವೇಗ ಕಾಣಿಸಿಕೊಂಡದ್ದೇ 1954 ಹಾಗೂ 1964 ರ ದಶಕದಲ್ಲಿ. ಈ ದಶಕದಲ್ಲಿ 125 ಚಿತ್ರಗಳು ತಯಾರಾಗಿವೆ. ಈ ವೇಗದ ಜೊತೆಗೆ ತಾಂತ್ರಿಕ ಪರಿಷ್ಕರಣೆ, ಗುಣಮಟ್ಟ ಸುಧಾರಣೆ, ಬಣ್ಣದ ಪ್ರಯೋಗ, ಹೊಸ ಕಲಾವಿದರು, ಎಲ್ಲವೂ ಸಮ್ಮಿಳನ ಗೊಂಡಿದೆ. ಅಲ್ಲದೆ ಕನ್ನಡ ಪ್ರೇಕ್ಷಕರ ನಿಜವಾದ ಒಲವು ಚಿತ್ರರಂಗಕ್ಕೆ ದೊರಕಿದೆ. ಅಂತಹ ವಾತಾವರಣ ಸೃಷ್ಟಿಯಾದದ್ದು ಪ್ರವಾಹ ಪರಿಹಾರ ನಿಧಿಗಾಗಿ ಕಲಾವಿದರು ನೆರವಿಗಾಗಿ ಜನರ ಮಧ್ಯೆ ಹೋದರು. ಅದಕ್ಕೆ ದೊರೆತ ಬೆಂಬಲ, ಕಲಾವಿದರ ಬಗ್ಗೆ ತೋರಿದ ಪ್ರೀತಿ ಇವೆಲ್ಲಾ ಚಿತ್ರರಂಗದವರು ಮತ್ತಷ್ಟು ಕ್ರಿಯಾಶೀಲರಾಗಲು ಸಹಕಾರಿಯಾಯಿತು. ನಿರ್ಮಾಪಕರು ಕಲಾವಿದರಿಗೆ ಈ ಘಟನೆ ಮಾನಸಿಕವಾಗಿ ಉತ್ತೇಜನ ನೀಡಿತು.




ಕನ್ನಡ ಚಿತ್ರಗಳ ಹೆಸರು ರಾಷ್ಟ್ರಪ್ರಶಸ್ತಿ ಸಾಲಿನಲ್ಲಿ ಕಾಣಿಸಿಕೊಂಡದ್ದು, ಹೊಸ ಅಲೆಯ "ನಾಂದಿ" ಚಿತ್ರದ ತಯಾರಿಕೆ ಕನ್ನಡ ಚಿತ್ರರಂಗದಲ್ಲಿ ಪರಿವರ್ತನೆಯ ಪರ್ವವನ್ನು ಆರಂಭಿಸಿದವು. ಆದ್ದರಿಂದಲೇ ಕನ್ನಡ ಚಿತ್ರರಂಗದಲ್ಲಿ ಇತಿಹಾಸದ 1954 ರಿಂದ 1964 ರ ಅವಧಿ ಬಹಳ ಮಹತ್ವದ ಘಟ್ಟವಾಗಿದೆ. ಈ ಘಟ್ಟವನ್ನು ಕನ್ನಡ ಚಿತ್ರರಂಗದ "ಪರಿವರ್ತನಾ ಯುಗ" ಎಂದು ಕರೆಯಬಹುದು.

ನಾಯಕನಟರ ಪೀಳಿಗೆಯೇ ಹಂತಹಂತವಾಗಿ ಬದಲಾದ ಪರಿವರ್ತನೆ ಈ ಕಾಲಾವಧಿಯಲ್ಲಿ ನಡೆಯಿತು. ವಾಕ್ಚಿತ್ರ ಆರಂಭದ ದಿನಗಳಿಂದ ರಜತ ಪರದೆಯ ನಾಯಕರಾಗಿದ್ದ ಎಂ.ವಿ.ಸುಬ್ಬಯ್ಯ ನಾಯ್ಡು, ಆರ್.ನಾಗೇದ್ರರಾವ್, ಡಿ.ಕೆಂಪರಾಜ ಅರಸು, ಬಿ.ಆರ್.ಪಂತಲು ಹೊನ್ನಪ್ಪ ಭಾಗವತರ್, ಇಂದುಶೇಖರ್, ವಿಮಲಾನಂದ ದಾಸ್ ಮೊದಲಾದವರು ತೆರೆ ಮರೆಗೆ ಹೋಗಿ, ರಾಜಕುಮಾರ್, ಕಲ್ಯಾಣ್ ಕುಮಾರ್, ಉದಯಕುಮಾರ್ ಬೆಳ್ಳಿತೆರೆ ನಾಯಕರಾಗಿ ಮೂಡಿದರು. 1954ರ ಕೊಡುಗೆ ಎಂದರೆ ರಾಜಕುಮಾರ್ ಅಭಿನಯದ ಮೊದಲ ಚಿತ್ರ ಬಿಡುಗಡೆ. ಈ ಮೂಲಕ ಅವರು ಕನ್ನಡದ ಶಕ್ತಿಯಾಗಿ ಬೆಳೆದದ್ದು.





# ಆರಂಭದ ದಾಪುಗಾಲು





1954 ರಿಂದ 1964 ರ ಅವಧಿಯಲ್ಲಿ 125 ಚಲನಚಿತ್ರಗಳು ಬಿಡುಗಡೆಯಾಗಿವೆ. ಅದರಲ್ಲಿ ರಾಜಕುಮಾರ್ ಅವರು ನಾಯಕನಟರಾಗಿರುವ 53 ಚಿತ್ರಗಳವೆ. ಇದನ್ನು ಕಂಡಾಗ ರಾಜಕುಮಾರ್ ಅವರು ಗಳಿಸಿದ ಯಶಸ್ಸು ವೇದ್ಯ. 1954 ರಲ್ಲಿ ಗುಬ್ಬಿ ವೀರಣ್ಣ ಅವರ ತಯಾರಿಕೆ "ಬೇಡರ ಕಣ್ಣಪ್ಪ" ಮೂಲಕ ನಾಯಕ ನಟರಾಗಿ ಹೊರ ಹೊಮ್ಮಿದ ರಾಜಕುಮಾರ್, ನಾಯಕನ ವರ್ಚಸ್ಸಿನ ಮೇಲೆ ಚಿತ್ರಗಳ ಯಶಸ್ಸು ನಿಲ್ಲುವಂತಹ ತಾರಾಮೌಲ್ಯವನ್ನು ಕನ್ನಡ ಚಿತ್ರರಂಗಕ್ಕೆ ತಂದರು. 1954 ರಲ್ಲೇ "ನಟಶೇಖರ" ಚಿತ್ರದ ಮೂಲಕ ಕಲ್ಯಾಣ್ ಕುಮಾರ್, 1956ರಲ್ಲಿ "ಭಾಗ್ಯೋದಯ" ಚಿತ್ರದ ಮೂಲಕ ಉದಯಕುಮಾರ್ ನಾಯಕನಟರಾಗಿ ಚಿತ್ರರಂಗ ಪ್ರವೇಶಿಸಿದರು. ನಾಯಕನಟರ ಪ್ರಾಬಲ್ಯ ಅದುವರೆಗೆ ಪ್ರತಿಷ್ಠಿತವೆನಿಸಿದ್ದ ಸಂಸ್ಥೆಗಳ ಹೆಸರನ್ನು ಹಿಂದೆ ಸರಿಸಲಾರಂಭಿಸಿದ್ದು, ಈ ಪರಿವರ್ತನಾಯುಗದ ಮೊದಲ ಪರಿವರ್ತನೆಯೇ ಆಗಿದೆ. ಹೊಸ ಪೀಳಿಗೆಯ ನಾಯಕನಟರು ಹೊಸ ಪ್ರೇಕ್ಷಕ ವೃಂದವನ್ನೇ ಸೃಷ್ಟಿಸಿ ತಮ್ಮ ಪ್ರಭಾವಲಯವನ್ನು ವಿಸ್ತರಿಸಿಕೊಂಡ ಕೂಡಲೇ ತಾರಾಪದ್ಧತಿ ಕನ್ನಡ ಚಿತ್ರರಂಗಕ್ಕೆ ಮೆಲ್ಲನೆ ಅಡಿಯಿಟ್ಟಂತಾಯಿತು.





ಒಂದೆಡೆ ನಾಯಕನಟರ ಪ್ರಾಬಲ್ಯ ಬೆಳೆಯುತ್ತಾ ಕನ್ನಡ ಚಿತ್ರರಂಗ ಗಟ್ಟಿಯಾಗ ತೊಡಗಿತು. ಇನ್ನೊಂದೆಡೆ ಪ್ರಾದೇಶಿಕ ಚಿತ್ರೋದ್ಯಮಕ್ಕೆ ಉತ್ತೇಜನ ನೀಡುವ ದೃಷ್ಟಿಯಿಂದ ಕೇಂದ್ರ ಸರ್ಕಾರ






ರಾಷ್ಟ್ರಮಟ್ಟದಲ್ಲಿ ಪ್ರಾದೇಶಿಕ ಚಿತ್ರಗಳಿಗೆ ಪ್ರಶಸ್ತಿ ನೀಡುವ ಸಂಪ್ರದಾಯವನ್ನು ಆರಂಭಿಸಿತು. ಇದೂ ಕೂಡ ಕನ್ನಡ ಚಿತ್ರಗಳ ಗುಣಮಟ್ಟ ಸುಧಾರಣೆಯ ಪ್ರಮುಖ ಅಂಶವಾಯಿತು. ಪ್ರಶಸ್ತಿಯನ್ನು ಆರಂಭಿಸಿದ 1954 ರಲ್ಲೇ "ಬೇಡರಕಣ್ಣಪ್ಪ" ಈ ಪ್ರಶಸ್ತಿಯನ್ನು ಪಡೆದ ಮೊದಲ ಚಿತ್ರವಾಯಿತು. ಹೀಗಾಗಿ ರಾಜ್ ಕುಮಾರ್ ಅವರನ್ನು ತೆರೆಗೆ ತಂದ ಮೊದಲ ಚಿತ್ರ ಎಂಬ ದಾಖಲೆಯ ಜತೆಗೆ ಕೇಂದ್ರ ಸರ್ಕಾರದ ಪ್ರಶಸ್ತಿ ಪಡೆದ ಮೊದಲಚಿತ್ರ ಎಂಬ ದಾಖಲೆಯೂ ಈ ಚಿತ್ರದ್ದಾಯಿತು. ಕನ್ನಡಕ್ಕೆ ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ತಂದ ಮೊದಲಿಗರೂ ಡಾ.ರಾಜ್‌ಕುಮಾರ್. ಆರ್ ನಾಗೇಂದ್ರರಾವ್ ನಿರ್ದೇಶಿಸಿದ "ಪ್ರೇಮದ ಪುತ್ರಿ" (1957), ಕೇಂದ್ರ ಸರ್ಕಾರದ ಪ್ರಶಸ್ತಿ ಗಳಿಸಿತು. ರಾಷ್ಟ್ರಪತಿಗಳಿಂದ ಬೆಳ್ಳಿ ಪದಕ ಪಡೆದ ಮೊದಲ ಚಿತ್ರವೆನಿಸಿತು. 1956 ರಲ್ಲಿ ಆರೂರು ಪಟ್ಟಾಭಿ ನಿರ್ದೇಶಿಸಿದ ಪ್ರಥಮ ಚಿತ್ರ "ಭಕ್ತ ವಿಜಯ", 1958 ರಲ್ಲಿ "ಸ್ಕೂಲ್ ಮಾಸ್ಟರ್", 1963 ರಲ್ಲಿ "ಸಂತತುಕಾರಾಂ" ಪ್ರತಿ ವರ್ಷ ಕನ್ನಡ ಚಿತ್ರವೊಂದು ಹೆಮ್ಮೆ ಪಡುವ ವಿದ್ಯಮಾನ ಆರಂಭವಾಯಿತು.















ಕನ್ನಡ ಚಿತ್ರರಂಗದಲ್ಲಿ ಪ್ರಥಮ ವರ್ಣಚಿತ್ರ "ಅಮರಶಿಲ್ಪಿ ಜಕಣಾಚಾರಿ" ನಿರ್ಮಿಸಿ ದಾಖಲೆ ನಿರ್ಮಿಸಿರುವ ನಿರ್ಮಾಪಕ ನಿರ್ದೇಶಕ ಬಿ.ಎಸ್.ರಂಗ ಅವರ ಸಂಸ್ಥೆ ವಿಕ್ರಂ ಪ್ರೊಡಕ್ಷನ್ಸ್ ಚಿತ್ರರಂಗದ ಇತಿಹಾಸದಲ್ಲಿ ಮರೆಯಲಾಗದ ಹೆಸರು. 1956 ರಲ್ಲಿ ಮದರಾಸಿನಲ್ಲಿ ವಿಕ್ರಂ ಸ್ಟುಡಿಯೋ ನಿರ್ಮಿಸಿ, ಹೊರರಾಜ್ಯದಲ್ಲಿ ಸ್ಟುಡಿಯೋ ಆರಂಭಿಸಿದ ಮೊದಲ ಕನ್ನಡಿಗರಾದರು. ಈ ಸ್ಟುಡಿಯೋ ಮೂಲಕ ಅವರು ತಯಾರಿಸಿದ ಮೊದಲ ಚಿತ್ರ "ಭಕ್ತ ಮಾರ್ಕಂಡೇಯ". ಮಹಿಷಾಸುರ ಮರ್ದಿನಿ, ಪ್ರತಿಜ್ಞೆ, ಮಹಾಸತಿ ಅನಸೂಯ, ಪಾರ್ವತಿ ಕಲ್ಯಾಣ, ಒಡಹುಟ್ಟಿದವರು, ಮಿಸ್ಟರ್ ರಾಜ್‌ಕುಮಾರ್, ಸಿಡಿಲಮರಿ, ಮಣ್ಣಿನ ಮಗಳು, ಭಲೇ ಬಸವ ಮೊದಲಾದವು ವಿಕ್ರಂ ಪ್ರೊಡಕ್ಷನ್ಸ್ ಕಾಣಿಕೆಗಳು.


1957 ರಲ್ಲಿ ಮೊಟ್ಟಮೊದಲಬಾರಿಗೆ ರಾಜ್‌ಕುಮಾರ್ ಅವರು "ರಾಯರ ಸೊಸೆ" ಸಾಮಾಜಿಕ ಚಿತ್ರದಲ್ಲಿ ಅಭಿನಯಿಸಿದರು. 1957–58 ರಲ್ಲಿ ಬಿಡುಗಡೆಯಾದ ಬಿ.ಆರ್.ಪಂತಲು ಅವರ "ಸ್ಕೂಲ್ ಮಾಸ್ಟರ್" ಹಾಗೂ ನಾಗೇಂದ್ರರಾವ್ ಅವರ ಪ್ರೇಮದ ಪುತ್ರಿ, ಚಿತ್ರಗಳು ಕುಟುಂಬ ಸಮೇತ ಜನ ಚಿತ್ರಮಂದಿರಕ್ಕೆ ಬರಲು ಕಾರಣವಾದವು. ಈ ಬೆಳವಣಿಗೆ ಕನ್ನಡ ಚಿತ್ರರಂಗದ ಕುಸಿತವನ್ನು ತಡೆಯುವಲ್ಲಿ ಯಶಸ್ವಿಯಾದವು ಎನ್ನಬಹುದು. ಸ್ಕೂಲ್ ಮಾಸ್ಟರ್ ದಾಖಲೆ ನಿರ್ಮಿಸಿದ ಚಿತ್ರ. ಕು. ರಾ.ಸೀತಾರಾಮಶಾಸ್ತ್ರಿ ಅವರು ಸಂಭಾಷಣೆ ರಚಿಸಿದ "ಅಣ್ಣತಂಗಿ" ಗ್ರಾಮೀಣ ಭಾಷಾ ಸೊಗಡಿನಿಂದ ಮನಸೆಳೆಯಿತು.









ಚಿ.ಉದಯಶಂಕರ್



ಕು.ರಾ.ಸೀತಾರಾಮಶಾಸ್ತ್ರಿ



ಎಸ್.ಜಾನಕಿ



ಎಂ.ಪಿ. ಶಂಕರ್



ಬಿ.ಸರೋಜಾದೇವಿ



ಜಿ.ಕೆ.ವೆಂಕಟೇಶ್

1954 ರಿಂದಲೂ ಕನ್ನಡ ಚಿತ್ರರಂಗಕ್ಕೆ ಅವ್ಯಾಹತವಾಗಿ ಹೊಸಬರ ಸೇರ್ಪಡೆಯಾಗುತ್ತಿದೆ. 1955 ರಲ್ಲಿ ಬಿಡುಗಡೆಯಾದ "ಶ್ರೀರಾಮ ಪೂಜಾ" ಬಿ.ಸರೋಜಾದೇವಿ ಅವರು ಮೊದಲು ಕಾಣಿಸಿಕೊಂಡ ಚಿತ್ರ. ವಿಜಯಭಾಸ್ಕರ್ ಅವರನ್ನು ತೆರೆಗೆ ಪರಿಚಯಿಸಿದ ಚಿತ್ರ. ಎನ್.ಲಕ್ಷ್ಮೀನಾರಾಯಣ್ ಹಾಗೂ ಗೀತಪ್ರಿಯ ಇದೇ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. 1956 ರಲ್ಲಿ ಕಲ್ಯಾಣ್ ಕುಮಾರ್ ಅವರ ಅಭಿನಯದ ಎರಡನೇ ಚಿತ್ರ "ಭಾಗ್ಯ ಚಕ್ರ" ಕ್ಕೆ ವಿಜಯಭಾಸ್ಕರ್ ಕತೆ ಚಿತ್ರಕತೆ ಬರೆದಿದ್ದಾರೆ. ಸಂಗೀತ ನಿರ್ದೇಶನವೂ ಅವರದೇ. 1956 ರಲ್ಲಿ ಓಹಿಲೇಶ್ವರ ಚಿತ್ರದ ಮೂಲಕ ಜಿ.ಕೆ.ವೆಂಕಟೇಶ್ ಸಂಗೀತ ನಿರ್ದೇಶಕರಾದರು. ಎಚ್.ಎಲ್. ಎನ್ ಸಿಂಹ ನಿರ್ದೇಶನದ "ಅಬ್ಬಾ! ಆ ಹುಡುಗಿ!" (1959) ಚಿತ್ರದ ಮೂಲಕ ರಾಜಾಶಂಕರ್, ರತ್ನ ಮಂಜರಿ (1962) ಮೂಲಕ ಎಂ.ಪಿ. ಶಂಕರ್, ನಾಂದಿ ( 1964) ಮೂಲಕ ದಿನೇಶ್, ರತ್ನಮಂಜರಿ (1962) ಮೂಲಕ ಗಾಯಕಿ ಎಸ್.ಜಾನಕಿ ಕನ್ನಡ ಚಿತ್ರರಂಗ ಪ್ರವೇಶಿಸಿದರು. ಶಿವರಾತ್ರಿ ಮಹಾತ್ಮೆ ಚಿತ್ರಕ್ಕಾಗಿ ಚಿ.ಉದಯಶಂಕರ್ ಮೊದಲ ಚಿತ್ರಗೀತೆ ಬರೆದರು.













ಕಿತ್ತೂರು ಚೆನ್ನಮ್ಮ (1961), ವಿಜಯನಗರದ ವೀರಪುತ್ರ (1961), ವೀರಸಂಕಲ್ಪ (1964), ಐತಿಹಾಸಿಕ ಚಿತ್ರಗಳಿಗೆ ಕನ್ನಡದ ನೂರನೇ ಚಿತ್ರ "ರಣಧೀರ ಕಂಠೀರವ"ದ ಯಶಸ್ಸು ಪ್ರೇರಣೆಯಾದಂತೆ ಕಾಣುತ್ತದೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರ ಪಾತ್ರ ಏನು ಎಂದು ನಿರೂಪಿಸುವ ಪದ್ಮಿನಿ ಪಿಕ್ಚರ್ಸ್ ರವರ "ಕಿತ್ತೂರು ಚೆನ್ನಮ್ಮ" ರಾಷ್ಟ್ರೀಯ ಪ್ರಶಸ್ತಿ ಪಡೆಯಿತು. ನಿರ್ದೇಶಕ ಬಿ.ವಿಠಲಾಚಾರ್ಯ ಅವರು ಮಹಾತ್ಮ ಪಿಕ್ಚರ್ಸ್ ಸಂಸ್ಥಾಪಕರಲ್ಲಿ ಒಬ್ಬರು. ಕನ್ಯಾದಾನ ಎಂಬ ಸಾಮಾಜಿಕ ಕಳಕಳಿಯ ಚಿತ್ರವನ್ನು 1954 ರಲ್ಲೇ ನಿರ್ಮಿಸಿದ್ದರು. 1953 ರಲ್ಲಿ "ಸೌಭಾಗ್ಯ ಲಕ್ಷ್ಮೀ ಚಿತ್ರದ ಮೂಲಕ ರಾಜನ್ ನಾಗೇಂದ್ರ ಅವರು ಸಂಗೀತ ನಿರ್ದೇಶಕರಾದರು. 1963 ರಲ್ಲಿ "ವೀರಕೇಸರಿ" ಎನ್ನುವ ಚಿತ್ರ ನಿರ್ದೇಶಿಸಿದರು. ಇದು ಭಾಗಶಃ ವರ್ಣದಲ್ಲಿತ್ತು. 1955ರ ಬೆಳವಣಿಗೆ ಎಂದರೆ ಹೊನ್ನಪ್ಪ ಭಾಗವತರ್ ಅವರು ಚಿತ್ರ ನಿರ್ಮಾಣ ಆರಂಭಿಸಿದ್ದು. ಮಹಾಕವಿ ಕಾಳಿದಾಸ, ಪಂಚರತ್ನ, ಜಗಜ್ಯೋತಿ ಬಸವೇಶ್ವರ ಅವರು ಅಭಿನಯಿಸಿದ ಹಾಗೂ ನಿರ್ಮಿಸಿದ ಮಹತ್ವದ ಚಿತ್ರಗಳು.



ಬಿ.ವಿಠಲಾಚಾರ್ಯ



ರಾಜನ್



ಎನ್.ಲಕ್ಷ್ಮೀ ನಾರಾಯಣ್



ಮಾಸ್ಟರ್ ಪುನೀತ್ (ಆಗ ಲೋಹಿತ್)

ಕನ್ನಡದ ಮಹತ್ವದ ನಿರ್ದೇಶಕರುಗಳ ಪೈಕಿ ಬಿ.ಆರ್.ಪಂತಲು ಅವರೂ ಒಬ್ಬರು. ಪದ್ಮಿನಿ ಪಿಕ್ಚರ್ಸ್ ಮೂಲಕ 21 ವರ್ಷಗಳ ಕಾಲ ಕನ್ನಡ ಚಿತ್ರಗಳ ತಯಾರಿಕೆಯಲ್ಲಿ ನಿರತರಾಗಿದ್ದ ಪಂತಲು, ಕನ್ನಡ ಚಿತ್ರಗಳ ಬಗ್ಗೆ ಪ್ರೇಕ್ಷಕರಲ್ಲಿ ಆಸಕ್ತಿ ಕೆರಳಸುವುದರ ಬಗ್ಗೆ, ಕರ್ನಾಟಕದ ಪ್ರೇಕ್ಷಕರಲ್ಲಿ ಕನ್ನಡ ಚಿತ್ರ ನೋಡುವ ಅಭ್ಯಾಸ ರೂಢಿಸುವುದರಲ್ಲೂ ನಿರ್ವಹಿಸಿದ ಪಾತ್ರ ಗಣನೀಯವಾದದ್ದು. ಟಾರ್ಜಾನ್ ಮಾದರಿಯ ರತ್ನಗಿರಿ ರಹಸ್ಯ, ಸ್ಕೂಲ್ ಮಾಸ್ಟರ್, ಮಕ್ಕಳ ರಾಜ್ಯ, ಸಾಕು ಮಗಳು, ಶ್ರೀ ಕೃಷ್ಣದೇವರಾಯ, ಗಂಗೆ ಗೌರಿ, ಬೀದಿಬಸವಣ್ಣ, ಕಾಲೇಜು ರಂಗ, ಮೊದಲಾದ ಚಿತ್ರಗಳು ಪದ್ಮಿನಿ ಪಿಕ್ಚರ್ಸ್‌ನ ಕೊಡುಗೆಗಳು.

1964 ರಲ್ಲಿ ಎನ್.ಲಕ್ಷ್ಮೀ ನಾರಾಯಣ್ ನಿರ್ದೇಶಿಸಿದ "ನಾಂದಿ" ಹೊಸ ಅಲೆ ಚಿತ್ರ ಪರಂಪರೆಗೆ ನಾಂದಿ ಎಂದೇ ಭಾವಿಸಲಾಗಿದೆ. ಚದುರಂಗರ ಕಾದಂಬರಿ ಆಧರಿಸಿದ ಉಯ್ಯಾಲೆ, ವಿ.ಎಂ.ಇನಾಂದಾರ್ ಅವರ ಕಾದಂಬರಿ ಆಧರಿಸಿದ ಮುಕ್ತಿ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕತೆ ಆಧರಿಸಿದ "ಅಬಚೂರಿನ ಪೋಸ್ಟ್ ಆಫೀಸು" ಮಾಸ್ಟರ್ ಪುನೀತ್ (ಆಗ ಲೋಹಿತ್) ಅಭಿನಯದ "ಬೆಟ್ಟದ ಹೂವು" ಎನ್. ಲಕ್ಷ್ಮೀನಾರಾಯಣ್ ಅವರ ನಿರ್ದೇಶನದ ಮಹತ್ವದ ಚಿತ್ರಗಳು.



# ಕನ್ನಡ ಚಿತ್ರರಂಗ ಉಳಿಸಿ ಚಳವಳಿ





1960ರ ದಶಕ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ತಿರುವು ಪಡೆದ ವರ್ಷ. ಚಿತ್ರರಂಗ ಮದರಾಸಿನಿಂದ ಬೆಂಗಳೂರಿಗೆ ವಾಪಸು ಬರಲೇ ಬೇಕಿತ್ತು. ಏಕೆಂದರೆ ಕನ್ನಡದಲ್ಲಿ ಕನ್ನಡ ಚಲನಚಿತ್ರ ಉದ್ಯಮ ನೆಲೆ ಊರಬೇಕಿತ್ತು. ಅಂತಹ ಸಮಯದಲ್ಲಿ ಕನ್ನಡ ಚಿತ್ರಗಳಿಗೆ ಚಿತ್ರಮಂದಿರ ಸಿಗುತ್ತಿರಲಿಲ್ಲ. ಹಿಂದಿ, ತಮಿಳು, ತೆಲುಗು ಚಿತ್ರಗಳು ಚಿತ್ರಮಂದಿರವನ್ನಾಕ್ರಮಿಸಿಕೊಂಡು ಕನ್ನಡ ಚಿತ್ರಗಳು ಬಿಡುಗಡೆಗೆ ಬೇಡುವ ಸ್ಥಿತಿ ಇತ್ತು. ಅಂತಹ ಸಮಯದಲ್ಲಿ ಬೆಂಗಳೂರಿನಲ್ಲಿ ಸಾಹಿತಿಗಳು, ಅನಕೃ, ಮ.ರಾಮಮೂರ್ತಿ, ನಾಡಿಗೇರ್, ವಾಟಾಳ್ ನಾಗರಾಜ್. ಮೊದಲಾದವರು ಹಾಗೂ ಕನ್ನಡ ಅಭಿಮಾನಿಗಳು, ಕನ್ನಡ ಚಳವಳಿಗಾರರು ಸೇರಿ ಆಂದೋಲನವನ್ನು ಮಾಡಿದ್ದು, ಕನ್ನಡ ಜಾಗೃತಿ ಮೂಡಿಸಿದ್ದು ಇತಿಹಾಸ. ಅದಕ್ಕೆ ಸಿಕ್ಕ ಪ್ರತಿಫಲ ಕನ್ನಡ ಚಿತ್ರಗಳಿಗೆ ಮನ್ನಣೆ.

# ಅನ್ಯಾಕ್ರಮಣದ ವಿರುದ್ಧ ಹೋರಾಟ



ಅಂದೂ ಅಷ್ಟೇ, ಇಂದೂ ಅಷ್ಟೇ. ಅನ್ಯ ಭಾಷೆಯ, ಅನ್ಯ ಸಂಸ್ಕೃತಿಯ ದಾಳಿ ಕನ್ನಡಿಗರ ಮೇಲೆ ನಡೆದಿರುವಷ್ಟು ಬೇರೆಲ್ಲೂ ಆಗಿಲ್ಲವೇನೋ. ಇಂತಹ ಸಾಂಸ್ಕೃತಿಕ ಅನ್ಯಾಕ್ರಮಣಕ್ಕೆ ಕನ್ನಡ ಮಾತನಾಡುವ ಪ್ರದೇಶಗಳು ಯಾವುದೇ ಸೂತ್ರವಿಲ್ಲದೆ ಹರಿದು ಹಂಚಿಹೋಗಿದ್ದುದೂ ಒಂದು ಕಾರಣ. ಕರ್ನಾಟಕದ ವಿಶಾಲ ವ್ಯಾಪ್ತಿಯಲ್ಲಿ ವ್ಯಾಪಕವಾಗಿ ನಡೆಯುತ್ತಿದ್ದ ಹೋರಾಟಕ್ಕೆ ಎಲ್ಲ ಪ್ರದೇಶಗಳಲ್ಲಿ ಬೆಂಬಲ ರೂಪಿಸುವ ಸಂಘಟಿತ ನಾಯಕತ್ವ ಇಲ್ಲದ್ದು ಕೂಡ ಇಂತಹ ದಾಳಿಯನ್ನು ಮೌನವಾಗಿ ಸಹಿಸಿಕೊಳ್ಳುವಂತಾಗಿತ್ತು. ಈಗ ಉತ್ತರಕರ್ನಾಟಕ ಎಂದು ಕರೆಯುತ್ತಿರುವ ಪ್ರದೇಶ ಮುಂಬೈ ಪ್ರಾಂತ್ಯದಲ್ಲಿತ್ತು. ದಕ್ಷಿಣ ಕನ್ನಡ ಮದರಾಸು ಪ್ರಾಂತ್ಯದಲ್ಲೂ, ಮತ್ತೆ ಕೆಲವು ಪ್ರದೇಶಗಳು ಹೈದರಾಬಾದ್ ಹಾಗೂ ಕೇರಳ ರಾಜ್ಯದಲ್ಲಿ ಸೇರಿ ಹೋಗಿದ್ದವು. ಕನ್ನಡ ಇರುವುದು ಮೈಸೂರಿನಲ್ಲಿ ಮಾತ್ರ ಎನ್ನುವಂತಾಗಿತ್ತು. ಹರಿದು ಹಂಚಿ ಹೋಗಿದ್ದ ಕರ್ನಾಟಕದ ಭಾಗಗಳನ್ನು ಆ ಮೂಲಕ ಕನ್ನಡಿಗರನ್ನು ಒಂದುಗೂಡಿಸುವ ಹೋರಾಟ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯ ಮೂಲಕ ಆರಂಭಗೊಂಡ ದಿನಗಳಲ್ಲೇ ನಾಡು ಪರಿವರ್ತನೆಯ ಗಾಳಿಗೆ ಮೈ ಒಡ್ಡಿಕೊಂಡಿತ್ತು. ಒಂದೆಡೆ ಅರಸೊತ್ತಿಗೆಯ ಹಿಡಿತ, ಬ್ರಿಟಿಷರ ಪ್ರಭಾವ, ಪಾಶ್ಚಾತ್ಯ ದೇಶಗಳಿಂದ ಹರಿದು ಬರುತ್ತಿದ್ದ ಹೊಸ ತಂತ್ರಜ್ಞಾನದ ಆವಿಷ್ಕಾರ, ಜತೆಜತೆಗೇ ಪರಂಪರಾಗತ ನಡಿಗೆಯ ಮೇಲೆ ಬೀಸುತ್ತಿರುವ ಪ್ರಭಾವಗಳ ಪರಿಣಾಮಗಳನ್ನು ಕರ್ನಾಟಕ ಅರಗಿಸಿಕೊಳ್ಳಬೇಕಿತ್ತು.

ತಂತ್ರಜ್ಞಾನದ ಅತಿವೇಗಿ ಬೆಳವಣಿಗೆಗಳು ದೇಶದಾದ್ಯಂತ ಸಾಂಸ್ಕೃತಿಕ ಸಂಚಲನ ಉಂಟು ಮಾಡಿ, ರಂಗಭೂಮಿ, ಸಿನಿಮಾಗಳ ಪರಿವರ್ತನೆಗೆ ಕಾರಣವಾಗುತ್ತಿದ್ದಂತೆಯೇ ಕರ್ನಾಟಕದಲ್ಲಿ ಆರಂಭ ಘಟ್ಟದಲ್ಲಿ ಕಾಣಬರುತ್ತಿದ್ದ ಅಧೀರ ಸ್ಥಿತಿ ಮಾಯವಾಗುತ್ತಾ ಬಂದಿತು. ಅಲ್ಲದೆ, ಜನಪದ, ಪೌರಾಣಿಕ, ಐತಿಹಾಸಿಕ ಸೂತ್ರಗಳ ಕಟ್ಟುಪಾಡುಗಳ ನಡುವೆಯೂ, ಸ್ವಾತಂತ್ರ್ಯ ಹೋರಾಟದ ಬಿಸಿಯ ನಡುವೆಯೂ, ಸಾಂಸ್ಕೃತಿಕವಲಯದಲ್ಲಿ ಮಹತ್ತರ ಬೆಳವಣಿಗೆಗಳು ಅಲ್ಲಲ್ಲಿ ಮಡುಗಟ್ಟತೊಡಗಿದ್ದವು.

ಆರಂಭದ ದಶಕಗಳಿಂದ ಕನ್ನಡ ಮಾತನಾಡುವ ಪ್ರದೇಶಗಳು ಹರಿದು ಹಂಚಿ ಹೋಗಿದ್ದರ ಪರಿಣಾಮವನ್ನು ನಾವು ಈಗಲೂ ಕಾಣುತ್ತಿದ್ದೇವೆ. ರಂಗಭೂಮಿಯ ಬೇರು ಒಂಭತ್ತನೇ ಶತಮಾನದಿಂದಲೇ ಬೇರೂರಿರುವುದರಿಂದ ಅದು ಗಟ್ಟಿತಳಹದಿಯ ಮೇಲೆ ನಿಂತಿದೆ.

ಕನ್ನಡದಲ್ಲಿ ನಾಟಕಸಾಹಿತ್ಯ ಇತರ ಕಾವ್ಯಗಳಷ್ಟೇ ಪ್ರಾಚೀನ. ಒಂಬತ್ತು ಹತ್ತನೇ ಶತಮಾನದಲ್ಲೇ ಸಂಸ್ಕೃತ ನಾಟಕಗಳು ಕನ್ನಡಕ್ಕೆ ಪರಿವರ್ತನೆಯಾಗಿವೆ. ಆಗ ದೇಸಿ ನಾಟಕಗಳು ಪ್ರದರ್ಶನ ವಾಗುತ್ತಿದ್ದವು. ಕನ್ನಡ ರಂಗಭೂಮಿ ನಿರ್ದಿಷ್ಟ ತಳಹದಿಯ ಮೇಲೆ ನಿಂತು ಅಭಿವೃದ್ಧಿ ಸಾಧನೆಗೆ ಮುಂದಾದುದು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕಾಲದಿಂದ ಏಕತಾನತೆಯಲ್ಲಿ ಮುಳುಗಿದ್ದ ರಂಗಭೂಮಿಯ ಮೇಲೆ ಹಠಾತ್ ಪಾಶ್ಚಾತ್ಯ ನಾಟಕಗಳ ಪ್ರಭಾವ ಬಿತ್ತು. ಮಹಾರಾಷ್ಟ್ರ, ಕಲ್ಕತ್ತಾಗಳಲ್ಲಿನ ರಂಗಭೂಮಿಯಲ್ಲಿ ಈ ಪ್ರಯೋಗ ಯಶಸ್ವಿಯಾದ ಮೇಲೆ, ಮಹಾರಾಷ್ಟ್ರ ನಾಟಕ ಮಂಡಲಿ, ಸಾಂಗ್ಲಿ, ಜಮಖಂಡಿ ನಾಟಕ

ಮಂಡಲಿಗಳೆಲ್ಲ ಆಂಗ್ಲ ಪ್ರಭಾವದ ಮರಾಠಿ ನಾಟಕಗಳನ್ನು ಧಾರವಾಡ, ಬೆಳಗಾವಿಯ ಕಡೆ ಪ್ರದರ್ಶಿಸುತ್ತಾ ಬದಲಾವಣೆ ತರಲಾರಂಭಿಸಿದವು. ಜನರೂ ಸಹಜವಾಗಿ ಆ ನಾಟಕಗಳ ದೃಶ್ಯವೈಭವಕ್ಕೆ ಮಾರುಹೋದರು. ಅದೇ ಕಾಲದಲ್ಲಿ ಮುಂಬೈನಿಂದ ಬಂದ ಪಾರ್ಸಿ ನಾಟಕ ಮಂಡಲಿ ಬೆಂಗಳೂರಿಗೆ ಆಗಮಿಸಿ ಈಗ ಮಹಾತ್ಮ ಗಾಂಧಿ ರಸ್ತೆ ಎಂದು ಹೆಸರು ಬದಲಾಯಿಸ ಲಾಗಿರುವ ಸೌತ್ ಪರೇಡ್ ರಸ್ತೆಯ ಮೈದಾನದಲ್ಲಿ ನಾಟಕ ಆಡಲಾರಂಭಿಸಿತು.

ಪ್ರೇಕ್ಷಕರು ಹೊಸ ವಿನ್ಯಾಸದ ನಾಟಕಕ್ಕೆ ಮಾರುಹೋದರು. ಪಾರ್ಸಿ ನಾಟಕಮಂಡಲಿಯ 'ಗುಲೇಬಕಾವಲಿ', 'ಇಂದ್ರಸಭಾ' ನಾಟಕಗಳು ಜನಪ್ರಿಯವಾದವು. ಬೆಂಗಳೂರು, ಮೈಸೂರಿನ ಕಡೆ ಹಿಂದಿ ನಾಟಕಗಳು, ಸಾಂಗ್ಲಿ, ಜಮಖಂಡಿಗಳ ಕಡೆ ಮಹಾರಾಷ್ಟ್ರ ನಾಟಕ ಮಂಡಲಿಗಳ ಮರಾಠಿ ನಾಟಕಗಳು ರಂಗಭೂಮಿಯ ಮೇಲೆ ಏಕಕಾಲಕ್ಕೆ ಒಮ್ಮೆಲೇ ಸಾಂಸ್ಕೃತಿಕ ಆಕ್ರಮಣ ನಡೆಸಲಾರಂಭಿಸಿದಂತೆ ಈ ಅನ್ಯಾಕ್ರಮಣದ ಭೀಕರ ಪರಿಣಾಮದಿಂದ ಕಂಗೆಟ್ಟು ಒಂದು ಸಣ್ಣಪ್ರಮಾಣದ ಪ್ರತಿಭಟನೆ ನಡೆಯಿತು. ಗದುಗಿನಲ್ಲಿ ಸಕ್ಕರೆ ಬಾಳಾಚಾರ್ಯರು 1874 ರಲ್ಲಿ ಕರ್ನಾಟಕ ನಾಟಕ ಮಂಡಲಿ ರಚಿಸಿ ಮರಾಠಿಗರಿಗೆ ಸರಿಸಮವಾಗಿ ಕನ್ನಡ ನಾಟಕಗಳನ್ನಾಡತೊಡಗಿದರು. ರಂಗಭೂಮಿಯಲ್ಲಿ ಕನ್ನಡಾಭಿಮಾನವನ್ನು ಕೆರಳಿಸಿದ ಮೊದಲ ಪ್ರಕರಣ ಇದು.






ಸಕ್ಕರೆ ಬಾಳಾಚಾರ್ಯರೂ ಪಾಶ್ಚಾತ್ಯ ರೀತಿಯ ರಂಗೋಪಕರಣಗಳನ್ನೇ ತಂದು ವೇದಿಕೆಯ ಮೇಲೆ ವೈಭವ ಸೃಷ್ಟಿಸಿದ್ದರು. ಪರಭಾಷೆಯ ನಾಟಕಾಭಿಮಾನಕ್ಕೆ ಮನಸೋತಿದ್ದ ಉತ್ತರಕರ್ನಾಟಕದ ಕನ್ನಡಿಗರು ಎಚ್ಚೆತ್ತುಕೊಳ್ಳುವಂತೆ ಮಾಡಿದ ಈ ಪ್ರಯೋಗದಿಂದ ಪ್ರೇರಿತರಾದ ಮತ್ತೆ ಕೆಲವರು ಇದೇ ರೀತಿ ಸೆಡ್ಡು ಹೊಡೆದು ನಿಂತರು. ಬೆಳಗಾವಿ ಜಿಲ್ಲೆಯ ಹಲಸಗಿಯಲ್ಲಿ 'ಹಲಸಗಿ ನಾಟಕ ಮಂಡಲಿ' ಆರಂಭವಾಯಿತು. ಈ ಕಂಪನಿಯೂ ಕನ್ನಡ ನಾಟಕಗಳ ವೈಭವ ಪ್ರದರ್ಶಿಸಿ ಸಾಂಗ್ಲಿ ಮರಾಠಿ ನಾಟಕಗಳ ಪ್ರಭಾವಕ್ಕೆ ಕಡಿವಾಣ ಹಾಕಿತು.



ಕನ್ನಡ ರಂಗಭೂಮಿಯ ಅರುಣೋದಯ ಕಾಲ ಆರಂಭವಾದದ್ದೇ ಈ ಸಮಯದಲ್ಲಿ. ಕನ್ನಡ ರಂಗಭೂಮಿಯ ಏಳಿಗೆಗೆಂದೇ ಮಹಾರಾಜರೇ ಅರಮನೆಯಲ್ಲಿ 'ಶ್ರೀಚಾಮರಾಜೇಂದ್ರ ಕರ್ಣಾಟಕ ನಾಟಕ ಸಭಾ' ಎಂಬ ಹೆಸರಿನಿಂದ ನಾಟಕ ಮಂಡಲಿ ರಚಿಸಿದರು. ನಂತರ ಕೆಲವು ಉತ್ಸಾಹಿಗಳು ಮೈಸೂರು ನಗರದಲ್ಲಿ 'ಶಾಕುಂತಲ ಕರ್ಣಾಟಕ ಸಭಾ' ಎಂಬ ಸಂಸ್ಥೆ ಆರಂಭಿಸಿದರು. ಹೀಗೆ ರಂಗಭೂಮಿಯ ಮೇಲೆ ಆರಂಭವಾಗಿದ್ದ ಪಾಶ್ಚಾತ್ಯ ಪ್ರಭಾವವನ್ನು ಯಶಸ್ವಿಯಾಗಿ ತಡೆಗಟ್ಟಲು ಮೈಸೂರು ರಾಜ್ಯ ಸಜ್ಜಾಯಿತು.

ಇಂತಹ ಒಂದು ಚಳವಳಿಗೆ ಮೈಸೂರೇ ಕೇಂದ್ರವಾಯಿತು. ಆ ನಂತರದ ದಿನಗಳಲ್ಲಿ ಶ್ರೀ ಚಾಮುಂಡೇಶ್ವರಿ ಕರ್ಣಾಟಕ ನಾಟಕ ಸಭಾ (ಮೈಸೂರು), ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾ ಪೋಷಿತ ನಾಟಕಸಭಾ, ಹಲಸಗಿ ನಾಟಕ ಮಂಡಲಿ, ರಾಜಧಾನಿ ನಾಟಕ ಮಂಡಲಿ, ರತ್ನಾವಳಿ ನಾಟಕ ಸಭಾ, ಭಾರತ ಕಲೋತ್ತೇಜಕ ಸಂಗೀತ ಸಮಾಜ ಧಾರವಾಡ, ಕೊಣ್ಣೂರಕರ ಸಂಗೀತ ನಾಟಕ ಮಂಡಳಿ, ಕೊಣ್ಣೂರ, ಮಹಾಲಕ್ಷ್ಮಿ ನಾಟಕ ಮಂಡಲಿ, ಶಿರಹಟ್ಟಿ, ದತ್ತಾತ್ರೇಯ ನಾಟಕ ಮಂಡಲಿ (ಗದಗ), ಮೊದಲಾದ ಸುಮಾರು ನಾಲ್ಕು ನೂರು ನಾಟಕ ಮಂಡಲಿಗಳು ಹುಟ್ಟಿಕೊಂಡು ರಂಗಭೂಮಿಯ ಪತನ ತಡೆಗಟ್ಟಲು ಮುಂದಾದವು. ವರದಾಚಾರ್ಯ, ಗುಬ್ಬಿ ವೀರಣ್ಣ, ಸದಾಶಿವರಾವ್ ಗರೂಡ್ ಮೊದಲಾದ ದಿಗ್ಗಜರೆಲ್ಲ ರಂಗಭೂಮಿಯ ಶ್ರೀಮಂತಿಕೆಯನ್ನು ಹೆಚ್ಚಿಸಿದರು. ಜತೆಜತೆಗೇ ಕನ್ನಡಾಭಿಮಾನವನ್ನು ತಮಗೇ ಅರಿವಿಲ್ಲದೆ ಬೆಳೆಸಿದರು.





ಪ್ರಭಾವ, ಸಾಂಸ್ಕೃತಿಕ ದಾಳಿಯಿಂದ ರಂಗಭೂಮಿಯೇನೋ ಪಾರಾಯಿತು.

# ಕರ್ನಾಟಕ ನಾಮಕರಣ



ಆದರೆ ನಂತರದ ದಿನಗಳಲ್ಲಿ ಬೆಳೆದ ಸಿನಿಮಾ ಈ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಅದಾಗಲೇ ಬಯೋಸ್ಕೋಪ್ ಬಂದು ಜನ ಮೂಕಿ ಚಿತ್ರಗಳ ಬೆರಗನ್ನು ಕಂಡು ವಿಸ್ಮಿತರಾಗುತ್ತಿದ್ದಾಗ, ರಂಗಭೂಮಿಯ ಜನ ಸಿನಿಮಾ ಬಂದು ರಂಗಭೂಮಿ ಪತನವಾಗುತ್ತದೆ ಎಂದು ಬೆದರಿದರು. ರಂಗಭೂಮಿಗೆ ಸಿನಿಮಾವೇ ಶತ್ರು ಎಂದೂ ಹೇಳಲಾರಂಭಿಸಿದರು. ಟಿ.ವಿ.ಬಂದಾಗ ಸಿನಿಮಾ ಹೋಗಿಯೇ ಬಿಟ್ಟಿತು ಎಂದು ಹೆದರಿದಂತಾಗಿತ್ತು ಪರಿಸ್ಥಿತಿ. ಬೇರೆ ಬೇರೆ ಆಡಳಿತ ವಿಭಾಗಗಳಲ್ಲಿ ಹಂಚಿಹೋಗಿದ್ದ ಕನ್ನಡ ಭಾಷೆಯನ್ನೇ ಮಾತನಾಡುವ ಜನರೇ ಹೆಚ್ಚಾಗಿದ್ದ ಪ್ರದೇಶಗಳನ್ನು 'ಕರ್ಣಾಟಕ' ಎಂದು ಭೌಗೋಳಿಕವಾಗಿ ಗುರುತಿಸುತ್ತಾ 1956 ನವೆಂಬರ್ 1 ರಂದು 'ಕರ್ನಾಟಕ' ರಾಜ್ಯ ಅಸ್ತಿತ್ವಕ್ಕೆ ಬರುವ ವೇಳೆಗೆ ವಾಕ್ಚಿತ್ರ ಆರಂಭವಾಗಿ 22 ವರ್ಷಗಳಾಗಿಬಿಟ್ಟಿತ್ತು. ಆವರೆಗೆ ಕನ್ನಡದಲ್ಲಿ 74 ವಾಕ್ಚಿತ್ರಗಳು ತಯಾರಾಗಿದ್ದವು.



ಕನ್ನಡದಲ್ಲಿ ಕುಮಾರತ್ರಯರ ಕಾಲ ಆರಂಭವಾಗಿ ಸ್ಟಾರ್ ಪದ್ಧತಿ ಆರಂಭವಾಗಿಯೇ ಬಿಟ್ಟಿತ್ತು. ಆದರೆ ಸ್ವಂತಿಕೆಯೇ ಮಾಯವಾಗಿ ಎಲ್ಲಕ್ಕೂ ಮಹಾರಾಷ್ಟ್ರ, ಮದರಾಸುಗಳನ್ನೇ ಅವಲಂಬಿಸುವ ಪರತಂತ್ರ ಸ್ಥಿತಿ ನಿರ್ಮಾಣವಾಗಿತ್ತು.

ಕನ್ನಡ ಚಿತ್ರೋದ್ಯಮ ಇಂದಿಗೂ ಏಕೀಕರಣದ



ಮುನ್ನ ಇದ್ದ ಪರಿಸ್ಥಿತಿಯಲ್ಲೇ ಇದೆ. ತಮ್ಮ ನಿರ್ಮಾಣದ ಚಿತ್ರಗಳನ್ನು ವಿತರಿಸುವಾಗ ನಿರ್ಮಾಪಕರು ಮುಂಬೈ ಕರ್ನಾಟಕ ಪ್ರಾಂತ್ಯ, ಹೈದರಾಬಾದ್ ಕರ್ಣಾಟಕ ಪ್ರಾಂತ್ಯ ಎಂಬೆಲ್ಲಾ ವಿಭಜನೆಗಳನ್ನು ಮಾಡಿಕೊಂಡು ವಿತರಣಾ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದಾರೆ. ಮುಂಬೈ ಪ್ರಾಂತ್ಯದ ಹುಬ್ಬಳ್ಳಿ, ಬೆಳಗಾವಿ, ಬಿಜಾಪುರ (ವಿಜಯಪುರ)ಗಳಲ್ಲಿ ಹಿಂದಿ ಚಿತ್ರಗಳ ಪ್ರಭಾವ ಬಹಳಷ್ಟಿದೆ. ಹೈದರಾಬಾದ್ ಸಂಸ್ಥಾನಕ್ಕೆ ಹಿಂದೆ ಸೇರಿದ್ದ ಬೀದರ್, ಗುಲ್ಬರ್ಗಗಳಲ್ಲಿ ಕೂಡ ಹಿಂದಿಯ ಪ್ರಭಾವವೇ ಇದೆ. ಬಳ್ಳಾರಿ, ಕೋಲಾರ, ರಾಯಚೂರುಗಳಲ್ಲಿ ಆಂಧ್ರದ ಪ್ರಭಾವ ಹೆಚ್ಚಾಗಿದ್ದು ಅಲ್ಲಿ ತೆಲುಗು ಚಿತ್ರಗಳೇ ಹೆಚ್ಚು ಜನಪ್ರಿಯವಾಗುತ್ತವೆ. ರಾಜಧಾನಿಯಲ್ಲಿ ತಮಿಳು ಚಿತ್ರಗಳಿಗೆ ಒಳ್ಳೆಯ ಮಾರುಕಟ್ಟೆ ಇದೆ. ಕನ್ನಡಕ್ಕೆಲ್ಲಿತ್ತು ಜಾಗ?

ಏಕೀಕರಣ ಚಳವಳಿಗೆ ಚಿತ್ರರಂಗವಾಗಲಿ, ರಂಗಭೂಮಿಯಾಗಲಿ ಕ್ರಿಯಾತ್ಮಕವಾಗಿ ಸ್ಪಂದಿಸಿಲ್ಲ. ಅದು ದಾಖಲೆಗಳಲ್ಲಿ ಇಲ್ಲ. ಆದರೆ ಆರಂಭದ ಹಂತದಿಂದಲೇ ಕನ್ನಡದ ಅಸ್ತಿತ್ವಕ್ಕೆ ಕನ್ನಡನಾಡಿನಲ್ಲೆ ಈ ಎರಡೂ ಕಲಾಮಾಧ್ಯಮಗಳನ್ನು ನೆಲೆಯೂರಿಸಿ, ಕನ್ನಡಮಯ ವಾತಾವರಣವನ್ನು ಮೂಡಿಸಬೇಕೆಂಬ ಛಲದಲ್ಲಿ ನಡೆಸಿದ ಯತ್ನಗಳು ಐತಿಹಾಸಿಕ ವಾಗಿವೆ. ರಾಜಾಶ್ರಯ, ಆಂಗ್ಲರ ಸೆನ್ಸಾರ್ ಬಿಗಿನಿಯಮ, ತಂತ್ರಜ್ಞರಿಗಾಗಿ ಪರಾವಲಂಬನೆ ಇವೆಲ್ಲವೂ ಕಲಾವಿದರ ಕೈ ಕಟ್ಟಿ ಹಾಕಿರುವ ಸಾಧ್ಯತೆಯೇ ಹೆಚ್ಚು. ಇಂತಹ ಅಸಹಾಯಕ ಸ್ಥಿತಿಯನ್ನು ಚಿತ್ರರಂಗ ಆರಂಭದ ಘಟ್ಟದಲ್ಲಿ ಅನುಭವಿಸಿತ್ತು.



ರಂಗಭೂಮಿ ಹೇಗೆ ಪಾಶ್ಚಾತ್ಯ ಪ್ರಭಾವ ತಪ್ಪಿಸಿಕೊಳ್ಳಲು ಹೋರಾಡಿ ಮೈಸೂರು ಕೇಂದ್ರದಿಂದ ಕನ್ನಡಾಭಿಮಾನ ಚಳವಳಿಗೆ ಹಾದಿ ಕಂಡುಕೊಂಡಿತೋ ಅದೇ ರೀತಿ ಸಿನಿಮಾರಂಗದಲ್ಲೂ ಕೂಡ ಪರಾವಲಂಬನೆ ತಪ್ಪಿಸಿಕೊಳ್ಳಲು ಸಾಕಷ್ಟು ಹೋರಾಟ ನಡೆದಿದೆ. ಅದರ ಒಂದು ಯತ್ನವೇ ಮೈಸೂರನ್ನು ಚಿತ್ರ ತಯಾರಿಕೆಯ ಕೇಂದ್ರವನ್ನಾಗಿಸಲು ನಡೆಸಿದ ಯತ್ನ. ಕನ್ನಡ ನೆಲದಲ್ಲೇ ಸಿನಿಮಾ ತಯಾರಿಸಲು ಯಾವ ಸೌಲಭ್ಯವಿತ್ತು? ನಮ್ಮ ನೆಲದಲ್ಲಿ ಸ್ಟುಡಿಯೋಗಳೇ ಇರಲಿಲ್ಲ. ಕೊಲ್ಲಾಪುರ, ಮದ್ರಾಸು, ಕೊಯಮತ್ತೂರು, ಮುಂಬೈಗಳಿಗೆ ತೆರಳಿ ಚಿತ್ರೀಕರಣ ಮಾಡಬೇಕಾದ ಪರಿಸ್ಥಿತಿ ಕನ್ನಡ ನಿರ್ಮಾಪಕರದ್ದಾಗಿತ್ತು. ಬೇರೆ ರಾಜ್ಯದ ಈ ಸ್ಟುಡಿಯೋಗಳಲ್ಲಿ ಕನ್ನಡಿಗರಿಗೆ ಬೆಲೆ ಇರಲಿಲ್ಲ. ಅಲ್ಲಿ ತಮಿಳು, ತೆಲುಗು, ಹಿಂದಿ ಚಿತ್ರರಂಗದವರಿಗೇ ಮಣೆ. ಕನ್ನಡದವರು ಚಿತ್ರೀಕರಣಕ್ಕಾಗಿ ಕಾಯಬೇಕಾದ ಸ್ಥಿತಿ. ಇಂತಹ ತಾರತಮ್ಯ ಧೋರಣೆಯಿಂದಾಗಿ ಗುಬ್ಬಿ ವೀರಣ್ಣನವರೇ ನಲುಗಿ ಹೋಗಿದ್ದ ಘಟನೆಗಳೆಲ್ಲಾ ಇತಿಹಾಸ ದಲ್ಲಿ ದಾಖಲಾಗಿವೆ. ಮದರಾಸಿನ ಸ್ಟುಡಿಯೋಗಳಲ್ಲಿದ್ದ ತಂತ್ರಜ್ಞರನ್ನೇ ಕನ್ನಡ ನಿರ್ಮಾಪಕರು ಆಶ್ರಯಿಸಬೇಕಾಗಿತ್ತು. ಅಲ್ಲಿದ್ದವರು ತಮಿಳು ತೆಲುಗು ತಂತ್ರಜ್ಞರು. ಅವರ ಆದ್ಯತೆ ಏನಿದ್ದರೂ ಅವರ ಭಾಷಾ ಚಿತ್ರ ನಿರ್ಮಾಪಕರಿಗೆ. ಕನ್ನಡ ಕಲಾವಿದರನ್ನು, ನಿರ್ದೇಶಕರನ್ನು ಅವರುಗಳು ತಾತ್ಸಾರದಿಂದ ನೋಡುತ್ತಿದ್ದರು. ಸ್ಟುಡಿಯೋದಲ್ಲಿ ಚಿತ್ರೀಕರಣಕ್ಕಾಗಿ ಫ್ಲೋರ್‌ಗಳನ್ನು ನೀಡುವ ವಿಷಯದಲ್ಲೂ ಅನಗತ್ಯ ವಿಳಂಬ ಮಾಡುತ್ತಿದ್ದರು.




ಬೇರೆ ಭಾಷಾ ಚಿತ್ರಗಳ ತಂಡದವರು ಹಗಲಿನಲ್ಲಿ ಚಿತ್ರೀಕರಣ ಮುಗಿಸಿ ತೆರಳಿದ ನಂತರ ಕನ್ನಡ ಚಿತ್ರ ನಿರ್ಮಾಪಕರು ರಾತ್ರಿ ವೇಳೆ ಚಿತ್ರೀಕರಣ ಕಾರ್ಯ ಮುಗಿಸಬೇಕಾಗಿತ್ತು. ಇದು ಕನ್ನಡ ನಿರ್ಮಾಪಕರ, ಕಲಾವಿದರ ಆತ್ಮಾಭಿಮಾನವನ್ನು ಕೆರಳಿಸಿತು. ಕನ್ನಡಿಗರು ಆರಂಭದ ಕಾಲದಲ್ಲಿ ತಯಾರಿಸಿದ ಚಿತ್ರಗಳಿಗೆ ಕನ್ನಡ ಬಾರದ ತಂತ್ರಜ್ಞರೇ ನಿರ್ದೇಶಕರಾಗಿದ್ದುದು ಇಂತಹ ಅಸಹಾಯಕ ಪರಿಸ್ಥಿತಿಯಿಂದಲೇ. ಈ ಎಲ್ಲ ಹಿನ್ನೆಲೆಯಲ್ಲಿ ನಮ್ಮದೇ ಆದ ಸ್ಟುಡಿಯೋ ನಮ್ಮದೇ ನೆಲದಲ್ಲಿ ಸ್ಥಾಪಿಸಿದರೆ ಹೇಗೆ ಎಂಬ ಆಲೋಚನೆ. ಈ ಹಿನ್ನೆಲೆಯೇ ಮೈಸೂರಿನಲ್ಲಿ ಸ್ಟುಡಿಯೋಗಳ ಸ್ಥಾಪನೆಗೆ ಹಾಗೂ ಕನ್ನಡ ಚಿತ್ರೋದ್ಯಮವನ್ನು ಕನ್ನಡನೆಲದಲ್ಲೇ ಸ್ಥಾಪಿಸಬೇಕೆಂಬ ಕೆಲಸಕ್ಕೆ ನಾಂದಿ ಆಯಿತು. ಅಂತಹ ಒಂದು ಬೆಳವಣಿಗೆ 1946 ರಲ್ಲಿ ನಡೆಯಿತು. ಹಾಗೆ ನೋಡಿದರೆ 1944ರಿಂದ 1945 ರ ನಡುವಣ ಅವಧಿ ಕನ್ನಡ ಚಿತ್ರರಂಗದ ಬೆಳವಣಿಗೆಯ ವರ್ಷ.

1946ರಲ್ಲಿ ಇಡೀ ವರ್ಷ ಕನ್ನಡದ ಒಂದೂ ಚಿತ್ರ ತೆರೆ ಕಾಣಲಿಲ್ಲ. ಕನ್ನಡ ಚಿತ್ರ ತಯಾರಿಕೆ ಏಕೆ ಆಗಲಿಲ್ಲ ಎಂಬ ವಿಶ್ಲೇಷಣೆಗಿಂತ ಅದರ ಪರಿಣಾಮ ಗಂಭೀರವಾಗಿತ್ತು. ಹೀಗಾಗಿ 1946 ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದನ್ನು ಆರಂಭಿಸಿದ ವರ್ಷವಾಯಿತು. ಅಲ್ಲಿಯವರೆಗೆ ಮೈಸೂರಿನಲ್ಲಿ ತಯಾರಾದ 'ರಾಜಸೂಯ ಯಾಗ' ಎಂಬ ಚಿತ್ರವೊಂದನ್ನು ಹೊರತು ಪಡಿಸಿ, ಉಳಿದ ಎಲ್ಲ 15ಕನ್ನಡ ಚಿತ್ರಗಳೂ ಕೊಲ್ಲಾಪುರ, ಮುಂಬೈ, ಮದರಾಸು ಸ್ಟುಡಿಯೋಗಳಲ್ಲಿಯೇ ಚಿತ್ರೀಕರಣಗೊಂಡಿದ್ದವು. ಕನ್ನಡ ನಿರ್ಮಾಪಕರು ಇದರಿಂದ ಅಪಾರ ಆರ್ಥಿಕ ತೊಂದರೆಗೆ ಒಳಗಾಗಿ ಕನ್ನಡ ಚಿತ್ರೋದ್ಯಮವೇ ಸ್ಥಗಿತವಾಗುವ ಸ್ಥಿತಿ ಎದುರಾಗಿತ್ತು.




ಇಂತಹ ಸಮಯದಲ್ಲಿ 1946 ರಲ್ಲಿ ಮೈಸೂರಿನಲ್ಲಿ ನವಜ್ಯೋತಿ ಸ್ಟುಡಿಯೋ ಆರಂಭವಾಗಿ ಕನ್ನಡ ಚಿತ್ರರಂಗ ಚೇತರಿಸಿಕೊಂಡಿತು. ಖಾಸಗಿ ಬಸ್ ಗಳ ಮಾಲೀಕರಾಗಿದ್ದ ಜಿ.ಆರ್.ರಾಮಯ್ಯ ಮತ್ತು ಇತರ ಎಂಟು ಮಂದಿ ಗೆಳೆಯರು ಸೇರಿ ಆರಂಭಿಸಿದ ನವಜ್ಯೋತಿ ಸ್ಟುಡಿಯೋದಲ್ಲಿ ಮೂವತ್ತಕ್ಕೂ ಹೆಚ್ಚು ತಯಾರಾಗಿ ಕನ್ನಡ ಚಿತ್ರರಂಗದ ಪತನವನ್ನು ತಡೆಗಟ್ಟಿತು. ಮೈಸೂರು ಕನ್ನಡ ಚಿತ್ರಗಳ ನಿರ್ಮಾಣ ಕೇಂದ್ರವಾಗಿ ಮಾರ್ಪಾಡಾದದ್ದು ಒಂದು ಬೆಳವಣಿಗೆಯೇ ಹೌದು. ಇದೇ ಸಮಯದಲ್ಲೇ ಮೈಸೂರಿನಲ್ಲಿ ಮಹಾತ್ಮ ಪಿಕ್ಚರ್ಸ್ ಅಸ್ತಿತ್ವಕ್ಕೆ ಬಂದಿತು. ಡಿ.ಶಂಕರ್ ಸಿಂಗ್, ಬಿ.ವಿಠಲಾಚಾರ್ಯ, ಜಿ.ಎಸ್.ವಿಶ್ವನಾಥಶೆಟ್ಟಿ ಹಾಗೂ ಡಿ.ರಾಮಸ್ವಾಮಿ ಮತ್ತು ಅರಸೀಕರೆ ಗೆಳೆಯರು ಮಹಾತ್ಮ ಪಿಕ್ಚರ್ಸ್ ಚಿತ್ರ ಸಂಸ್ಥೆ ಆರಂಭಿಸಿ ಸತತವಾಗಿ ನವಜ್ಯೋತಿಯಲ್ಲೇ ಕನ್ನಡ ಚಿತ್ರಗಳನ್ನು ನಿರ್ಮಿಸುತ್ತಾ ಕನ್ನಡ ಪ್ರೇಕ್ಷಕರ ಸಿನಿಮಾ ಅಭಿರುಚಿಯನ್ನು ಬೆಳೆಸಿದರು. ಶಂಕರ್‌ಸಿಂಗ್ ಮೈಸೂರಿನಲ್ಲೇ ಕನ್ನಡ ಚಿತ್ರಗಳನ್ನು ನಿರ್ಮಿಸುವ ಶಪಥ ಮಾಡಿ ಅದರಂತೆಯೇ ನಡೆದುಕೊಂಡರು.

ಆರ್ಥಿಕ ಬಿಕ್ಕಟ್ಟಿನಿಂದ ನವಜ್ಯೋತಿ ಸ್ಟುಡಿಯೋ ಮುಚ್ಚಿದ ನಂತರ ಕನ್ನಡ ಚಿತ್ರರಂಗ ಮತ್ತೆ ಮದ್ರಾಸಿಗೆ ವಲಸೆ ಹೋಯಿತು. ಆನಂತರದಲ್ಲಿ ಎಂ.ಎನ್.ಬಸವರಾಜಯ್ಯ ಅವರು ಮೈಸೂರಿನಲ್ಲಿ ಕನ್ನಡ ಚಲನಚಿತ್ರ ಚಟುವಟಿಕೆ ಉಳಿಸಿಕೊಳ್ಳುವ ಯತ್ನ ಆರಂಭಿಸಿದರು. 1954 ರಲ್ಲಿ ಆರಂಭವಾದ ಪ್ರೀಮಿಯರ್ ಸ್ಟುಡಿಯೋ ಚಿತ್ರರಂಗದ ಚಟುವಟಿಕೆಗಳು ಮರಳಿ ಮೈಸೂರಿಗೆ ಬರಲು ನೆರವಾಯಿತು. ಬೆಂಗಳೂರು, ಮೈಸೂರುಗಳಲ್ಲಿ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಚಿತ್ರಮಂದಿರಗಳನ್ನು ಹೊಂದಿಸಿಕೊಳ್ಳಲು ಕೂಡ ಕನ್ನಡ ನಿರ್ಮಾಪಕರು ಹರಸಾಹಸ ಮಾಡಬೇಕಾಗಿತ್ತು. ಇಂತಹ ಹೋರಾಟಗಳ ಮೂಲಕವೇ ಕನ್ನಡ ಚಿತ್ರರಂಗ ಬೆಳೆಯಲಾರಂಭಿಸಿತು.



**ಎಂ.ಎನ್.ಬಸವರಾಜಯ್ಯ**





# ಕನ್ನಡದಾ ಮಕ್ಕಳೆಲ್ಲಾ ಒಂದಾಗಿ ಬನ್ನಿ...



ಮರಾಠಿ ರಂಗಭೂಮಿಯ ಒತ್ತಡದಿಂದ ತಪ್ಪಿಸಿಕೊಳ್ಳಲು ಒಂದು ಸಾಂಸ್ಕೃತಿಕ ಹೋರಾಟವೇ ನಡೆದಂತೆ ಸಿನಿಮಾ ರಂಗದಲ್ಲಿ ಹಿಂದಿ ಪ್ರಭಾವ ಹಾಗೂ ಇತರ ಭಾಷಾ ಚಿತ್ರಗಳ ಪೈಪೋಟಿ, ಡಬ್ಬಿಂಗ್ ಚಿತ್ರಗಳ ಹಾವಳಿಯಿಂದ ತಪ್ಪಿಸಿಕೊಳ್ಳಲು ಹೋರಾಟ ನಡೆದಿದೆ. ಕನ್ನಡ ಚಿತ್ರೋದ್ಯಮಕ್ಕೆ ಆರಂಭ ದಶಕದಲ್ಲೇ ಅವಸಾನದ ಕಾಲ ಆರಂಭವಾಗಿತ್ತು. ಕನ್ನಡ ಚಿತ್ರಗಳಿಗೆ ಚಿತ್ರಮಂದಿರ ಹೊಂದಿಸಿಕೊಳ್ಳುವುದಕ್ಕೆ ಹರಸಾಹಸ ಮಾಡುವುದು ಒಂದು ಕಡೆ. ಚಿತ್ರರಂಗದ ಅಸ್ತಿತ್ವವನ್ನು ಉಳಿಸುವುದು ಮತ್ತೊಂದು ಕಡೆ. ಈ ಉಭಯ ಸಂಕಟದಲ್ಲಿ ಕನ್ನಡ ಚಿತ್ರರಂಗ ತೊಳಲಾಡುತ್ತಿತ್ತು. 1960 ರ ಸಮಯದ ವೇಳೆಗೆ ಕನ್ನಡ ಚಿತ್ರರಂಗ ಅಳಿವು ಉಳಿವಿನ ಹೋರಾಟದಲ್ಲಿ ನಿರತವಾಗಿತ್ತು.

ಏಕೆಂದರೆ ಈ ವೇಳೆಗೆ ಕನ್ನಡ ಚಿತ್ರಗಳ ತಯಾರಿಕೆ ಇಳಿಮುಖವಾಗಿತ್ತು. 1958 ರಲ್ಲಿ ತಯಾರಾದ ಕನ್ನಡ ಚಿತ್ರಗಳ ಸಂಖ್ಯೆ ಕೇವಲ ಏಳು. 1959 ರಲ್ಲಿ ತಯಾರಾದದ್ದು ಕೇವಲ ಆರು! ಕಲಾವಿದರು ನಿರುದ್ಯೋಗಿಗಳಾದ ಪರಿಸ್ಥಿತಿ. ಚಿತ್ರೋದ್ಯಮ ಕೂಡ ಮದ್ರಾಸು, ಬೆಂಗಳೂರು, ಮೈಸೂರು ಎಂದು ಒಂದು ಕಡೆ ಸ್ಥಿರವಾಗಿ ನಿಲ್ಲದೆ ತೊಯ್ದಾಡುತ್ತಿತ್ತು. ಇಪ್ಪತ್ತೈದು ವರ್ಷಗಳ ನಡೆದುಬಂದ ದಾರಿಯಲ್ಲಿ ಚಿತ್ರರಂಗ ಉದ್ಯಮದ ಸ್ವರೂಪ ಪಡೆಯಬೇಕಾದ ಕಾಲ. ಅಂತಹ ಸಮಯದಲ್ಲೇ ಇದ್ದಕ್ಕಿದ್ದಂತೆ ಕಚ್ಚಾಫಿಲಂ ಮುಗ್ಗಟ್ಟು, ಸೆನ್ಸಾರ್ ಬಿಗಿ, ಚಿತ್ರಗಳ ಉದ್ದದ ಮೇಲೆ ನಿರ್ಬಂಧ ಮೊದಲಾದ ಸಮಸ್ಯೆಗಳು ಉದ್ಭವಿಸಿ ಚಿತ್ರನಿರ್ಮಾಣ ಕಾರ್ಯವೇ ಸ್ಥಗಿತವಾಯಿತು.

ಚಿತ್ರೋದ್ಯಮವನ್ನೇ ನಂಬಿ ಕುಳಿತಿದ್ದ ಕಲಾವಿದರಂತೂ ಕಂಗಾಲಾದರು. ಕಲಾವಿದರೆಲ್ಲಾ ಸಂಘಟಿತರಾಗಿ ಸಹಕಾರ ಸಂಸ್ಥೆಯೊಂದನ್ನು ಸ್ಥಾಪಿಸಿ, ಊರಿಂದೂರಿಗೆ ತೆರಳ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಕೊಂಡರು.ನಾಟಕಗಳಲ್ಲಿ ಅಭಿನಯಿಸಲಾರಂಭಿಸಿದರು. ಚಲನಚಿತ್ರದಲ್ಲಿ ಈಗಾಗಲೇ ಹೆಸರಾಗಿದ್ದ ಕಲಾವಿದರು 'ಕನ್ನಡ ಕಲಾವಿದರು' ಎಂಬ ವೇದಿಕೆಯನ್ನು ರಚಿಸಿಕೊಂಡರು. ಅದೇ ಲಾಂಛನದಲ್ಲಿ 'ರಣಧೀರ ಕಂಠೀರವ'ಎಂಬ ಐತಿಹಾಸಿಕ ಚಲನಚಿತ್ರ ನಿರ್ಮಿಸಿದರು. ಈ ಚಿತ್ರದ ನಿರ್ಮಾಪಕರು ರಾಜ್‌ಕುಮಾರ್, ಜಿ.ವಿ.ಅಯ್ಯರ್, ನರಸಿಂಹರಾಜು ಹಾಗೂ ಟಿ.ಎನ್.ಬಾಲಕೃಷ್ಣ.



ಕನ್ನಡ ಚಿತ್ರರಂಗದ ಬೆಳವಣಿಗೆಯ ದೃಷ್ಟಿಯಿಂದ 'ರಣಧೀರ ಕಂಠೀರವ' ಚಿತ್ರಕ್ಕೆ ತುಂಬಾ ಮಹತ್ವವಿದೆ. ಕನ್ನಡಿಗರನ್ನು ಸಂಘಟಿಸುವುದು ಹಾಗೂ ಕನ್ನಡ ಚಲನಚಿತ್ರಗಳ ಬಗ್ಗೆ ಕುಗ್ಗುತ್ತಿದ್ದ ಆಸಕ್ತಿಯನ್ನು ತಡೆಹಿಡಿಯುವುದು 'ಕನ್ನಡ ಕಲಾವಿದರು' ಸಂಘಟನೆಯ ಉದ್ದೇಶವಾಗಿತ್ತು. ಕನ್ನಡದ ನೂರನೇ ವಾಕ್ಚಿತ್ರವಾಗಿರುವ ಈ ಚಿತ್ರ ಕನ್ನಡದ ಮೊದಲ ಐತಿಹಾಸಿಕ ಚಿತ್ರ ಕೂಡ. ಸಹಕಾರ ತತ್ವದ ಆಧಾರದ ಮೇಲೆ ನಿರ್ಮಿಸಲಾಗಿದ್ದ ಈ ಚಿತ್ರ ಕಲಾವಿದರ ಮನಸ್ಸಿನಲ್ಲಿ ಮೂಡಿದ್ದ 'ನಾನು ನಿರುದ್ಯೋಗಿ' ಎಂಬ ಭಾವನೆಯನ್ನು ಹೋಗಲಾಡಿಸುವ ಮೊದಲಯತ್ನವಾಗಿ ಕಂಡಿತು. ಅಲ್ಲದೆ, ಅಸ್ತಿತ್ವದ ಉಳಿವಿಗಾಗಿ ಹೋರಾಟದ ಮೊದಲ ಹೆಜ್ಜೆಯಾಗಿಯೂ ಇತ್ತು. ಹೀಗಾಗಿ ಈ ಚಿತ್ರದಲ್ಲಿ ಬಹುತೇಕ ಕನ್ನಡದ ಕಲಾವಿದರು ಕಾಣಿಸಿಕೊಂಡರು. ಈ ದೃಷ್ಟಿಯಿಂದ 'ರಣಧೀರ ಕಂಠೀರವ' ಕನ್ನಡಚಿತ್ರರಂಗದ ಒಂದು ಮೈಲುಗಲ್ಲು. ಆದರೆ 'ರಣಧೀರ ಕಂಠೀರವ' ತಯಾರಾದ ಸಮಯ ಹೇಗಿತ್ತೆಂದರೆ ಆಗ ಹಿಂದಿ ಚಲನಚಿತ್ರಗಳದ್ದೇ ಪಾರುಪತ್ಯ. 'ರಣಧೀರ ಕಂಠೀರವ' ಚಲನಚಿತ್ರಕ್ಕೆ ಮೆಜೆಸ್ಟಿಕ್ ಪ್ರದೇಶದಲ್ಲಿ ಒಂದು ಚಿತ್ರಮಂದಿರವೂ ಸಿಗಲಿಲ್ಲ. ಆದುದರಿಂದ ಈ ಚಿತ್ರವನ್ನು ಮೊದಲು ಮೈಸೂರಿನಲ್ಲಿ ಬಿಡುಗಡೆ ಮಾಡಲಾಯಿತು. ಆನಂತರ ಬೆಂಗಳೂರಿನ ಹಿಮಾಲಯ ಚಿತ್ರಮಂದಿರದಲ್ಲಿ ಬಿಡುಗಡೆ ಮಾಡಲಾಯಿತು. ಇದು ಕನ್ನಡದ ಅಭಿಮಾನ ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡಿತು.

ಇದು ವಾಟಾಳ್ ನಾಗರಾಜ್ ಅವರಂತಹ ಹೋರಾಟಗಾರರನ್ನು ಕೆಣಕಿತು. ಕನ್ನಡ ಚಿತ್ರಗಳಿಗೆ ಮೆಜಿಸ್ಟಿಕ್ ಪ್ರದೇಶದಲ್ಲಿ ಚಿತ್ರಮಂದಿರ ಸಿಗದ ಬಗ್ಗೆ ಚಳವಳಿ ಆರಂಭಿಸಿದವರು ವಾಟಾಳ್ ನಾಗರಾಜ್. ಆಗ ಮೆಜೆಸ್ಟಿಕ್ ಪ್ರದೇಶದ ಚಿತ್ರಮಮದಿರಗಳಲ್ಲಿ ತಮಿಳು, ಹಿಂದಿ ಚಿತ್ರಗಳೇ ಬಿಡುಗಡೆಯಾಗುತ್ತಿದ್ದವು. ಕ್ಯೂ ನಿಂತಿದ್ದ ಜನಗಳ ಬಳಿಗೆ ವಾಟಾಳ್ ಅವರು ತೆರಳಿ, ಕನ್ನಡ ಚಿತ್ರ ನೋಡಲು ಹೋಗಿ ಎಂದು ಹೇಳುತ್ತಿದ್ದರು. ನವೆಂಬರ್ ತಿಂಗಳಲ್ಲಿ ಕನ್ನಡ ಚಿತ್ರಗಳನ್ನು ಕಡ್ಡಾಯ ಪ್ರದರ್ಶಿಸಬೇಕೆಂಬ ಹಠತೊಟ್ಟು ವಾಟಾಳ್ ನಾಗರಾಜ್ ಆರಂಭಿಸಿದ ಚಳವಳಿ ಕೂಡ ಫಲ ನೀಡಿತು. ಆಗ ಚಿತ್ರಮಂದಿರಗಳ ಪಾತ್ರ ಕೂಡ ಬಹಳ ಮಹತ್ವದ್ದಾಗಿತ್ತು. 'ರಣಧೀರ ಕಂಠೀರವ'ಕ್ಕೆ ಚಿತ್ರಮಂದಿರ ಸಿಗದೆ ತೊಂದರೆ ಆದ ಘಟನೆಯಿಂದ ನೊಂದ ಷರೀಫ್ ಅವರು ತಮ್ಮ ಒಡೆತನದ ಭಾರತ್ ಚಿತ್ರಮಂದಿರವನ್ನು ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಮಾತ್ರ ಮೀಸಲಿಡುವುದಾಗಿ ಘೋಷಿಸಿದರು. ಅವರಿಗೆ ಉತ್ಸಾಹ ತುಂಬಿದವರು ಕನ್ನಡ ಚಳವಳಿಯಲ್ಲಿದ್ದ ಆರ್.ಲಕ್ಷ್ಮಣ್. ಭಾರತ್ ಚಿತ್ರಮಂದಿರದಲ್ಲಿ ಅದು ಅಸ್ತಿತ್ವದಲ್ಲಿರುವವರೆಗೂ ಕನ್ನಡ ಚಿತ್ರಗಳನ್ನೇ ನೋಡಬಹುದಾಗಿತ್ತು.





ಈ ರೀತಿಯ ಒಂದು ಚಳವಳಿ ಗೂಡುಕಟ್ಟುತ್ತಿರುವ ಪ್ರಾರಂಭಿಕ ಹಂತದಲ್ಲಿಯೇ ಅಂದರೆ, 1961 ರಲ್ಲಿ ನಡೆದ ಒಂದು ಬೆಳವಣಿಗೆ ಕನ್ನಡ ಕಲಾವಿದರು ಹಾಗೂ ಶ್ರೀಸಾಮಾನ್ಯರನ್ನು ಮತ್ತಷ್ಟು ಬೆಸೆಯಿತು. ಆಗ ಕರ್ನಾಟಕವೇ ತತ್ತರಿಸುವಂತೆ ಮಳೆ ಸುರಿದು ಎಲ್ಲೆಡೆ ಭೀಕರ ಪ್ರವಾಹ.ಮನೆಮಠ, ಜನಜಾನುವಾರು ಕಳೆದುಕೊಂಡ ಜನರ ಆರ್ತನಾದ ಕರ್ನಾಟಕದಾದ್ಯಂತ ಕೇಳಿಸಿತು. ಅಂತಹ ಸಮಯದಲ್ಲಿ ನೊಂದಬ ಜನತೆಗೆ ನೆರವಾಗಲು ಚಲನಚಿತ್ರ ಕಲಾವಿದರು ಕಂಕಣಬದ್ಧರಾದರು. ನಾಡಿನಾದ್ಯಂತ ಸಂಚರಿಸಿ ನಿಧಿ ಸಂಗ್ರಹಿಸಿದರು. ಇಂತಹ ಕಾರ್ಯಕ್ಕೆ ವೇದಿಕೆ ಕಲ್ಪಿಸಿದ್ದು 'ಪ್ರಜಾವಾಣಿ'.

1961 ಕನ್ನಡನಾಡಿಗೆ ಭಯಾನಕವಾಗಿ ಪರಿಣಮಿಸಿತು. ಮಳೆ, ನಾಡಿನ ಎಲ್ಲೆಡೆ ಹುಲುಸು ಹಸಿರಿನ ಮಂದಹಾಸ ಮೂಡಿಸುವ ಬದಲಾಗಿ ಅನರ್ಥ ಪರಂಪರೆಯನ್ನೇ ಹಾಸಿತು. ಕಾವೇರಿ, ಕಲಪಿಲೆ, ಹೇಮಾವತಿಯರು, ತುಂಗಭದ್ರೆ, ಶರಾವತಿ. ಕೃಷ್ಣೆ–ಭೀಮೆ–ವರದೆಯರು ಪ್ರಾಣದಾಯಿ ಅಮೃತ ಸಿಂಚನ ಮಾಡುತ್ತಿದ್ದ ಎಡೆಯಲ್ಲಿ ಭೀಕರ ಪ್ರವಾಹದ ರೂಪ ಧರಿಸಿದರು. ಮನೆಮಠ, ಪೈರು ಪಚ್ಚೆ, ಜನ ಜಾನುವಾರು ಬಳಲಿ ಬೆಂಡಾದವು. ಸಾವಿರಗಟ್ಟಳೆ ಮನೆಗಳು ಕುಸಿದವು. ಬೆಳೆಯೆಲ್ಲ ಕೊಚ್ಚಿಕೊಂಡು ಹೋಯಿತು. ಹಸುಗಳು ಪ್ರವಾಹದ ಸುಳಿಯಲ್ಲಿ ಮುಳುಗಿ ಹೋದವು. ಗುಡುಗು, ಸಿಡಿಲು, ಮಿಂಚು, ಕಾರ್ಮೋಡ ಕರಗಿ ಧಾರೆಯಾಗಿ ಹರಿದು ಕಗ್ಗತ್ತಲನ್ನೇ ಕವಿಸಿತು.



ಮುಖ್ಯಮಂತ್ರಿ ಬಿ.ಡಿ.ಜತ್ತಿ ಅವರು ಸಂತ್ರಸ್ತರಿಗೆ ಸಹಾಯ ಮಾಡಲು ಎಲ್ಲರೂ ನೆರವು ನೀಡಬೇಕೆಂದು ಮನವಿ ಮಾಡಿದರು.

ಪ್ರವಾಹ ಸಂತ್ರಸ್ತರಿಗೆ ಇಡೀ ಬಾಳೇ ಗೋಳಾಗಿತ್ತು. ನಿಲ್ಲಲು ನೆರಳು, ಬಟ್ಟೆ, ಅನ್ನ ದುಡಿಯಲು ಸಾಧನ ಎಲ್ಲವೂ ಹೊಸದಾಗಿಯೇ ಬೇಕಾಗಿತ್ತು. ಇಂತಹ ಅನಾಹುತದ ಸಂದರ್ಭದಲ್ಲಿ ನೊಂದವರ ನೆರವಿಗೆ ಯಾರಾದರೂ ಸಜ್ಜಾಗಬೇಕಾಗಿತ್ತು. ಇಂತಹ ಸಮಯದಲ್ಲಿ ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಪತ್ರಿಕೆ, ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್ ಕಂಪನಿಯ ಮಾಲೀಕರಾದ ಕೆ.ವೆಂಕಟಸ್ವಾಮಿ ಹಾಗೂ ಕೆ.ಎನ್.ಗುರುಸ್ವಾಮಿ ಅವರುಗಳ ಮುಂದಾಳತ್ವದಲ್ಲಿ ಪ್ರವಾಹ ಪರಿಹಾರ ನಿಧಿ ಸಂಗ್ರಹ ಯೋಜನೆಯನ್ನು ರೂಪಿಸಲಾಯಿತು. ಇದು ಒಂದು ರೀತಿಯಲ್ಲಿ ಕನ್ನಡ ಚಳವಳಿಗೆ ಪೂರಕವಾದ ಅಭೂತಪೂರ್ವ ಯೋಜನೆ. ಕನ್ನಡ ಚಲನಚಿತ್ರ ಕಲಾವಿದರು ನಾಡಿನಾದ್ಯಂತ ಸಂಚರಿಸಿ ಜನರಿಂದ ಹಣ ಸಂಗ್ರಹಹಿಸುವುದು, ಜತೆಗೆ ಮುಖ್ಯ ಕೇಂದ್ರಗಳಲ್ಲಿ ರಸಮಂಜರಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಅದರಿಂದಲೂ ನಿಧಿ ಸಂಗ್ರಹಿಸಿ, ನೊಂದ ಜನರಿಗೆ ನೆರವು ನೀಡುವುದು ಎಂಬ ಯೋಜನೆ ರೂಪಿಸಲಾಯಿತು. ಅದೇ ಸಮಯಕ್ಕೆ ರಾಜಕುಮಾರ್ ಅವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಬೆಂಗಳೂರಿಗೆ ಬಂದಿದ್ದರು. ಅವರನ್ನು ಸಂಪರ್ಕಿಸಿದ ಸಮಿತಿ ಸದಸ್ಯರು ಅವರ ಸಹಾಯ ಕೋರಿದರು. ರಾಜ್‌ಕುಮಾರ್ ಒಪ್ಪಿಕೊಂಡರು. ಕಲಾವಿದರ ಪಟ್ಟಿಯೇ ತಯಾರಾಗಿ, ಎಲ್ಲ ಕಲಾವಿದರಿಗೂ ಕರೆಹೋಯಿತು.






ಕನ್ನಡ ಚಿತ್ರರಂಗದ ಒಂದು ಅಪೂರ್ವ ಸಂಘಟನೆ ಆರಂಭವಾಗಿತ್ತು. 1961 ರ ಆಗಸ್ಟ್ 19 ಹಾಗೂ 20 ರಂದು ಈ ಕೆಲಸದ ಮುಹೂರ್ತ ಗೊತ್ತಾಯಿತು. ಆಗಸ್ಟ್ 19 ರಂದು ಕಲಾವಿದರೆಲ್ಲರೂ ಮದ್ರಾಸಿನಿಂದ ಬೆಂಗಳೂರಿಗೆ ಬಂದು ಸೇರಿದರು. ಕಲಾವಿದರು ಬಿಡಾರ ಹೂಡಿದ್ದ ಮದ್ರಾಸ್ ವುಡ್‌ಲ್ಯಾಂಡ್ಸ್ ಹೋಟೆಲಿನಿಂದಲೇ ನಿಧಿ ಸಂಗ್ರಹ ಕಾರ್ಯ ಆರಂಭವಾಯಿತು. 20 ರಂದು ಕಲಾವಿದರ ಮೆರವಣಿಗೆ ಹಾಗೂ ರಾತ್ರಿ ನಡೆದ ಸಹಾಯಾರ್ಥ ಮನರಂಜನೆ ಕಾರ್ಯಕ್ರಮದಿಂದ ರೂ. 22.025 ಸಂಗ್ರಹವಾಯಿತು.


ಕಲಾವಿದರನ್ನು ತಂಡತಂಡವಾಗಿ ಮಾಡಿ ರಾಜ್ಯದ ಎಲ್ಲ ದಿಕ್ಕುಗಳಿಗೂ ಕಳುಹಿಸಿ ನೆರೆ ಪರಿಹಾರ ನಿಧಿ ಸಂಗ್ರಹಿಸುವ ಯೋಜನೆ ಫಲ ಕೊಟ್ಟಿತು. ಹಳ್ಳಿಹಳ್ಳಿಗಳಿಗೆ ಸಿನಿಮಾ ಕಲಾವಿದರು ಕಾಲಿಟ್ಟದ್ದೇ ತಡ ಜನರಲ್ಲಿ ಮಿಂಚಿನ ಸಂಚಾರ. ಕಲಾವಿದರನ್ನು ಕಾಣಲು ಜನ ಊರೂರಲ್ಲಿ ಕಾದು ನಿಂತರು. ಅಭೂತಪೂರ್ವವಾಗಿ ಸ್ವಾಗತಿಸಿದರು. ಇದು ಕಲಾವಿದರು ಹಾಗೂ ಕನ್ನಡಿಗರನಡುವೆ ಒಂದು ರೀತಿಯ ಆತ್ಮೀಯ ಸಂಬಂಧಬೆಳೆಯಲು ಕಾರಣವಾದ ಘಟನೆ. ರಾಜ್ ಕುಮಾರ್, ಉದಯಕುಮಾರ್, ಕಲ್ಯಾಣ್‌ಕುಮಾರ್, ಗುಬ್ಬಿವೀರಣ್ಣ, ನಾಗೇಂದ್ರರಾವ್, ಕೆಂಪರಾಜ್,


ನರಸಿಂಹರಾಜು, ಹೊನ್ನಪ್ಪ ಭಾಗವತರ್, ಸುಬ್ಬಯ್ಯ ನಾಯ್ಡು, ಪಂತುಲು, ರಂಗ, ಲಕ್ಷ್ಮೀಬಾಯಿ, ಎಂ.ವಿ.ರಾಜಮ್ಮ. ಸಂಧ್ಯಾ, ಬಿ.ಜಯಮ್ಮ, ಕೃಷ್ಣಕುಮಾರಿ, ಮೈನಾವತಿ, ಬಿ.ಸರೋಜಾದೇವಿ, ಲೀಲಾವತಿ, ಹರಿಣಿ, ಪಂಡರಿಬಾಯಿ, ಹುಣಸೂರು ಕೃಷ್ಣಮೂರ್ತಿ, ಸಿ.ವಿ.ಶಿವಶಂಕರ್, ಜಿ.ವಿ.ಅಯ್ಯರ್, ಆರ್.ಎನ್.ಸುದರ್ಶನ್, ಕೆ.ಎಸ್.ಅಶ್ವತ್ಥ್, ಭಗವಾನ್, ರತ್ನಾಕರ್, ಆರ್. ಎನ್.ಜಯಗೋಪಾಲ್, ಬಿ.ಎಸ್.ರಂಗಾ, ಆರ್.ಶಿವರಾಂ ಮೊದಲಾದ ಕಲಾವಿದರುಗಳ ತಂಡ ನಾಡಿನಾದ್ಯಂತ ಸಂಚರಿಸಿ ಸುಮಾರು 35 ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ಮುಖ್ಯಮಂತ್ರಿ ಬಿ.ಡಿಜತ್ತಿ ಅವರಿಗೆ ಸಲ್ಲಿಸಿತು. ಕಲಾವಿದರ ಬಗ್ಗೆ ಇರುವ ಅಭಿಮಾನದ ಮಹಾಪೂರ, ಕಲಾವಿದರು, ನಿರ್ಮಾಪಕರು,ನಿರ್ದೇಶಕರು ಚಿತ್ರರಂಗದಲ್ಲಿ ಮತ್ತಷ್ಟು ತೊಡಗಿಸಿಕೊಳ್ಳಲು ಉತ್ತೇಜನ ನೀಡಿದ್ದೇ ಅಲ್ಲದೆ ಅವರ ಜವಾಬ್ದಾರಿಯನ್ನು ನೆನಪಿಸಿತು.















ಇದೇ ಅವಧಿಯಲ್ಲಿ ಚಿತ್ರರಂಗದಲ್ಲಿ ಡಬ್ಬಿಂಗ್ ಚಿತ್ರಗಳು ಹೆಚ್ಚುಹೆಚ್ಚಾಗಿ ಬರಲಾರಂಭಿಸಿದವು. ಇದರಿಂದಾಗಿ ಸೀಮಿತ ವಲಯದ ಮಾರುಕಟ್ಟೆ ಹೊಂದಿರುವ ಕನ್ನಡ ಚಿತ್ರರಂಗಕ್ಕೆ ತೀವ್ರ ಧಕ್ಕೆ ಬಂದೊದಗಿತು. ಡಬ್ಬಿಂಗ್ ಚಿತ್ರ ವಿರೋಧಿ ಚಳವಳಿಗೆ ಕಾವು ನೀಡಿದ್ದೇ ಅನಕೃ. 1960 ರಲ್ಲಿ ಮಣಿಪಾಲದಲ್ಲಿ ನಡೆದ 42 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ವಹಿಸಿದ್ದ ಅನಕೃ, ರಾಜ್ಯ ಸರ್ಕಾರವೇ ಕನ್ನಡಿಗರನ್ನು ಅಲಕ್ಷಿಸುತ್ತಿದೆ ಎಂದು ಘರ್ಜಿಸಿದ್ದರು. ಮ.ರಾಮಮೂರ್ತಿ, ಬಂದಗದ್ದೆ ರಮೇಶ್, ಕೆ.ಜಿ.ಮಹೇಶ್ವರಪ್ಪ, ಕೋಣಂದೂರು ಲಿಂಗಪ್ಪ ಮೊದಲಾದವರೆಲ್ಲಾ ಸೇರಿ 'ಕನ್ನಡ ಯುವಜನ ಸಭಾ' ಎಂಬ ಸಂಘಟನೆ ಕಟ್ಟಿದರು. ಡಬ್ಬಿಂಗ್ ವಿರುದ್ಧವೇ ಅಲ್ಲದೆ, ಕನ್ನಡ ಚಿತ್ರಗಳಿಗೆ ಚಿತ್ರಮಂದಿರ ಸಿಗಬೇಕು ಎಂದೂ ಚಳವಳಿ ಆರಂಭವಾಯಿತು. 1962 ರಲ್ಲಿ ಮ.ರಾಮಮೂರ್ತಿ ಅವರ ನೇತೃತ್ವದಲ್ಲಿ ಕನ್ನಡಿಗರ ಸಮ್ಮೇಳನ ನಡೆಯಿತು. ಅಲ್ಲೊಂದು 'ಕರ್ನಾಟಕ ಸಂಯುಕ್ತ ರಂಗ ಉದಯಿಸಿತು'. ಅನಕೃ, ನಾಡಿಗೇರ ಕೃಷ್ಣರಾವ್, ವೀರಕೇಸರಿ ಸೀತಾರಾಮ ಶಾಸ್ತ್ರಿ, ಎಂ.ಎಸ್.ನಟರಾಜ್, ತರಾಸು ಅವರೆಲ್ಲಾ ಚಳವಳಿಗೆ ಇಳಿದರು. 1963 ರಲ್ಲಿ ಕನ್ನಡ ಚಿತ್ರ ಪ್ರೇಮಿಗಳ ಸಂಘ ಮ.ನ.ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ರಚನೆಯಾಯಿತು. ಗೋಪಾಲ್, ಅರಸುಕುಮಾರ್, ಲಕ್ಷಣ್ ಇದರಲ್ಲಿದ್ದರು. ಕನ್ನಡ ಕಲಾವಿದರಿಗೆ ಮೊದಲು ಸನ್ಮಾನ ಮಾಡಿದ್ದೇ ಈ ಸಂಘ. 1963 ರಲ್ಲಿ ಬೆಂಗಳೂರಿನಲ್ಲಿ ರಾಮೋತ್ಸವ ಕಾರ್ಯಕ್ರಮದ ಎದುರು ನಡೆದ ಪ್ರತಿಭಟನೆ ಚಳವಳಿಗೊಂದು ತಿರುವು ನೀಡಿತು. ಮತ್ತೆ ಉಗ್ರವಾದ ಚಳವಳಿ. ಕನ್ನಡ ಚಿತ್ರಪ್ರದರ್ಶಿಸದ ಚಿತ್ರಮಂದಿರಗಳತ್ತ ತಿರುಗಿ, ಬೇರೆ ದಿಕ್ಕಿನತ್ತ ಸಾಗಿತು.









ಕನ್ನಡ ಚಳವಳಿಯ ಕಾವು ಗ್ರಾಮಾಂತರ ಪ್ರದೇಶಗಳಿಗೂ ತಲುಪಿದ್ದರಿಂದ ಕನ್ನಡ ಚಿತ್ರಗಳ ಸರಾಸರಿ ಸಂಪಾದನೆಯ ಪ್ರಮಾಣವೂ ಹೆಚ್ಚಾಯಿತು. ಇದರಿಂದಾಗಿ ಕನ್ನಡ ಕಾದಂಬರಿಗಳನ್ನಾಧರಿಸಿದ ಚಿತ್ರಗಳು ಹೆಚ್ಚುಹೆಚ್ಚಾಗಿ ಬರಲಾರಂಭಿಸಿದವು. ಇದರಿಂದಾಗಿ ಚಿತ್ರರಂಗದ ಮೇಲೆ ಪರಿವರ್ತನೆಯ ಗಾಳಿ ಬೀಸಲಾರಂಭಿಸಿತು. ಚಿತ್ರಮಂದಿರಗಳಲ್ಲಿ ಸಿನಿಮಾ ಆರಂಭಕ್ಕೆ ಮುನ್ನ 'ಉದಯವಾಯಿತು ನಮ್ಮ ಚೆಲುವ ಕನ್ನಡನಾಡು' ನಾಡಗೀತೆಯಂತೆ ಕಡ್ಡಾಯವಾಗಿ ಮೊಳಗಲಾರಂಭಿಸಿತು. ಸಿನಿಮಾಗಳಲ್ಲಿ ಕನ್ನಡ ನಾಡು ನುಡಿಯ ಮಹತ್ವ ಸಾರುವ ಸಂಭಾಷಣೆ, ಹಾಡು ಮೂಡಲಾರಂಭಿಸಿದವು. 'ಕಣ್ತೆರೆದು ನೋಡು' ಚಿತ್ರದಲ್ಲಿ 'ಕನ್ನಡದಾ ಮಕ್ಕಳೆಲ್ಲಾ ಒಂದಾಗಿ ಬನ್ನಿ..ನಾನ್ ಕೀಳ್ ಎಂಬುವರ ಬಾಯ್ ಮುಚ್ಚ ಬನ್ನಿ...'ಎಂಬ ಹಾಡು ಜನಪ್ರಿಯವಾಯಿತಲ್ಲದೆ, ಕನ್ನಡ ಚಳವಳಿ ಸಭೆಗಳಲ್ಲಿ ಆರಂಭದ ಸ್ಫೂರ್ತಿಗೀತೆಯಾಯಿತು. ಇದರಿಂದಾಗಿ 1963 ರಲ್ಲಿ ಕನ್ನಡ ಚಿತ್ರಗಳ ನಿರ್ಮಾಣ ಹೆಚ್ಚಲು ಕಾರಣವಾಯಿತು. ಆ ವರ್ಷ 21 ಕನ್ನಡ ಚಿತ್ರಗಳು ಬಿಡುಗಡೆಯಾದವು. 1964 ರಲ್ಲಿ ಎಂಜಿಆರ್ ಅಭಿನಯದ 'ಕಾಂಚಿ ತಲೈವನ್' ಎಂಬ ತಮಿಳು ಚಿತ್ರ ಬಿಡುಗಡೆಯಾಗಿತ್ತು. ಈ ಚಿತ್ರದಲ್ಲಿ ತಮಿಳುನಾಡಿನ ಅರಸನೊಬ್ಬ ಪುಲಕೇಶಿಯನ್ನು ಸೋಲಿಸಿ, ಕರ್ನಾಟಕದ ಬಾವುಟವನ್ನು ತುಳಿಯುವ ದೃಶ್ಯವಿತ್ತು. ಅದರ ವಿರುದ್ಧ ಪ್ರತಿಭಟಿಸುವಂತೆ ಕನ್ನಡ ಚಳವಳಿಯ ನೇತೃತ್ವ ವಹಿಸಿದ್ದ ಅನಕೃ ಹಾಗು ಮ.ರಾಮಮೂರ್ತಿ ಅವರು ಕರೆ ನೀಡಿದರು. ಪ್ರತಿಭಟನೆ ಹಿಂಸಾಮಾರ್ಗಕ್ಕೆ ಇಳಿಯಿತು. ಆಗ ಎಂಜಿಆರ್ ಅವರೇ ಖುದ್ದು ಬೆಂಗಳೂರಿಗೆ ಬಂದು ಅನಕೃ ಅವರನ್ನು ಭೇಟಿಯಾಗಿ ಕನ್ನಡಿಗರಲ್ಲಿ ಕ್ಷಮೆ ಕೋರಿದರು. ಪ್ರತಿಭಟನೆ ಎಷ್ಟು ಪರಿಣಾಮಕಾರಿಯಾಗಿತ್ತು ಎನ್ನುವುದಕ್ಕೆ ಇದೊಂದು ಉದಾಹರಣೆ. ಅನ್ಯಾಕ್ರಮಣಗಳ ವಿರುದ್ಧ ಕನ್ನಡ ಚಿತ್ರರಂಗ ಹೋರಾಡಿ ಎದೆ ತಟ್ಟಿ ನಿಂತಿತು. ಚಳವಳಿ ತೀವ್ರವಾಯಿತು, ಮೂರು ದಶಕಗಳ ಕಾಲದ ಚಿತ್ರರಂಗದ ಹೊಯ್ದಾಟದ ಹಾದಿಯಲ್ಲಿ ಸ್ಪಷ್ಟ ರೂಪ ಮೊಳಕೆಯೊಡೆಯಲಾರಂಭಿಸಿತು. ಕನ್ನಡ...ಕನ್ನಡ ಎಂದು ಕನ್ನಡ ಪ್ರೇಕ್ಷಕರು ಹಾತೊರೆಯಲಾರಂಭಿಸಿದರು. ಆದರೆ, ವಿಪರ್ಯಾಸ ನೋಡಿ, ಇಷ್ಟೆಲ್ಲಾ ಆದರೂ ಕನ್ನಡ ಚಿತ್ರರಂಗ ಮದ್ರಾಸಿನಲ್ಲೇ ನೆಲೆಯೂರಿತ್ತು. ಎಪ್ಪತ್ತರ ದಶಕದ ಆರಂಭದವರೆಗೆ ಕನ್ನಡ ಚಿತ್ರೋದ್ಯಮ ಕರ್ನಾಟಕದ ರಾಜಧಾನಿಗೆ ಮರಳಲೇ ಇಲ್ಲ. 'ಗುಗ್ಗುಮಹಲ್' ನಲ್ಲಿ ಬೇಕಾದರೆ ಇರುತ್ತೇನೆ. ಬೆಂಗಳೂರಿಗೆ ಬರಲಾರೆ ಎಂದು ಕಲಾವಿದರು, ತಂತ್ರಜ್ಞರು ಅಲ್ಲೇ ಉಳಿದುಕೊಂಡರೇ ವಿನಾ ಬೆಂಗಳೂರಿಗೆ ಬರಲಿಲ್ಲ. ಗುಗ್ಗುಮಹಲ್‌ನ ಕತೆ ಕೂಡ ಸ್ವಾರಸ್ಯಕರವಾಗಿದೆ. ಚಿತ್ರರಂಗದ ಆರಂಭದ ದಶಕಗಳಲ್ಲಿ ಚಿತ್ರೀಕರಣಕ್ಕೆಂದೋ, ಅವಕಾಶವನ್ನು ಅರಸಿಯೋ ಮದ್ರಾಸಿಗೆ ತೆರಳುತ್ತಿದ್ದ ಕಲಾವಿದರಿಗೆ ಗುಗ್ಗುಮಹಲ್ ಆಶ್ರಯತಾಣವಾಗಿತ್ತು. ಸಣ್ಣಪುಟ್ಟ ಹಾಸ್ಯಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ನಟ ಅಶ್ವತ್ಥನಾರಾಯಣ ಶೆಟ್ಟಿ ಅವರನ್ನು ಎಲ್ಲರೂ ಗುಗ್ಗು ಎಂದೇ ಕರೆಯುತ್ತಿದ್ದರು. ಮದರಾಸಿನಲ್ಲಿ ಸಣ್ಣ ಮಹಡಿ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಅವರು ಅಲ್ಲೇ ವಾಸಿಸುತ್ತಿದ್ದರು. ಬಹುತೇಕ






ಕಲಾವಿದರು ಅಲ್ಲೇ ವಾಸಿಸುತ್ತಿದ್ದರು. ಆ ಮನೆಯ ಸುತ್ತಮುತ್ತ ಕೆಲವರು ಮನೆ ಬಾಡಿಗೆ ಪಡೆದು ವಾಸಿಸುತ್ತಿದ್ದರು. ಕನ್ನಡ ಕಲಾವಿದರ ಎರಡು ವಠಾರಗಳೇ ಮದ್ರಾಸಿನಲ್ಲಿತ್ತು. ಕನ್ನಡ ಚಿತ್ರಗಳ ನಿರ್ಮಾಣ ಮದರಾಸಿನಲ್ಲಿ. ಹಂಚಿಕೆ, ಪ್ರದರ್ಶನ ಬೆಂಗಳೂರಿನಲ್ಲಿ. ವಿತರಣಾ ವ್ಯವಸ್ಥೆ ಕೂಡ ಬಹುತೇಕ ಕನ್ನಡೇತರರ ಕೈಯಲ್ಲೇ ಇತ್ತು.ಚಿತ್ರೋದ್ಯಮಕ್ಕೆ ಸರ್ಕಾರದಿಂದ ಉತ್ತೇಜನ ಇಲ್ಲವಾಗಿತ್ತು.




ಆದರೂ ಅಖಂಡ ಮೈಸೂರು ರಾಜ್ಯ ಸ್ಥಾಪನೆಯಾದ ನಂತರ ಕನ್ನಡ ಚಿತ್ರಗಳ ತಯಾರಿಕೆ ದುಪ್ಪಟ್ಟಾಯಿತು. ಇದಕ್ಕೆ ಭಾಷೆ ಮತ್ತು ನಾಡಿನ ಜನರಲ್ಲಿ ಅಭಿಮಾನ ಬೆಳೆದದ್ದೇ ಕಾರಣ. ಚಿತ್ರೋದ್ಯಮ ಕನ್ನಡನಾಡಿನಲ್ಲಿ ನೆಲೆಯೂರಿದರೆ ಮಾತ್ರ ಕನ್ನಡ ಚಿತ್ರರಂಗ ಆರ್ಥಿಕವಾಗಿ ಸಮೃದ್ಧವಾಗಲು ಸಾದ್ಯ ಎಂಬ ಒತ್ತಾಯ ಜನರಿಂದಲೇ ಆರಂಭವಾಯಿತು. ರಾಜ್ಯದಲ್ಲಿ ಒಂದು ಪೂರ್ಣ ಚಿತ್ರ ತಯಾರಿಸಲು ಬೇಕಾದ ಸುಸಜ್ಜಿತ ಸ್ಟುಡಿಯೋ ಇಲ್ಲ. ಸಂಸ್ಕರಣ ಕೇಂದ್ರ ಇಲ್ಲ. ಯಾವುದೇ ಸೌಕರ್ಯಗಳಿಲ್ಲ. ಯಾವ ಧೈರ್ಯದ ಮೇಲೆ ಬೆಂಗಳೂರಿಗೆ ಸ್ಥಳಾಂತರಗೊಳ್ಳಲು ಸಾಧ್ಯ? ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿತ್ತು. ಈ ವೇಳೆಗಾಗಲೇ ನೆರೆಯ ಆಂಧ್ರಪ್ರದೇಶ,ಮಹಾರಾಷ್ಟ್ರ, ಮಾತ್ರವಲ್ಲದೆ ಪಶ್ಚಿಮ ಬಂಗಾಳ, ಒರಿಸ್ಸಾ, ಬಿಹಾರ ಸರ್ಕಾರಗಳು ತಮ್ಮತಮ್ಮ ರಾಜ್ಯಗಳಲ್ಲಿ ಚಿತ್ರೋದ್ಯಮದ ಪ್ರಗತಿಗೆ ನೆರವು ನೀಡಲಾರಂಭಿಸಿದ್ದವು. ಸಹಾಯಧನ ನೀಡುವ ಪದ್ಧತಿ ಆರಂಭವಾಗಿತ್ತು. ಇಂತಹ ಸಹಾಯಗಳನ್ನು ನೀಡಬೇಕೆಂದು ಪ್ರಿಮಿಯರ್ ಸ್ಟುಡಿಯೋ ಮಾಲೀಕರಾದ ಬಸವರಾಜಯ್ಯ ಅವರು ಸರ್ಕಾರದ ಮೇಲೆ ಒತ್ತಡ ಹೇರಿದರು.



ಆ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಅವಲೋಕಿಸಿದ ರಾಜ್ಯ ಸರ್ಕಾರ ಕನ್ನಡ ಚಿತ್ರರಂಗದ ಬೆಳವಣಿಗೆಗೆ ಸಹಕಾರಿಯಾಗುವಂತಹ ಯೋಜನೆಗಳನ್ನು ರೂಪಿಸಲು ಆಲೋಚಿಸಿತು. ಮೈಸೂರು ರಾಜ್ಯದಲ್ಲಿ ತಯಾರಾದ ಎಲ್ಲ ಕನ್ನಡ ಚಿತ್ರಗಳಿಗೆ ಸಬ್ಸಿಡಿ ನೀಡುವ ಯೋಜನೆ 1966 ನೇ ಏಪ್ರಿಲ್ 1 ರಿಂದ ಜಾರಿಗೆ ಬಂದಿತು.ಮನರಂಜನಾ ತೆರಿಗೆಯ ಮೇಲೆ ಸರ್ ಚಾರ್ಜ್ ವಿಧಿಸಿ, ಇದರಿಂದ ಸಂಗ್ರಹವಾಗುವ ಸಮಗ್ರ ಮೊತ್ತವನ್ನು ಕನ್ನಡ ಚಿತ್ರೋದ್ಯಮದ ಅಭಿವೃದ್ಧಿಗಾಗಿ ಬಳಸುವುದಾಗಿ 1967–68 ರ ಬಜೆಟ್ ನಲ್ಲಿ ಅಂದಿನ ಹಣಕಾಸು ಸಚಿವರಾಗಿದ್ದ ರಾಮಕೃಷ್ಣ ಹೆಗಡೆ ಅವರು ಪ್ರಕಟಿಸಿದರು. ಸಹಾಯಧನ ಪಡೆಯಲು ಸರ್ಕಾರ ಸವಲತ್ತು ಪಡೆಯಲು ಒಡ್ಡಿದ ಷರತ್ತುಗಳು, ಚಿತ್ರೋದ್ಯಮ ಕನ್ನಡನಾಡಿಗೆ ಸ್ಥಳಾಂತರಗೊಳ್ಳಬೇಕು ಎಂಬ ಆಶಯ ಹೊಂದಿದ್ದವು. ಸಹಾಯಧನ ಪಡೆಯುವ ಚಿತ್ರಗಳು ರಾಜ್ಯದಲ್ಲೇ ಸಂಪೂರ್ಣವಾಗಿ ತಯಾರಾಗಿರಬೇಕು, ಚಿತ್ರದ ಪ್ರಿಂಟ್, ಸಂಸ್ಕರಣ ಕೂಡಾ ರಾಜ್ಯದಲ್ಲೇ ಆಗಿರಬೇಕು, ಚಿತ್ರ ನಿರ್ಮಾಪಕರು ತಮ್ಮ ಸಂಸ್ಥೆಯನ್ನು ಕೂಡ ಮೈಸೂರು ರಾಜ್ಯದಲ್ಲೇ ನೊಂದಾಯಿಸಿರಬೇಕು ಎಂದು ಷರತ್ತು ಹಾಕಿದ ಸರ್ಕಾರ, ಡಬ್ ಮಾಡಿದ ಚಿತ್ರಗಳಿಗೆ ಸಹಾಯಧನ ಇಲ್ಲ ಎಂದು ಕರಾರುವಾಕ್ಕಾಗಿ ಹೇಳಿತು. ಕನ್ನಡ ಚಲನಚಿತ್ರ ನಿರ್ಮಾಪಕರಿಗೆ ಸಹಾಯ ಮಾಡುವ ಉದ್ದೇಶದಿಂದ ಕಂಠೀರವ ಸ್ಟುಡಿಯೋ ಆವರಣದಲ್ಲಿ ಲ್ಯಾಬೊಂದನ್ನು ಸ್ಥಾಪಿಸಲಾಯಿತು. ಕನ್ನಡ ನಿರ್ಮಾಪಕರು ಕನ್ನಡನಾಡಿಗೆ ಮರಳದೇ ವಿಧಿಯೇ ಇಲ್ಲದಂತಾಯಿತು. 1966 ರಿಂದಲೇ ಕನ್ನಡದ ಅತ್ಯುತ್ತಮ ಮೂರು ಚಲನಚಿತ್ರಗಳಿಗೆ ಪ್ರಶಸ್ತಿ ನೀಡುವ ಪದ್ಧತಿ ಆರಂಭಿಸಲಾಯಿತು. ರಾಜ್ಯ ಸರ್ಕಾರದ ಸಹಾಯಧನ, ಮನರಂಜನಾ ತೆರಿಗೆ ವಿನಾಯಿತಿ ಸೌಲಭ್ಯಗಳು ಆಕರ್ಷಕವೆನಿಸಿ ನಿರ್ಮಾಪಕರು ಸ್ಥಳಾಂತರಗೊಳ್ಳಲಾರಂಭಿಸಿದರು. ಸ್ವಂತ ಸ್ಟುಡಿಯೋ ಆರಂಭಿಸುವುದಾಗಿ ಮುಂದೆ ಬಂದ ಪೋಷಕ ನಟ ಟಿ.ಎನ್.ಬಾಲಕೃಷ್ಣ ಅವರಿಗೆ ರಾಜ್ಯ ಸರ್ಕಾರ ಕೆಂಗೇರಿಯ ಬಳಿ ಹದಿನೈದು ಎಕರೆ ಜಮೀನು ಗುತ್ತಿಗೆಗೆ ನೀಡಿತು. ಅದೇ ಸ್ಥಳದಲ್ಲಿ ಬಾಲಕೃಷ್ಣ ಅಭಿಮಾನ್ ಸ್ಟುಡಿಯೋ ಸ್ಥಾಪಿಸಿದರು. ಚಿತ್ರನಗರ ಸ್ಥಾಪಿಸುವ ಉದ್ದೇಶಕ್ಕೂ ಹೆಸರಘಟ್ಟದಲ್ಲಿ ಸ್ಥಳ ಮೀಸಲಿಡಲಾಯಿತು. ಸರ್ಕಾರದ ಕಡೆಯಿಂದ ಸಹಾಯಹಸ್ತ ಬಂದದ್ದೇ ತಡ ಗಾಂಧೀನಗರದಲ್ಲಿ ಕನ್ನಡ ಚಿತ್ರರಂಗದ ಚಟುವಟಿಕೆಗಳು ಗರಿಗೆದರಲಾರಂಭಿಸಿದವು. ಇಂತಹ ಭದ್ರ ಆಸರೆ ದೊರೆತದ್ದೇ ತಡ ಕನ್ನಡ ಚಿತ್ರೋದ್ಯಮದಲ್ಲಿ ಸುವರ್ಣಯುಗ ಆರಂಭವಾಯಿತು.














# ಸುವರ್ಣ ಯುಗ ಸರ್ಕಾರದ ಆಸರೆ







1965 ರ ವೇಳೆಗೆ ಕನ್ನಡ ಚಿತ್ರರಂಗ ಒಂದು ಪ್ರಬುದ್ಧ ಸ್ಥಿತಿ ತಲುಪಿತ್ತು. ಆಗಲೇ ಬಣ್ಣದ ಲೋಕವೂ ತೆರೆದುಕೊಂಡಿತ್ತು. ಈ ವೇಳೆಗೆ ಕನ್ನಡ ಚಿತ್ರಗಳಿಗೆ ಮಾರುಕಟ್ಟೆಯೊಂದನ್ನು ಸೃಷ್ಟಿಸಲು ಹಾಗೂ ತನ್ನದೇ ಆದ ಪ್ರೇಕ್ಷಕ ವರ್ಗವನ್ನು ಸೃಷ್ಟಿಸಲು ಚಿತ್ರರಂಗದ ಗಣ್ಯರು ಶ್ರಮಿಸಿದ್ದರು. ಅದರಲ್ಲಿ ಯಶಸ್ವಿಯೂ ಆಗಿದ್ದರು. ಇತರ ಭಾಷಾ ಚಿತ್ರಗಳಿಗೆ ಇರುವಂತಹ ಸೌಲಭ್ಯ, ಪ್ರದರ್ಶನನಾವಕಾಶ ಕನ್ನಡ ಚಿತ್ರಗಳಿಗೆ ಇರಲಿಲ್ಲ. ಆದರೆ ಸದಭಿರುಚಿಯ ಚಿತ್ರ ತಯಾರಿಕೆಯ ಮೂಲಕ ಕನ್ನಡ ಪ್ರೇಕ್ಷಕ ವರ್ಗವೊಂದನ್ನು ಸೃಷ್ಟಿಸಿದ ಕೀರ್ತಿ ಅರವತ್ತರ ದಶಕದ ನಿರ್ಮಾಪಕ ನಿರ್ದೇಶಕರಿಗೆ ಸಲ್ಲುತ್ತದೆ. ಕನ್ನಡ ಚಿತ್ರರಂಗದ ಪರಿಸ್ಥಿತಿಯನ್ನು ಅರಿತ ರಾಜ್ಯ ಸರ್ಕಾರ ಕನ್ನಡ ಚಿತ್ರಗಳಿಗೆ ಸಹಾಯಧನ ನೀಡುವ ನೀತಿಯನ್ನು ತರುವ ಮೂಲಕ 1967 ರಲ್ಲಿ ಕನ್ನಡ ಚಿತ್ರರಂಗಕ್ಕೆ ಆಸರೆಯಾಗಿ ಬಂದಿತು. ಈ ಪ್ರೋತ್ಸಾಹ ಕೂಡ ಕನ್ನಡ ಚಿತ್ರರಂಗಕ್ಕೆ, ಚಿತ್ರ ತಯಾರಿಕೆಯಲ್ಲಿ ಏರಿಕೆಗೆ ಪ್ರಮುಖ ಕಾರಣವಾಗಿದೆ. ರಾಜ್ಯದಲ್ಲೇ ತಯಾರಾದ ಚಿತ್ರಗಳಿಗೆ ಮಾತ್ರ ಸಹಾಯಧನ ಎಂಬ ಅಂಶ ಕನ್ನಡ ಚಿತ್ರರಂಗ ಕರ್ನಾಟಕದಲ್ಲಿ ನೆಲೆಯೂರುವಂತೆ ಮಾಡಿತು. ನಿರ್ಮಾಪಕರಿಗೆ ಆರ್ಥಿಕ ಭದ್ರತೆ ನೀಡಿದಂತಾಯಿತು. ಶೇ. 50 ರಷ್ಟು ತೆರಿಗೆ ವಿನಾಯಿತಿ ಕೂಡ ಚಿತ್ರರಂಗಕ್ಕೆ ಸರ್ಕಾರದ ಕೊಡುಗೆ. ಕೆಲವು ಚಿತ್ರಗಳಿಗೆ ಶೇ. ನೂರು ವಿನಾಯಿತಿಯೂ ದೊರಕಿತು. ಇದರೊಂದಿಗೆ ಸರ್ಕಾರ ಕನ್ನಡ ಚಿತ್ರಗಳಿಗೆ ಪ್ರತೀ ವರ್ಷ ಉತ್ತಮ ಚಿತ್ರಗಳಿಗೆ, ಕಲಾವಿದರಿಗೆ, ತಂತ್ರಜ್ಞರಿಗೆ ಹೀಗೆ ಅತ್ಯುತ್ತಮ ಪ್ರಶಸ್ತಿ ನೀಡಲಾರಂಭಿಸಿದ್ದು ಕೂಡ ಕನ್ನಡ ಚಿತ್ರರಂಗಕ್ಕೆ ಪ್ರೋತ್ಸಾಹ ದೊರಕಿದಂತಾಯಿತು.















1965 ರಿಂದ 1985 ರವರೆಗಿನ ಕನ್ನಡ ಚಿತ್ರರಂಗದ 20 ವರ್ಷಗಳ ಹಾದಿಯಲ್ಲಿ ಈ ಆಸರೆಗಳೂ ನೆರವಿಗೆ ಬಂದು ಕನ್ನಡ ಚಿತ್ರರಂಗ ಸುವರ್ಣಯುಗವನ್ನೇ ಕಂಡಿತು. ಅನಕೃ ಅವರ ಕಾದಂಬರಿ ಆಧರಿಸಿದ "ಸಂಧ್ಯಾರಾಗ", ಕನ್ನಡದ ಸದಭಿರುಚಿಗೆ ಸಾಕ್ಷಿಯಾಯಿತು. ಈ ಘಟ್ಟದಲ್ಲಿ ಕನ್ನಡ ಚಿತ್ರರಂಗ ಎಂದೂ ಅಳಿಸಲಾಗದ ಮಹತ್ವದ ಹೆಜ್ಜೆ ಗುರುತುಗಳನ್ನು ಇಟ್ಟಿದೆ. ಕನ್ನಡ ಚಿತ್ರರಂಗದ ಮುನ್ನಡೆಗೆ ಇವೆಲ್ಲಾ ಭದ್ರ ಬುನಾದಿ ಹಾಕಿದವು. ತಂತ್ರಜ್ಞಾನ ಸುಧಾರಣೆಯ ಜೊತೆಗೆ ಹಂತಹಂತವಾಗಿ ಬಣ್ಣದತ್ತ ಹೊರಳಿದ್ದೂ ಕೂಡ ಈ ದಶಕಗಳಲ್ಲೇ. ಜಾನಪದ, ಪೌರಾಣಿಕಗಳು ಕಡಿಮೆಯಾಗಿ, ಸಾಮಾಜಿಕ, ಬಾಂಡ್ ಶೈಲಿಯ ಚಿತ್ರಗಳತ್ತ ಉದ್ಯಮ ಹೊರಳಿತು. ಹೊಸಹೊಸ ಟ್ರೆಂಡ್ಗಳ ಜಾಡು ಹಿಡಿಯುವ ಪ್ರವೃತ್ತಿ ಆರಂಭವಾಯಿತು .ರಾಜ್ ಕುಮಾರ್ ಅವರ ಸಿಐಡಿ 999 ಜಾಡಿನ ಪತ್ತೇದಾರಿ ಚಿತ್ರಗಳು ಬಂದವು. ಜೇಡರ ಬಲೆ ಯಿಂದ ಆರಂಭ. ಈ ಕಾಲಾವಧಿಯಲ್ಲಿ ಟ್ರೆಂಡ್ ಸೆಟ್ ಮಾಡುವ ಹಲವಾರು ಪ್ರಯತ್ನಗಳು ನಡೆದಿವೆ. 1980 ರಲ್ಲಿ ತೆರೆಕಂಡ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಅವರ ನಿರ್ದೇಶನದ "ಅಂತ" ಇಡೀ ಭಾರತೀಯ ಚಿತ್ರರಂಗಕ್ಕೆ ಹೊಸ ಐಡಿಯಾ ನೀಡಿತು. 1982 ರಲ್ಲಿ ತೆರೆಕಂಡ ವಿಷ್ಣುವರ್ಧನ್ ಅಭಿನಯದ ಸಾಹಸ ಸಿಂಹ ಏಕತಾನತೆಯಲ್ಲಿದ್ದ ಕನ್ನಡ ಚಿತ್ರಗಳ ಟ್ರೆಂಡನ್ನು ಬದಲಾಯಿಸಿದೆ. ಈ ಹಾದಿಯಲ್ಲಿ ಶಂಕರ್ ಗುರು, ಸಂಪತ್ತಿಗೆ ಸವಾಲ್ , ಪ್ರೇಮಲೋಕ, ನಂಜುಂಡಿ ಕಲ್ಯಾಣ, ಓಂ, ಮುಂಗಾರು ಮಳೆ, ದುನಿಯಾ, ಕೆಜಿಎಫ್ ಚಿತ್ರಗಳೂ ಸೇರುತ್ತವೆ.











ಸಿದ್ಧಲಿಂಗಯ್ಯ ನಿರ್ದೇಶಿಸಿ ಡಾ.ರಾಜಕುಮಾರ್ ಅಭಿನಯಿಸಿದ "ಬಂಗಾರದ ಮನುಷ್ಯ" ಕನ್ನಡ ಚಿತ್ರರಂಗದಲ್ಲಿ ಒಂದು ಇತಿಹಾಸ ಸೃಷ್ಟಿಸಿತು. 104 ವಾರಗಳ ಕಾಲ ಸತತ ಪ್ರದರ್ಶನ ಕಾಣುವುದರೊಂದಿಗೆ ಸೀಮಿತ ಮಾರುಕಟ್ಟೆಯ ಕನ್ನಡ ಚಿತ್ರರಂಗದಲ್ಲಿ ಗುಣಮಟ್ಟದ ಚಿತ್ರಗಳಿಗೆ ಉತ್ತೇಜನ ಸಿಗುತ್ತದೆ ಎನ್ನುವುದನ್ನು ಇದು ಸಾಬೀತು ಪಡಿಸಿತು. 1967 ರಲ್ಲಿ "ಬೆಳ್ಳಿ ಮೋಡ" ಚಿತ್ರದ ಮೂಲಕ ಕನ್ನಡಕ್ಕೆ ಎಸ್. ಆರ್.ಪುಟ್ಟಣ್ಣ ಕಣಗಾಲ್ ಅವರಂತಹ ಪ್ರತಿಭಾನ್ವಿತ ನಿರ್ದೇಶಕರ ಪ್ರವೇಶವಾಯಿತು. ನಾಗರಹಾವು, ಗೆಜ್ಜೆ ಪೂಜೆ, ಶರಪಂಜರ, ಎಡಕಲ್ಲು ಗುಡ್ಡದ ಮೇಲೆ, ಶುಭಮಂಗಳ, ಮಾನಸ ಸರೋವರ, ಪಡುವಾರಳ್ಳಿ ಪಾಂಡವರು, ರಂಗನಾಯಕಿ, ಸಾಕ್ಷಾತ್ಕಾರ, ಕರುಳಿನ ಕರೆ ಮೊದಲಾದ ಅವರ ಚಿತ್ರಗಳು ಕನ್ನಡ ಚಿತ್ರರಂಗದ ಘನತೆಯನ್ನು ಎತ್ತರಿಸಿದವು. ಹೊಸ ಅಲೆ ಚಿತ್ರಗಳ ಪರಂಪರೆ ಕನ್ನಡ ಚಿತ್ರರಂಗದಲ್ಲಿ ಆರಂಭವಾಯಿತು. ಸಿನಿಮಾ ಸ್ಕೋಪ್ ಪರಿಚಯವಾಯಿತು. ಡಾ.ರಾಜಕುಮಾರ್ ಅವರಂತಹ ಮೇರುನಟರು 200 ಚಿತ್ರಗಳನ್ನು ಪೂರೈಸಿದರು. ಡಾಕ್ಟರೇಟ್, ಪದ್ಮಭೂಷಣ, ಫಾಲ್ಕೆ ಪ್ರಶಸ್ತಿಗಳು ಕನ್ನಡದ ಕೀರ್ತಿಯನ್ನು ಹೆಚ್ಚಿಸಲಾರಂಭಿಸಿತು. ಕನ್ನಡ ಚಿತ್ರಗಳ ತಯಾರಿಕೆಯ ಸಂಖ್ಯೆಯೂ ಹೆಚ್ಚಲಾರಂಭಿಸಿತು. ಕನ್ನಡ ಚಲನಚಿತ್ರಗಳಿಗೆ ಸಾಹಿತಿಗಳ ಪ್ರವೇಶವಾಯಿತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳೂ ಕನ್ನಡ ಚಿತ್ರರಂಗಕ್ಕೆ ಕೊಡುಗೆ ನೀಡಿದರು. ಕನ್ನಡ ಚಲನಚಿತ್ರಗಳಿಗೆ ಸಾಹಿತ್ಯ ಸ್ಪರ್ಶ ನೀಡುವ ಈ ಪ್ರವೃತ್ತಿಯಿಂದಾಗಿ ಕನ್ನಡ ಚಿತ್ರಗಳಲ್ಲಿ ಗುಣಾತ್ಮಕ ಬೆಳವಣಿಗೆ ಕಂಡು ಬಂತು.

ಈ ಕಾಲಾವಧಿಯಲ್ಲಿ ಕನ್ನಡ ಚಿತ್ರರಂಗದಲ್ಲಿ ಹದಿನೈದು ನಾಯಕರು ಉದಯಿಸಿದರು. ಮಧುರ ಮಿಲನ ಮೂಲಕ ಶ್ರೀನಾಥ್, ಚೌಕದ ದೀಪ ಚಿತ್ರದ ಮೂಲಕ ಗಂಗಾಧರ್, ರಾಜೇಶ್ (ನಮ್ಮ ಊರು), ವಿಷ್ಣುವರ್ಧನ್, ಅಂಬರೀಷ್ (ನಾಗರಹಾವು), ರಾಂಗೋಪಾಲ್ (ಬೀಸಿದ ಬಲೆ), ಚಂದ್ರಶೇಖರ್ (ಎಡಕಲ್ಲು ಗುಡ್ಡದ ಮೇಲೆ), ಲೋಕೇಶ್ (ಕಾಕನಕೋಟೆ), ಅನಂತನಾಗ್ (ಸಂಕಲ್ಪ), ಅಶೋಕ್ (ವಿಜಯವಾಣಿ), ಜೈಜಗದೀಶ್ (ಪಿತಾಮಹ), ರಾಮಕೃಷ್ಣ(ಬಬ್ರುವಾಹನ), ಮಾನು (ತಬ್ಬಲಿಯು ನೀನಾದೆ ಮಗನೆ), ಶಂಕರ್ ನಾಗ್ (ಒಂದಾನೊಂದು ಕಾಲದಲ್ಲಿ), ಚಿತ್ರರಂಗದಲ್ಲಿ ಇವರೆಲ್ಲಾ ವೈವಿಧ್ಯಮಯ ಚಿತ್ರಗಳಿಗೆ ಕಾರಣರಾದರು.1952 ರಿಂದಲೂ ಜನಾಕರ್ಷಣೆಯ ಕೇಂದ್ರ ಬಿಂದುವಾಗಿರುವ ಡಾ.ರಾಜ್ ಕುಮಾರ್, 1968 ರಲ್ಲಿ "ಭಾಗ್ಯದ ಬಾಗಿಲು" ಚಿತ್ರದ ಮೂಲಕ ಶತಚಿತ್ರ ನಟರಾದರು. 1988 ರಲ್ಲಿ "ದೇವತಾ ಮನುಷ್ಯ" ಚಿತ್ರದ ಮೂಲಕ 200 ಚಿತ್ರಗಳಲ್ಲಿ ನಾಯಕರಾಗಿಯೇ ಅಭಿನಯಿಸಿದ ದಾಖಲೆ ಮಾಡಿದರು. ಸಂಪತ್ತಿಗೆ ಸವಾಲ್ ಚಿತ್ರದ ಮೂಲಕ ಗಾಯಕರಾದರು. ಕನ್ನಡ ಚಿತ್ರರಂಗವನ್ನು ಏಕಾಂಗಿಯಾಗಿ ಹೆಗಲಮೇಲೆ ಹೊತ್ತು ಅದನ್ನು ಸುಭದ್ರ ಸ್ಥಿತಿಗೆ ತಂದ ಶ್ರೇಯಸ್ಸು ಡಾ.ರಾಜಕುಮಾರ್ ಅವರದು.
















1972 ರಲ್ಲಿ "ನಾಗರಹಾವು" ಚಿತ್ರದ ಮೂಲಕ ನಾಯಕನಟರಾದ ವಿಷ್ಣುವರ್ಧನ್, ಅತ್ಯಂತ ಜನಪ್ರಿಯನಟರಾಗಿ, ಶರವೇಗದಲ್ಲಿ ಬೆಳೆದರು. ವೈವಿಧ್ಯಮಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಮೂಲಕ ಹೊಸ ಪೀಳಿಗೆಯನ್ನು ಸೆಳೆದ ವಿಷ್ಣುವರ್ಧನ್, ಭೂತಯ್ಯನ ಮಗ ಅಯ್ಯು, ನಾಗರ ಹೊಳೆ, ಹೊಂಬಿಸಿಲು, ಮುತ್ತಿನಹಾರ, ಯಜಮಾನ, ಬಂಧನ, ಸಾಹಸ ಸಿಂಹ, ಆಪ್ತಮಿತ್ರ, ಮೊದಲಾದ ಚಿತ್ರಗಳಲ್ಲಿ ಅಭಿನಯ ಸಾಮರ್ಥ್ಯವನ್ನು ಮೆರೆದರು. 2009 ರ "ಆಪ್ತ ರಕ್ಷಕ" ಅವರ ಕೊನೆಯ ಚಿತ್ರ. ಗಾಯಕರೂ ಕೂಡ. ಆರು ಬಾರಿ ರಾಜ್ಯ ಸರ್ಕಾರದ ಶ್ರೇಷ್ಠ ನಟ ಪ್ರಶಸ್ತಿ ಪಡೆದಿದ್ದಾರೆ. ವಿಷ್ಣುವರ್ಧನ್ ಅವರಂತೆಯೇ ಪುಟ್ಟಣ್ಣ ಕಣಗಾಲ್ ನಿರ್ದೇಶನದ "ನಾಗರಹಾವು" ಚಿತ್ರದ ಮೂಲಕ ಖಳನಟನಾಗಿ ಚಿತ್ರರಂಗ ಪ್ರವೇಶಿಸಿದ ಅಂಬರೀಷ್, ಎಸ್. ವಿ. ರಾಜೇಂದ್ರಸಿಂಗ್ ಅವರ ನಿರ್ದೇಶನದ "ಅಂತ" ಚಿತ್ರದ ಮೂಲಕ ನಾಯಕನಟರಾಗಿ ರೆಬೆಲ್ ಸ್ಟಾರ್ ಎನಿಸಿಕೊಂಡರು. ಮಸಣದ ಹೂವು, ದಿಗ್ಗಜರು, ನ್ಯೂಡೆಲ್ಲಿ, ಹೃದಯ ಹಾಡಿತು, ಒಡಹುಟ್ಟಿದವರು, ಗಂಡಭೇರುಂಡ, ಭರ್ಜರಿ ಬೇಟೆ, ಅಮರ್‌ನಾಥ್, ಚಕ್ರವ್ಯೂಹ, ಮಂಡ್ಯದ ಗಂಡು, ಹಬ್ಬ, ತಂದೆಗೆ ತಕ್ಕ ಮಗ ಮೊದಲಾದ ಚಿತ್ರಗಳಲ್ಲಿ ತಮ್ಮ ಅಭಿನಯದ ಛಾಪು ಬಿಟ್ಟು ಹೋಗಿದ್ದಾರೆ. ಅನಂತನಾಗ್, ಶ್ರೀನಾಥ್, ರಾಜೇಶ್, ಪ್ರಭಾಕರ್, ಅಶೋಕ್, ರಾಮಕೃಷ್ಣ, ಶಂಕರ್‌ನಾಗ್, ಶ್ರೀನಿವಾಸ ಮೂರ್ತಿ, ಗಂಗಾಧರ್, ಲೋಕೇಶ್, ಅರ್ಜುನ್ ಸರ್ಜಾ, ಮೊದಲಾದವರೆಲ್ಲಾ ಈ ಕಾಲಘಟ್ಟದಲ್ಲಿ ಪ್ರೇಕ್ಷಕರನ್ನು ರಂಜಿಸಿದ್ದಾರೆ. ತಮ್ಮ ಅಭಿನಯ ಸಾಮರ್ಥದಿಂದ ತಮ್ಮದೇ ಆದ ಪ್ರೇಕ್ಷಕ ವರ್ಗವನ್ನು ರೂಪಿಸಿಕೊಂಡಿದ್ದಾರೆ.



















ಕನ್ನಡಚಿತರರಂಗಕಂಡಈಸುವರ್ಣಯುಗದಲ್ಲಿ ಕನ್ನಡ ಚಿತ್ರರಂಗಕ್ಕೆ ನಿರ್ದೇಶಕರುಗಳ ಅವ್ಯಾಹತ ಆಗಮನವಾಗಿದೆ. ಹಳಬರ ಜೊತೆ ಹೊಸ ಚಿಗುರೂ ಸೇರಿಕೊಂಡು ಕನ್ನಡ ಚಿತ್ರರಂಗಕ್ಕೆ ಹೊಸ ಸೊಬಗು ಬಂದಿದೆ. ನಮ್ಮಲ್ಲಿ ಪ್ರತಿಭಾವಂತ ನಿರ್ದೇಶಕರುಗಳಾದ ಹುಣಸೂರು ಕೃಷ್ಣಮೂರ್ತಿ, ಬಿ.ಎಸ್.ರಂಗ, ಎಂ.ಆರ್.ವಿಠಲ್, ವೈ.ಆರ್. ಸ್ವಾಮಿ, ಗೀತಪ್ರಿಯ, ಎ.ವಿ.ಶೇಷಗಿರಿರಾವ್,

ಕೆ.ಎಸ್. ಎಲ್. ಸ್ವಾಮಿ, ಎಸ್.ಕೆ.ಭಗವಾನ್, ಆರೂರು ಪಟ್ಟಾಭಿ, ಸಿ.ವಿ.ಶಿವಶಂಕರ್, ಬಿ.ಎ.ಅರಸುಕುಮಾರ್, ಪೆಕೆಟಿ ಶಿವರಾಂ, ಎನ್.ಸಿ.ರಾಜನ್, ಆರ್.ರಾಮಮೂರ್ತಿ, ಆರ್. ಎನ್.ಜಯಗೋಪಾಲ್, ಎಂ.ಎ.ಸಮೀವುಲ್ಲಾ, ವಾದಿರಾಜ್, ವಿ.ಸೋಮಶೇಕರ್, ತಿಪಟೂರು ರಘು, ವಿಜಯ್, ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ಭಾರ್ಗವ, ಸಿ.ಆರ್.ಸಿಂಹ, ಜೋಸೈಮನ್, ಬಸವರಾಜ ಕೆಸ್ತೂರು, ಪಿ.ಲಂಕೇಶ್, ಗಿರೀಶ್ ಕಾರ್ನಾಡ್ ರೇಣುಕಾ ಶರ್ಮ, ಚಂದ್ರಶೇಖರ ಕಂಬಾರ, ಬರಗೂರು ರಾಮಚಂದ್ರಪ್ಪ, ಗಿರೀಶ್ ಕಾಸರವಳ್ಳಿ, ಎನ್ .ಟಿ.ಜಯರಾಮರೆಡ್ಡಿ, ಕೆ.ವಿ.ಜಯರಾಂ, ಶಂಕರ್‌ನಾಗ್, ಎ.ಟಿ.ರಘು, ಟಿ.ಎಸ್. ನಾಗಾಭರಣ, ಚಿ.ದತ್ತುರಾಜ್, ನಾಗತಿಹಳ್ಳಿ ಚಂದ್ರಶೇಖರ್, ಸುರೇಶ್ ಹೆಬ್ಳೀಕರ್, ರವಿಚಂದ್ರನ್, ಡಿ.ರಾಜೇಂದ್ರಬಾಬು, ಸುನೀಲ್ ಕುಮಾರ್ ದೇಸಾಯಿ, ಎನ್.ಆರ್.ನಂಜುಂಡೇಗೌಡ, ದ್ವಾರಕೀಶ್, ಫಣಿ ರಾಮಚಂದ್ರ, ಜೋಸೈಮನ್, ಮೊದಲಾದವರೆಲ್ಲಾ ಈ ಕಾಲಾವಧಿಯಲ್ಲಿ ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಸಲು ನೆರವಾಗಿದ್ದಾರೆ.

1985ರ ವೇಳೆಗೆ ಕನ್ನಡ ಚಿತ್ರರಂಗದಲ್ಲಿ ಆಧುನಿಕತೆಯ ಗಾಳಿ ಬೀಸಲಾರಂಭಿಸಿತ್ತು. ಚಿತ್ರ ನಿರ್ಮಾಣವೂ ಹೆಚ್ಚ ತೊಡಗಿತು. ಕನ್ನಡದ ಮಾರುಕಟ್ಟೆ ನಿಧಾನವಾಗಿ ವಿಸ್ತರಿಸಲಾರಂಭಿಸಿತು. ಇದರೊಂದಿಗೆ ಪರಭಾಷಾ ಚಿತ್ರಗಳ ಪೈಪೋಟಿ, ಪೈರಸಿ, ರೀಮೇಕ್, ಚಿತ್ರಮಂದಿರಗಳ ಕೊರತೆ, ಟಿವಿ ಮನರಂಜನಾ ಚಾನಲ್‌ಗಳ ಪೈಪೋಟಿ, ಪ್ರೇಕ್ಷಕರ ಕೊರತೆ ಮುಂತಾದ ಸಮಸ್ಯೆಗಳ ಜೊತೆ ಹೋರಾಡುತ್ತಲೇ ಚಿತ್ರರಂಗ ಸದೃಢವಾಗತೊಡಗಿತು. ತಾರಾ ಪುತ್ರರು ಮುಂಚೂಣಿಗೆ ಬಂದರು. ಚಿತ್ರರಂಗಕ್ಕೆ ಯುವ ಕಲಾವಿದರು, ನಿರ್ದೇಶಕರು, ತಂತ್ರಜ್ಞರು ಆಗಮಿಸಿದ್ದು ಚಿತ್ರರಂಗ ಹೊಸತನಕ್ಕೆ ಹೊರಳಲು ಕಾರಣವಾಯಿತು.


















1986 ರಲ್ಲಿ "ಆನಂದ್" ಚಿತ್ರದ ಮೂಲಕ ಕನ್ನಡ ಚಿತ್ರರಂಗದ ನವನಾಯಕರಾಗಿ ಉದಯಿಸಿದ ಶಿವರಾಜ್ ಕುಮಾರ್, ಈಗ 125 ಚಿತ್ರಗಳ ನಟ. ಆರಂಭದಲ್ಲೇ ರಥಸಪ್ತಮಿ, ಮನಮೆಚ್ಚಿದ ಹುಡುಗಿ ಚಿತ್ರಗಳ ಸತತ ಯಶಸ್ಸು ಅವರನ್ನು ಹ್ಯಾಟ್ರಿಕ್ ಹೀರೋ ಸಾಧನೆಗೆ ದೂಡಿತಲ್ಲದೆ, ಕನ್ನಡ ಪ್ರೇಕ್ಷಕರು ಯುವ ನಟರನ್ನು ಸ್ವಾಗತಿಸಿದ್ದರ ಸೂಚನೆಯಾಗಿತ್ತು. ಶಿವರಾಜ್ಕುಮಾರ್ ಕನ್ನಡ ಚಿತ್ರರಂಗದಲ್ಲಿ ಹಲವಾರು ಟ್ರೆಂಡ್ ಗಳನ್ನು ಸೃಷ್ಟಿಸಿದ್ದಾರೆ. 1955 ರಲ್ಲಿ ತೆರೆಕಂಡ "ಓಂ" ಶಿವರಾಜ್ ಕುಮಾರ್ ಅವರಿಗೆ ಹೊಸ ಇಮೇಜು ನೀಡಿತು. ಮತ್ತೊಬ್ಬ ಭರವಸೆಯ ನಟ, ನಿರ್ದೇಶಕ ಉಪೇಂದ್ರ ಅವರ ನಿರ್ದೇಶನದಲ್ಲಿ ಬಂದ ಈ ಚಿತ್ರ ಚಿತ್ರರಂಗದಲ್ಲಿ ಸಾರ್ವಕಾಲಿಕ ದಾಖಲೆ ನಿರ್ಮಿಸಿತು. 1996 ರಲ್ಲಿ ತೆರೆಕಂಡ "ಜನುಮದ ಜೋಡಿ" ಚಿತ್ರ ಕೂಡ ಒಂದು ದಾಖಲೆ. ಟಿ.ಎಸ್. ನಾಗಾಭರಣ ಅವರ ನಿರ್ದೇಶನ, ಬರಗೂರು ರಾಮಚಂದ್ರಪ್ಪ ಅವರ ಸಂಭಾಷಣೆ ಚಿತ್ರವನ್ನುಯಶಸ್ವಿಯಾಗಿಸಿತು. ತವರಿಗೆ ಬಾ ತಂಗಿ, ಜೋಗಿ, ಸಿಂಹದ ಮರಿ, ನಮ್ಮೂರ ಮಂದಾರ ಹೂವೇ, ಹಗಲುವೇಷ, ಎ.ಕೆ. 47, ಮಫ್ತಿ, ಟಗರು, ಪ್ರೀತ್ಸೆ, ವೇದ, ಘೋಸ್ಟ್ ಹೀಗೆ ವೈವಿಧ್ಯಮಯ ಪಾತ್ರಗಳ ಮೂಲಕ ಶಿವರಾಜ್ ಕುಮಾರ್ ಚಿತ್ರರಂಗದಲ್ಲಿ ಹೊಸ ತಲೆಮಾರಿನ ಬಹುಮುಖ್ಯ ನಾಯಕನಟರೆನಿಸಿದ್ದಾರೆ.

ಶಿವರಾಜ್ ಕುಮಾರ್ ಚಿತ್ರರಂಗ ಪ್ರವೇಶಿಸಿದ ಸಮಯದಲ್ಲೇ ಬೆಳ್ಳಿತೆರೆ ಪ್ರವೇಶಿಸಿದ ರವಿಚಂದ್ರನ್, ನಟರಾಗಿ ನಿರ್ದೇಶಕರಾಗಿ ಯುವಜನತೆಯ ಕನಸುಗಳಿಗೆ ತಕ್ಕಂತೆ ನಿರ್ಮಾಣ ಮಾಡುವ ಮೂಲಕ ಸಿನಿಮಾ ಮಾಧ್ಯಮಕ್ಕೆ ಹೊಸ ಆಯಾಮ ತಂದರು. ಕನ್ನಡ ಚಿತ್ರರಂಗದಲ್ಲಿ ಹೊಸ ಗಾಳಿ ಬೀಸಲು ಕಾರಣರಾದ ಈ ಇಬ್ಬರು ನಾಯಕ ನಟರು ಕನ್ನಡದ ಹೆಮ್ಮೆ.


















"ಪ್ರೇಮಲೋಕ" ರವಿಚಂದ್ರನ್ ನಿರ್ದೇಶನದಲ್ಲಿ ಕನ್ನಡ ಚಿತ್ರರಂಗದಲ್ಲಿ ಹೊಸ ಪ್ರೇಮಕತೆಯ ಟ್ರೆಂಡ್ ಹುಟ್ಟು ಹಾಕಿತು. ಸಂಗೀತ ನಿರ್ದೇಶಕ ಹಂಸಲೇಖ ಸಿನಿ\ಮಾ ಸಾಹಿತ್ಯಕ್ಕೆ ಹೊಸ ಸ್ಪರ್ಶ ನೀಡಿದರು. ನಾನೇ ರಾಜ, ಅಂಜದ ಗಂಡು, ಶಾಂತಿ ಕ್ರಾಂತಿ, ರಣಧೀರ, ರಾಮಾಚಾರಿ, ಏಕಾಂಗಿ, ಮಲ್ಲ, ಅಣ್ಣಯ್ಯ ಪುಟ್ನಂಜ ಮೊದಲಾದ ರವಿಚಂದ್ರನ್ ನಾಯಕತ್ವದ ಚಿತ್ರಗಳು ಯಶಸ್ವಿಯಾಗಿವೆ. ರಾಘವೇಂದ್ರ ರಾಜಕುಮಾರ್, (ನಂಜುಂಡಿ ಕಲ್ಯಾಣ), ಶಶಿಕುಮಾರ್, ಸುನಿಲ್, ದೇವರಾಜ್, ಶ್ರೀಧರ್, ರಮೇಶ್, ಜಗ್ಗೇಶ್, ರಘುವೀರ್, ಕಾಶೀನಾಥ್, ಕುಮಾರ್ ಬಂಗಾರಪ್ಪ, ರಾಂಕುಮಾರ್, ಕುಮಾರ್ ಗೋವಿಂದ್, ವಿನೋದ್ ರಾಜ್, ಅಭಿಜಿತ್, ಸಾಯಿಕುಮಾರ್ ಮೊದಲಾದವರೆಲ್ಲಾ ತಮ್ಮದೇ ಶೈಲಿಯ ಮೂಲಕ ಗಮನ ಸೆಳೆದರು.













15


















"ಎ" ಚಿತ್ರದ ಮೂಲಕ ನಾಯಕರಾದ ಉಪೇಂದ್ರ ಅವರದು ಅವರದೇ ಆದ ವಿಕ್ಷಿಪ್ತ ಹಾಗೂ ವಿಭಿನ್ನ ಶೈಲಿ. ಅವರದೇ ಆದ ಅಭಿಮಾನಿಗಳಿದ್ದಾರೆ. ಉಪೇಂದ್ರ, ಎಚ್ ಟು ಓ, ರಕ್ತ ಕಣ್ಣೀರು, ಅನಾಥರು,..ಇಂದಿನ ಕಬ್ಜವರೆಗೆ ಉಪೇಂದ್ರ ಅವರ ಚಿತ್ರಗಳ ಶೈಲಿಯೇ ಭಿನ್ನ. ಚಲನಚಿತ್ರಗಳಿಗೆ ಸನ್ನೆಯ ಶೀರ್ಷಿಕೆ ನೀಡುವುದು ಕೂಡ ಅವರ ತಂತ್ರ.


ತಾರಾ ವರ್ಚಸ್ಸೇ ಅಲ್ಲದೆ, ಛಾಯಾಗ್ರಹಣ, ಸಾಹಿತ್ಯ, ಕಥಾ ನಿರೂಪಣೆ, ಸಂಗೀತ ಎಲ್ಲದರಲ್ಲೂ ಆಧುನಿಕತೆಯ ಸ್ಪರ್ಶ ಪಡೆದ ಚಿತ್ರರಂಗ, ಇತರ ಭಾಷಾ ಚಿತ್ರಗಳಿಗೆ ಪೈಪೋಟಿ ನೀಡಲಾರಂಭಿಸಿತು. ಪುನೀತ್, ದರ್ಶನ್, ಸುದೀಪ್, ಪ್ರೇಮ್, ವಿಜಯ್, ಗಣೇಶ್ ಮೊದಲಾದವರು ಯುವ ಪೀಳಿಗೆಯನ್ನು ಆಕರ್ಷಿಸುವ ಕಲಾವಿದರಾಗಿ ಬೆಳೆಯಲಾರಂಭಿಸಿದರು. ಮತ್ತೊಮ್ಮೆ ಕನ್ನಡ ಚಿತ್ರರಂಗದಲ್ಲಿ ಹೊಸ ಗಾಳಿಯ ಅಲೆ ಕಾಣಲಾರಂಭಿಸಿತು.








# ಕನ್ನಡ ಚಿತ್ರರಂಗದಲ್ಲಿ ಹೊಸ ಗಾಳಿ




ಹೊಸ ಕಲಾವಿದರ, ಸೃಜನಶೀಲ ನಿರ್ದೇಶಕರ, ಆಧುನಿಕ ತಂತ್ರಜ್ಞಾನ ಯುಗವೇ ಆರಂಭವಾಯತು. ಕನ್ನಡ ಚಿತ್ರಗಳಿಗೆ ಪ್ರೇಕ್ಷಕರಿಲ್ಲ ಎನ್ನುವ ಆಪಾದನೆಯನ್ನು ತಳ್ಳಿಹಾಕಿ, ಯೋಗರಾಜ್ ಭಟ್ ನಿರ್ದೇಶನದಲ್ಲಿ "ಮುಂಗಾರು ಮಳೆ" ಚಿತ್ರ 2007 ರಲ್ಲಿ ತೆರೆಕಂಡಿತು. ಈ ಚಿತ್ರ ಪ್ರಚಂಡ ಯಶಸ್ಸು ಗಳಿಸಿತು. ಕನ್ನಡದಲ್ಲಿ ಬದಲಾವಣೆಗೆ ಪ್ರೇಕ್ಷಕರು ಕಾತರರಾಗಿದ್ದಾರೆ ಎನ್ನುವ ಸೂಚನೆ ದೊರಕಿತು., ನಾಯಕ ನಟ ಗಣೇಶ್ ಅವರ ಅಭಿನಯದ ಮುಂದಿನ ಎರಡೂ ಚಿತ್ರಗಳೂ ಯಶಸ್ಸಿನ ಹಾದಿ ಹಿಡಿದವು. ಭೂಗತ ಲೋಕದ ಕತೆಯಿರುವ "ದುನಿಯಾ" ಚಿತ್ರ ನಾಯಕನಟ ವಿಜಯ್, ಹಾಗೂ ನಿರ್ದೇಶಕ ಸೂರಿ ಅವರ ಪ್ರತಿಭೆಯನ್ನು ಹೊರಹಾಕಿತು.

ನಾಗತಿಹಳ್ಳಿ ಚಂದ್ರಶೇಖರ್ ಅವರ ನಿರ್ದೇಶನದ "ನನ್ನ ಪ್ರೀತಿಯ ಹುಡುಗಿ" ಚಿತ್ರದಿಂದ ಪ್ರೇಮಕತೆಯ ಟ್ರೆಂಡ್ ಆರಂಭವಾಯಿತು. ಪುನೀತ್ ಚಿತ್ರರಂಗ ಪ್ರವೇಶದ ಚಿತ್ರವಾದ ಅಪ್ಪು, ಹಾಗೂ ನಿನಗಾಗಿ ಚಿತ್ರಗಳು ಯುವ ಜನತೆಯನ್ನು ಸೆಳೆಯುವ ಕಥಾಚಿತ್ರಗಳಾಗಿದ್ದು, ಆ ಮಾದರಿಯ ಟ್ರೆಂಡ್ ಕನ್ನಡದಲ್ಲಿ ಆರಂಭವಾಯಿತು.















ದರ್ಶನ್ "ಮೆಜೆಸ್ಟಿಕ್" ಚಿತ್ರದ ಮೂಲಕ, ಸುದೀಪ್ ಸ್ಪರ್ಶ ಚಿತ್ರದ ಮೂಲಕ ಪ್ರವೇಶ ಪಡೆದ, ಹುಚ್ಚ ಚಿತ್ರದ ನಂತರ ಮನೆಮಾತಾದರು. ಯುವನಟರು ಸಾಲುಸಾಲಾಗಿ ಕನ್ನಡ ಚಿತ್ರರಂಗದಲ್ಲಿ ಅದೃಷ್ಟ ಪರೀಕ್ಷೆಗೆ ಮುಂದಾದರು. ಕನ್ನಡ ಚಿತ್ರರಂಗ ಅಭಿವೃದ್ಧಿಯ ಪಥದಲ್ಲಿದ್ದುದರಿಂದ ಎಲ್ಲರಿಗೂ ಅವಕಾಶದ ಬಾಗಿಲು ತೆರೆಯಿತು. ಅನಿರುದ್ಧ, ಸೌರವ್, ನವೀನ್ ಮಯೂರ್, ಸಂದೀಪ್, ವಿನೋದ್ ಪ್ರಭಾಕರ್, ಆದಿತ್ಯ, ಶಿವಧ್ವಜ್, ಅಜಯ್, ಸುನೀಲ್ ರಾವ್, ಬಾಲಾಜಿ, ಮಯೂರ್ ಪಟೇಲ್, ದೀಪಕ್ ,ಆದಿ ಲೋಕೇಶ್, ಮುರಳಿ, ಹರೀಶ್, ಯೋಗೀಶ್, ಪ್ರಜ್ವಲ್ ದೇವರಾಜ್, ದಿಗಂತ್, ಚಿರಂಜೀವಿ, ಶ್ರೀನಗರ ಕಿಟ್ಟಿ, ರಾಕೇಶ್, ಯಶ್, ರಾಕೇಶ್, ಮೊದಲಾದವರೆಲ್ಲಾ ಈ ಸಮಯದಲ್ಲಿ ಚಿತ್ರರಂಗದಲ್ಲಿ ಅದೃಷ್ಟ ಪರೀಕ್ಷೆಗೆ ಮುಂದಾದರು ಇಂದ್ರಜಿತ್ ಲಂಕೇಶ್ ತುಂಟಾಟದ ಮೂಲಕ, ಕವಿತಾ ಲಂಕೇಶ್ ದೇವೀರಿ ಚಿತ್ರದ ಮೂಲಕ, ಪಿ.ಶೇಷಾದ್ರಿ ಮುನ್ನುಡಿ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸುವ ಮೂಲಕ 2000 ನೇ ಇಸವಿ ಕನ್ನಡ ಚಿತ್ರರಂಗದ ಹೊಸ ಬೆಳಕಿನತ್ತ ಸಾಗಿತು.











ನಾಗೇಂದ್ರ ಪ್ರಸಾದ್, ಪ್ರಕಾಶ್ (ಮಿಲನ), ದಯಾಳ್, ರತ್ನಜ, ದಿನಕರ್, ಎಂ.ಡಿ.ಶ್ರೀಧರ್, ಯೋಗರಾಜ್ ಭಟ್, ಸೂರಿ, ಚೈತನ್ಯ, ಮಾದೇಶ್, ದೇವದತ್ತ, ಮಹೇಶ್, ಅಮರ್, ಆರ್.ಚಂದ್ರು ಗಮನ ಸೆಳೆಯುವ ನಿರ್ದೇಶಕರೆನಿಸಿದರು. ಕನ್ನಡ, ಚಿತ್ರರಂಗ ಪರಭಾಷಾ ಚಿತ್ರಗಳ ಪೈಪೋಟಿಯನ್ನು ಎದುರಿಸಲು ಸಮರ್ಥವಾಗಿದೆ. ದೃಶ್ಯ ಸಂಯೋಜನೆಯಲ್ಲಿ, ಸಂಗೀತ, ಸಂಕಲನ, ಡಿಜಿಟಲ್, ಸ್ಪೆಷಲ್ ಎಫೆಕ್ಟ್, ಆಧುನಿಕ ತಂತ್ರಜ್ಞಾನ ಬಳಸುವ ವಿಧಾನಗಳಲ್ಲಿ ಪರಿಣಿತಿ ಸಾಧಿಸಿರುವುದು ಕನ್ನಡ ಚಿತ್ರಗಳನ್ನು ವೀಕ್ಷಿಸಿದರೇ ಅನುಭವಕ್ಕೆ ಬರುತ್ತದೆ. ಕನ್ನಡ ಚಿತ್ರರಂಗದ ೯೦ ವರ್ಷಗಳ ಇತಿಹಾಸವನ್ನು ಹಿಂತಿರುಗಿ ನೋಡಿದರೆ ಅವೆಲ್ಲಾ ಸಾಧನೆಯ ಮೆಟ್ಟಿಲುಗಳ ಹಾಗೆ ಕಾಣುತ್ತಿದೆ. ಮುಂದಿನ ಪೀಳಿಗೆಗೆ ದಾರಿದೀಪದಂತೆ ಗೋಚರಿಸುತ್ತಿದೆ.







# ಪೋಷಕ ನಟರ ಕಾಣಿಕೆ




ಸಾಮಾನ್ಯವಾಗಿ ಚಿತ್ರವೊಂದರ ಯಶಸ್ಸು ತಂಡದ ಎಲ್ಲ ಸದಸ್ಯರ ಶ್ರಮದಿಂದ ಆಗಿರುತ್ತದೆ. ಸಾ,ಮಾನ್ಯವಾಗಿ ನಾಯಕ ನಟರ ಹೆಸರನ್ನೋ, ನಿರ್ದೇಶಕರ ಹೆಸರನ್ನೋ ಮುನ್ನಲೆಗೆ ತಂದು ಪೋಷಕ ನಟರನ್ನು, ನಾಯಕಿಯರನ್ನು ಕಡೆಗಣಿಸುವ ಆಗಬಾರದು. ಚಿತ್ರದ ಯಶಸ್ಸಿಗೆ ಪೋಷಕ ನಟರೂ, ನಟಿಯರೂ, ಕಾರಣರಾಗಿರುತ್ತಾರೆ. ನಿರ್ಮಾಣದ ಹಿಂದೆ, ಚಿತ್ರದ ಯಶಸ್ಸಿನ ಹಿಂದೆ ಲೈಟ್ ಬಾಯ್‌ನಿಂದ ಹಿಡಿದು, ಚಿತ್ರಮಂದಿರದ ಮಾಲೀಕನವರೆಗೆ ಎಲ್ಲರ ಒಳಗೊಳ್ಳುವಿಕೆ ಇದೆ. ಅಂತಹ ವಾತಾವರಣ ಕನ್ನಡ ಚಿತ್ರರಂಗದಲ್ಲಿ ಇರುವುದರಿಂದ ೯೦ ವರುಷಗಳ ಸಾಧನೆ ಗುಣಮಟ್ಟದ್ದಾಗಿದೆ ಎಂದು ನಾವು ಹೆಮ್ಮೆಯಿಂದ ಹೇ‘ಆಕೊಳ್ಳಬಹುದು.











ಕನ್ನಡ ಚಿತ್ರರಂಗದಲ್ಲಿ ಖಳನಟರ ಒಂದು ಪರಂಪರೆಯೇ ಇದೆ. ಖಳನಟರೆಲ್ಲಾ ಕೊನೆಯವರೆಗೆ ಖಳನಟರಾಗಿಯೇ ಉಳಿದ ಉದಾಹರಣೆ ಇಲ್ಲ. ಅವರಲ್ಲಿ ಕೆಲವರು ನಾಯಕರಾಗಿ ಪರಿವರ್ತನೆ ಯಾಗಿದ್ದಾರೆ. ಮತ್ತೆ ಕೆಲವರು ಪೋಷಕ ನಟರಾಗಿ ಬೆಳೆದರು. ಡಿಕ್ಕಿ ಮಾಧವರಾವ್, ಟಿ.ಎನ್.ಬಾಲಕೃಷ್ಣ, ಜಿ.ವಿ.ಅಯ್ಯರ್, ಉದಯಕುಮಾರ್, ನಾಗಪ್ಪ, ರಂಗ, ಶಕ್ತಿಪ್ರಸಾದ್, ತೂಗುದೀಪ ಶ್ರೀನಿವಾಸ್, ದಿನೇಶ್, ಎಂ.ಪಿ.ಶಂಕರ್, ವಜ್ರಮುನಿ, ಸುಧೀರ್, ಧೀರೇಂದ್ರಗೋಪಾಲ್, ಮುಖ್ಯಮಂತ್ರಿ ಚಂದ್ರು, ಲೋಹಿತಾಶ್ವ, ಲೋಕನಾಥ್, ಸತ್ಯಜಿತ್, ಮುಸುರಿ ಕೃಷ್ಣಮೂರ್ತಿ, ಸುಂದರಕೃಷ್ಣ ಅರಸು, ಚರಣ್ ರಾಜ್, ದೊಡ್ಡಣ್ಣ, ಶೋಭರಾಜ್, ರಂಗಾಯಣ ರಘು, ಅವಿನಾಶ್, ಜೈಜಗದೀಶ್, ಧರ್ಮ, ಬ್ಯಾಂಕ್ ಜನಾರ್ಧನ್, ಸುಂದರರಾಜ್,ರಮೇಶ್ ಭಟ್, ಸುಚೇಂದ್ರ ಪ್ರಸಾದ್, ರಾಜಾನಂದ್, ಕೆ.ಎಸ್.ಅಶ್ವತ್ಥ್, ರತ್ನಾಕರ್, ವಾಸುದೇವರಾವ್ ತಮ್ಮದೇ ಆದ ಅಭಿನಯದ ಛಾಪು ಮೂಡಿಸಿದವರು.

















# ನಾಯಕಿಯರ ಮಹತ್ವ

ಕನ್ನಡ ಸಿನಿಮಾಗಳಲ್ಲಿ ನಾಯಕಿಯರನ್ನು ಪರಭಾಷೆಗಳಿಂದ ಕರೆದು ತರುವುದು, ಇಲ್ಲಿಂದ ಅಲ್ಲಿಗೆ ವಲಸೆ ಹೋಗುವುದು ಸಾಮಾನ್ಯ ಸಂಗತಿ. ಅದರೊಂದಿಗೆ ಕನ್ನಡ ಚಿತ್ರರಂಗದಲ್ಲೇ ನೆಲೆಯೂರಿ ಚಿತ್ರರಂಗದ ಸಂಸ್ಕೃತಿಯನ್ನು ಬೆಳೆಸಿ, ಉಳಿಸಿದ ನಟಿಯರು ಬಹಳ ಮಂದಿ ಇದ್ದಾರೆ. ಕನ್ನಡ ಚಿತ್ರರಂಗದಲ್ಲೇ ಉಳಿದು, ಅಭಿನಯ ಶಾರದೆಯರಾಗಿ ಉಳಿದವರ ಪಟ್ಟಿ ದೊಡ್ಡದಿದೆ. ಬೇರೆ ಭಾಷಾ ಚಿತ್ರರಂಗಕ್ಕೆ ತೆರಳಿ ಚತುರ್ಭಾಷಾ ತಾರೆಯರಾದವರೂ ಬ ಹಳ ಮಂದಿ ಇದ್ದಾರೆ.

ಈ ಬೆಳವಣಿಗೆ ಮೂಕಿ ಚಿತ್ರಗಳ ಕಾಲದಿಂದಲೂ ಇದೆ. ಮೂಕಿ ಚಿತ್ರರಂಗದ ಸ್ಟಾರ್ ನಟಿ ಎಂದು ಕರೆಯಲಾಗುತ್ತಿದ್ದ ಲಕ್ಷ್ಮೀಬಾಯಿ ಅವರಿಂದ ಆರಂಭಿಸಿ ಇಂದಿನ ರಶ್ಮಿಕಾ ಮಂದಣ್ಣ ಅವರವರೆಗೆ ಕನ್ನಡದ ನಟಿಯರು ಪರಭಾಷೆಗಳಲ್ಲಿ ದಿಗ್ವಿಜಯ ಸಾಧಿಸಿದ ಉದಾಹರಣೆಗಳಿವೆ. 1936 ರಲ್ಲಿ "ಸಂಸಾರ ನೌಕ" ಚಿತ್ರದಿಂದ ಬೆಳಕಿಗೆ ಬಂದ ಎಂ.ವಿ.ರಾಜಮ್ಮ ಆ ನಂತರ ತಮಿಳು, ತೆಲುಗು ಚಿತ್ರರಂಗದಲ್ಲಿ ಬಿಡುವಿಲ್ಲದ ನಟಿಯಾದರು.
















ಮರಳಿ ಕನ್ನಡ ಚಿತ್ರರಂಗಕ್ಕೆ ಬಂದು ನಿರ್ಮಾಪಕಿಯಾದರು ಪೋಷಕ ನಟಿಯಾದರು. ಕೆಂಪರಾಜ ಅರಸರು ಅಂದಿನ ದಿನಗಳಲ್ಲಿ ತಮಿಳು ಚಿತ್ರರಂಗದಲ್ಲಿ ಜನಪ್ರಿಯರಾಗಿದ್ದ ಭಾನುಮತಿಯವರನ್ನು ಕನ್ನಡಕ್ಕೆ ಕರೆತಂದು "ನಳದಮಯಂತಿ" ನಾಯಕಿಯಾಗಿಸಿದರು. ಮೈಸೂರಿನ ವಸುಂಧರಾ ದೇವಿ ಮುಂಬೈಗೆ ತೆರಳಿ ಜನಪ್ರಿಯ ಹಿಂದಿ ನಟಿಯಾದರು. ಕನ್ನಡ ಚಿತ್ರರಂಗದ ಮತ್ತೊಂದು ಕೊಡುಗೆ ಬಿ.ಸರೋಜಾದೇವಿ. ಕನ್ನಡವೇ ಅಲ್ಲದೆ, ತಮಿಳು ಚಿತ್ರರಂಗದಲ್ಲಿ ಅವರು ಅಪಾರ ಜನಪ್ರಿಯತೆ ಗಳಿಸಿದರು. ಜಯಲಲಿತಾ ಅವರೂ ಕನ್ನಡದ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಆರಂಭದ ದಿನಗಳಲ್ಲಿ ಲಕ್ಷ್ಮೀಬಾಯಿ, ತ್ರಿಪುರಾಂಬ, ಎಂ.ವಿರಾಜಮ್ಮ, ಬಿ.ಜಯಮ್ಮ, ಪಂಡರೀಬಾಯಿ ಅವರುಗಳು ಒಂದು ಕಾಲಘಟ್ಟದಲ್ಲಿದ್ದವರು. ಬಿ.ಜಯಶ್ರೀ ಹಾಗೂ ಹರಿಣಿ ಅವರು ನಾಗಕನ್ನಿಕಾ, ಜಗನ್ಮೋಹಿನಿ ಮೂಲಕ ಅಪಾರ ಜನಪ್ರಿಯತೆ ಪಡೆದು ಅಭಿಮಾನಿಗಳ ಪ್ರಶಂಸೆಗೆ ಪಾತ್ರರಾದ ಅಚ್ಚ ಕನ್ನಡದ ನಟಿಯರು. ಜಯಂತಿ, ಕಲ್ಪನಾ, ಭಾರತಿ, ಲೀಲಾವತಿ, ಆರತಿ, ಮಂಜುಳಾ ಅವರುಗಳು ಎಪ್ಪತ್ತರ ದಶಕದ ತಾರೆಯರು ಮಾಲಾಶ್ರೀ, ಸುಧಾರಾಣಿ, ಜೂಲಿ ಲಕ್ಷ್ಮಿ, ಜಯಮಾಲಾ ಇವರುಗಳೆಲ್ಲಾ ಕನ್ನಡ ಚಿತ್ರರಂಗದಲ್ಲೇ ಉಳಿದು ಮಹತ್ವದ ಕೊಡುಗೆ ನೀಡಿದವರು. ತಾರಾ, ಭವ್ಯ, ಮಹಾಲಕ್ಷ್ಮಿ, ಶೃತಿ, ಪ್ರೇಮಾ, ಭಾವನಾ, ಅನು ಪ್ರಭಾಕರ್, ಇವರುಗಳೆಲ್ಲಾ ಕನ್ನಡದಲ್ಲೇ ಉಳಿದು, ಪರಭಾಷಾ ನಟಿಯರ ಪೈಪೋಟಿಯ ನಡುವೆಯೂ ಗೆದ್ದವರು. ಅಮೂಲ್ಯ, ರಮ್ಯ, ಪೂಜಾಗಾಂಧಿ, ರಾಧಿಕಾ ಪಂಡಿತ್, ಶ್ರದ್ಧಾ ಶ್ರೀನಾಥ್, ಮೇಘನಾ ರಾಜ್, ರಾಧಿಕಾ, ಪ್ರಿಯಾಮಣಿ, ಐಂದ್ರಿತಾ ರೇ, ರಚಿತಾ ರಾಮ್, ಸಂಯುಕ್ತಾ ಹೆಗಡೆ, ಹರಿಪ್ರಿಯಾ ಇವರೆಲ್ಲಾ ಗಮನಾರ್ಹ ಸಾಧನೆ ಮಾಡಿದ್ದಾರೆ. ಹೊಸ ಪೀಳಿಗೆಯಲ್ಲಿ ಅವ್ಯಾಹತವಾಗಿ ನಾಯಕ ನಟಿಯರ ಪ್ರವೇಶವಾಗುತ್ತಿದ್ದು, ಸಪ್ತಮಿಗೌಡ, ಆರಾಧನಾ, ಅಮೃತ ಮೊದಲಾದವರು ಭರವಸೆ ಮೂಡಿಸುವ ನಟಿಯರಾಗಿದ್ದಾರೆ.









# ಹೊಸ ಅಲೆ/ ಪರ್ಯಾಯ ಚಿತ್ರ ಚಳವಳಿ

ಕನ್ನಡ ಚಲನಚಿತ್ರರಂಗದ ಇತಿಹಾಸದಲ್ಲಿ ಹೊಸ ಅಲೆ ಚಿತ್ರಗಳದ್ದೇ ಪ್ರತ್ಯೇಕ ಅಧ್ಯಾಯ. 50 ರ ದಶಕದಲ್ಲಿ ಸತ್ಯಜಿತ್ ರಾಯ್, ಮೃಣಾಲ್ ಸೇನ್, ರಿತ್ವಿಕ್ ಘಟಕ್ ಅವರು ಈ ಹಾದಿಯನ್ನು ತುಳಿದು, ಪರಂಪರಾಗತ ಮಾದರಿಗಳನ್ನು ಬದಲಿಸಿದರು. ಆನಂತರ ಪಶ್ಚಿಮ ಬಂಗಾಳ ಚಿತ್ರರಂಗದ ಈ ಹೊಸ ಪರಂಪರೆ, ಮಲಯಾಳಂ ಚಿತ್ರರಂಗಕ್ಕೂ ವಿಸ್ತರಿಸಿ ದೇಶ ವಿದೇಶಗಳಲ್ಲಿ ಮೆಚ್ಚುಗೆ ಪಡೆಯತೊಡಗಿತು. ಇಟಾಲಿಯನ್ ನಿಯೋ ರಿಯಲಿಸಂ ಆಧರಿಸಿ ಕೆಲವು ನಿರ್ದೇಶಕರು ಈ ಬಗೆಯ ವಾಸ್ತವವಾದಿ ಸಿನಿಮಾಗಳನ್ನು ತಯಾರಿಸಲು ಮುಂದಾದರು.

ಕಾಲಾಂತರದಲ್ಲಿ ಇದನ್ನು ಪರ್ಯಾಯ ಸಿನಿಮಾ, ಬ್ರಿಡ್ಜ್ ಸಿನಿಮಾ, ಕಲಾತ್ಮಕ ಸಿನಿಮಾ ಎಂಬೆಲ್ಲಾ ಹೆಸರುಗಳಿಂದ ರೂಪಾಂತರಗೊಳ್ಳುತ್ತಾ ಹೋಯಿತು. ಆದರೂ ಇದು ಪ್ರತ್ಯೇಕ ಗುಂಪಾಗಿದ್ದು, ಇಂತಹ ಪರ್ಯಾಯ ಸಿನಿಮಾಗಳನ್ನು ನೋಡುವ ಒಂದು ವರ್ಗವೇ ಇದೆ




1970 ರಲ್ಲಿ "ಸಂಸ್ಕಾರ" ಇಂತಹ ಒಂದು ಹೊಸ ಅಲೆಯನ್ನು ಕನ್ನಡ ಚಿತ್ರರಂಗದಲ್ಲಿಸೃಷ್ಟಿಸುವ ವೇಳೆಗೆ ಪಶ್ಚಿಮಬಂಗಾಳ ಹಾಗೂ ಕೇರಳ ರಾಜ್ಯಗಳಲ್ಲಿ ಆ ಪ್ರಯೋಗ ಯಶಸ್ವಿಯಾಗಿತ್ತು.





ಸಂಸ್ಕಾರಕ್ಕಿಂತ ಮುಂಚೆಯೇ ಇಂತಹ ಒಂದು ಹೊಸ ಪ್ರಯೋಗಕ್ಕೆ ಕನ್ನಡ ಚಿತ್ರರಂಗ ತವಕಿಸುತ್ತಿತ್ತು. 1964 ರಲ್ಲಿ ತಯಾರಾದ "ನಾಂದಿ"ಯಲ್ಲಿ ಹೊಸ ಅಲೆ ಚಿತ್ರಮಾರ್ಗದ ರೂಪುರೇಷೆಗಳೂ ಕುಡಿಯೊಡೆಯುತ್ತಿದ್ದುದು ಸ್ಪಷ್ಟವಾಗಿತ್ತು. "ನಾಂದಿ" ಹೊಸ ಅಲೆಯ ಚಿತ್ರ ಪರಂಪರೆಗೆ ಮಾರ್ಗವಾಯಿತು. ಆರು ವರ್ಷಗಳ ನಂತರ ಸಂಸ್ಕಾರ ಅದಕ್ಕೆ ಸ್ಪಷ್ಟ ರೂಪ ನೀಡಿತು. ಡಾ.ಯು.ಆರ್.ಅನಂತಮೂರ್ತಿ ಅವರ ಬಹು ಚರ್ಚಿತ ಕಾದಂಬರಿ ಸಂಸ್ಕಾರ ಚಲನಚಿತ್ರವಾಗಿ ರೂಪು ತಳೆಯಲು ಮುಂದಾದಾಗ ಬುದ್ಧಿ ಜೀವಿಗಳಲ್ಲಾ ಒಂದಾದರು. ಈ ಚಿತ್ರಕ್ಕೆ ಸ್ವರ್ಣ ಕಮಲ ಪ್ರಶಸ್ತಿ ಬಂದು, 13 ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಅದು ಭಾಗವಹಿಸಿದ ನಂತರ ಅಂತಹ ಹೊಸ ಅಲೆ ಪರಂಪರೆಯತ್ತ ಬಹಳಷ್ಟು ಮಂದಿ ಆಕರ್ಷಿತರಾದರು. 1972 ರಲ್ಲಿ ಎಸ್.ಎಲ್.ಭೈರಪ್ಪನವರ ಕಾದಂಬರಿ ಆಧರಿಸಿ ಗಿರೀಶ್ ಕಾರ್ನಾಡ್ ಹಾಗೂ ಬಿ.ವಿ.ಕಾರಂತ ಜಂಟಿಯಾಗಿ "ವಂಶವೃಕ್ಷ" ತೆರೆಗೆ ತಂದು ಹೊಸ ಅಲೆ ಚಿತ್ರ ನಿರ್ಮಾಣ ಪರಂಪರೆಗೆ ಮತ್ತಷ್ಟು ಹುರುಪು ತುಂಬಿದರು.

ಸಂಕಲ್ಪ, ಅಬಚೂರಿನ ಪೋಸ್ಟಾಫೀಸ್, ಕಾಡು, ಮಾಡಿ ಮಡಿದವರು, ಚೋಮನ ದುಡಿ, ಕಂಕಣ, ಪಲ್ಲವಿ, ಅನುರೂಪ, ಎಲ್ಲಿಂದಲೋ ಬಂದವರು, ಋಷ್ಯಶೃಂಗ, ಚಂಡಮಾರುತ, ಬರ, ಕುಡಿಯರ ಕೂಸು ಮೊದಲಾದ ಚಿತ್ರಗಳು ಹೊಸ ಪರಂಪರೆಯನ್ನು ಹುಟ್ಟಿಹಾಕಿದವು. 1977 ರಲ್ಲಿ ಗಿರೀಶ್ ಕಾರ್ನಾಡ್ ಮತ್ತು ಬಿ.ವಿ.ಕಾರಂತ ಅವರು ಜಂಟಿಯಾಗಿ ತಬ್ಬಲಿಯು ನೀನಾದೆ ಮಗನೇ ಚಿತ್ರವನ್ನು ನಿರ್ದೇಶಿಸಿದರು. ಇದೇ ಸಮಯದಲ್ಲಿ ಈ ಆಂದೋಲನಕ್ಕೆ ಇನ್ನಷ್ಟು ಜನ ಇಳಿದು, ಹಲವಾರು ಮಹತ್ವದ ಚಿತ್ರ ಪ್ರಯೋಗಗಳನ್ನು ಮಾಡಿದ್ದಾರೆ. ಋಷ್ಯಶೃಂಗ ಚಿತ್ರದ ಮೂಲಕ ವಿ.ಆರ್.ಕೆ.ಪ್ರಸಾದ್, ಪಲ್ಲವಿ, ಅನುರೂಪ, ಖಂಡವಿದಕೋ ಕೋ ಮಾಂಸವಿದಕೋ ಚಿತ್ರದ ಮೂಲಕ ಪಿ.ಲಂಕೇಶ್, ಕಾಕನ ಕೋಟೆ ಮೂಲಕ ಸಿ.ಆರ್.ಸಿಂಹ, ಸ್ಪಂದನ ಮೂಲಕ ಪಿ.ಎನ್.ಶ್ರೀನಿವಾಸ್, ಅರಿವು ಚಿತ್ರ ದ ಮೂಲಕ ಕಟ್ಟೆ ರಾಮಚಂದ್ರ, ಕರಾವಳಿ ಮೂಲಕ ವಿಶುಕುಮಾರ್, ಪ್ರಯೋಗಶೀಲರಾಗಿದ್ದರು.







ಆನಂತರದ ದಿನಗಳಲ್ಲಿ ಹೊಸ ಅಲೆ ಚಳವಳಿಯ ಎರಡನೇ ಘಟ್ಟ ಆರಂಭವಾಯಿತು. ಈ ಹಂತದಲ್ಲಿ ಗಿರೀಶ್ ಕಾಸರವಳ್ಳಿ ಅವರು "ಘಟಶ್ರಾದ್ಧ" (1975) ನಿರ್ದೇಶಿಸುವ ಮೂಲಕ ಪರ್ಯಾಯ ಚಿತ್ರಗಳು ಚೇತರಿಸಿಕೊಳ್ಳುವಂತೆ ಮಾಡಿದರು. ಅವರ ನಿರ್ದೇಶನದ ಮೊದಲ ಚಿತ್ರವೇ ಸ್ವರ್ಣಕಮಲ ಪ್ರಶಸ್ತಿ ಪಡೆದ ನಂತರ ಕನ್ನಡ ಚಿತ್ರರಂಗದ ಬಗ್ಗೆ ಇತರ ರಾಜ್ಯಗಳಲ್ಲಿ ನಿರೀಕ್ಷೆ ಹೆಚ್ಚಾಯಿತು. ಮೂರು ದಾರಿಗಳು, ಆಕ್ರಮಣ, ತಬರನ ಕತೆ, ಮನೆ, ದ್ವೀಪ, ತಾಯಿ ಸಾಹೇಬ, ಗುಲಾಬಿ ಟಾಕೀಸ್, ಹಸೀನಾ, ನಾಯಿ ನೆರಳು, ಕನಸೆಂಬೊ ಕುದುರೆಯನೇರಿ , ಮೊದಲಾದ ಚಿತ್ರಗಳು ಗಮನಾರ್ಹ. ಗಿರೀಶ್ ಅವರ ಚಿತ್ರಗಳು ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಭಾಗವಹಿಸಿದ್ದು, ಕನ್ನಡಕ್ಕೆ ನಾಲ್ಕು ಸ್ವರ್ಣ ಕಮಲ ರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿ, ಕನ್ನಡಕ್ಕೆ ಹೆಮ್ಮೆ ತಂದಿದ್ದಾರೆ.




1978 ರಲ್ಲಿ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು "ಒಂದು ಊರಿನ ಕಥೆ" ಮೂಲಕ ಹೊಸ ಅಲೆ ಚಳವಳಿಯಲ್ಲಿ ತೊಡಗಿಸಿಕೊಂಡರು. ಎಡಗೈ ಮತ್ತು ಬಲಗೈ ಎಂದು ಗುರುತಿಸಿಕೊಳ್ಳುವ ವರ್ಗಗಳ ಸಾಮಾಜಿಕ ಸಂಘರ್ಷಕ್ಕೆ ಒತ್ತು ನೀಡಿತ್ತು. ಈ ವಸ್ತು ಇಡೀ ಭಾರತೀಯ ಚಿತ್ರರಂಗದಲ್ಲಿ ಅದೇ ಮೊದಲ ಬಾರಿ ಸಿನಿಮಾ ಮಾಧ್ಯಮದ ಮೂಲಕ ಚರ್ಚೆಗೆ ಒಳಪಟ್ಟಿತು.



ನಂತರ ದಿನಗಳಲ್ಲಿ ಬರಗೂರು, ಬೆಂಕಿ, ಸೂರ್ಯ, ಕರಡೀಪುರ, ಶಾಂತಿ, ಭಾಗೀರಥಿ, ಕ್ಷಾಮ, ಮೊದಲಾದ ಚಿತ್ರಗಳ ಮೂಲಕ ಮಹತ್ವದ ನಿರ್ದೇಶಕರೆನಿಸಿದರು. ಮಾತೇ ಇಲ್ಲದ ಮೂಕಿ ಚಿತ್ರ ಶಾಂತಿಯ ಮೂಲಕ ಶಾಂತಿ ಮತ್ತು ಸಮರದ ಕತೆ ಹೇಳಿದ ಬರಗೂರು, ಮದರ್ ಕಾದಂಬರಿ ಆಧರಿಸಿ ನಿರ್ದೇಶಿಸಿದ ತಾಯಿ ಚಿತ್ರಕ್ಕೆ ರಾಷ್ಟ್ರೀಯ ಪ್ರಶಸ್ತಿ ಬಂದಿತು. ಅಮೃತಮತಿ, ಬೆಕ್ಕು, ಶಬರಿ, ಹಾಡುಗಳ ಮೂಲಕವೇ ಕತೆ ಹೇಳುವ "ಕೋಟೆ" ಚಿತ್ರಗಳು ಪರ್ಯಾಯ ಸಿನಿಮಾ ಮೂಲಕ ಸಾಮಾಜಿಕ ಕಳಕಳಿ ವ್ಯಕ್ತ ಪಡಿಸುವ ಚಿತ್ರಗಳಾಗಿವೆ. ಪ್ರೇಮಾ ಕಾರಂತ ನಿರ್ದೇಶನದ ಫಣಿಯಮ್ಮ, ಟಿ.ಎಸ್.ರಂಗಾ ಅವರ "ಸಾವಿತ್ರಿ, ಸತ್ಯು ನಿರ್ದೇಶನದ ಗಳಿಗೆ, ಸದಾನಂದ ಸುವರ್ಣರ ಕುಬಿ ಮತ್ತು ಇಯಾಲ, ಅವಸ್ಥೆ, ಚಂದ್ರಶೇಖರ ಕಂಬಾರರ ಕಾಡು ಕುದುರೆ, ಸಂಗೀತಾ, ಸ್ಪಂದನ ಗಮನ ಸೆಳೆಯುವ ಚಿತ್ತಗಳೆನಿಸಿದವು.




1980 ರ ಆರಂಭದಲ್ಲಿ ಟಿ.ಎಸ್.ನಾಗಾಭರಣ "ಗ್ರಹಣ" ಮೂಲಕ ಗಂಭೀರ ಚಿಂತನೆಗಳ ಸಿನಿಮಾ ಸಾಧ್ಯತೆಯನ್ನು ತೋರಿಸಿಕೊಟ್ಟರು. ಇದಕ್ಕೆ ರಜತಕಮಲ ರಾಷ್ಟ್ರೀಯ ಪ್ರಶಸ್ತಿ ಗೌರವ ದೊರೆಕಿತು. ನಂತರ, ನಾಗಮಂಡಲ, ಮೈಸೂರು ಮಲ್ಲಿಗೆ, ಬ್ಯಾಂಕರ್ ಮಾರ್ಗಯ್ಯ, ಚಿಗುರಿದ ಕನಸು, ನೀಲಾ, ಮೊದಲಾದ ಪ್ರಯೋಗಗಳ ಮೂಲಕ ನಾಗಾಭರಣ ಪ್ರಯೋಗಶೀಲ ನಿರ್ದೇಶಕರೆನಿಸಿದ್ದಾರೆ.




ಇದೇ ಹಾದಿಯಲ್ಲಿ ಪಿ.ಶೇಷಾದ್ರಿ, ರಾಮದಾಸ ನಾಯ್ಡು, ಚಿತ್ರಮಾಧ್ಯಮವನ್ನು ಗಂಭೀರವಾಗಿ ತೆಗೆದುಕೊಂಡ ನಿರ್ದೇಶಕರಾಗಿದ್ದಾರೆ. 2000 ದಲ್ಲಿ ಮುನ್ನುಡಿ ಚಿತ್ರವನ್ನು ನಿರ್ದೇಶಿಸಿದ ಪಿ.ಶೇಷಾದ್ರಿ, ಬೆಳ್ಳಿತೆರೆಗೆ ಬಂದ ಮುಸ್ಲಿಂ ಸಂವೇದನೆಯ ಪ್ರಥಮ ಚಿತ್ರವೆನಿಸಿ ಕನ್ನಡ ಚಿತ್ರರಂಗದಲ್ಲಿ ಒಂದು ಮೈಲಿಗಲ್ಲನ್ನು ನಿರ್ಮಿಸಿತು. ಮೊದಲನೆಯ ಚಿತ್ರಕ್ಕೇ ಎರಡು ರಾಷ್ಟ್ರ ಪ್ರಶಸ್ತಿ ಹಾಗೂ ಆರು ರಾಜ್ಯ ಪ್ರಶಸ್ತಿಗಳಿಸಿದ ಚಿತ್ರವೆನಿಸಿತು ಮುನ್ನುಡಿ. ಶೇಷಾದ್ರಿ ಅವರು ನಿರ್ದೇಶಿಸಿದ ಎರಡನೇ –ಚಿತ್ರ ಅತಿಥಿ ಕೂಡ ರಾಷ್ಟ್ರಪ್ರಶಸ್ತಿ ಪಡೆಯಿತು. ಮೂರನೇ ಚಿತ್ರ"ಬೇರು" 2004 ರಲ್ಲಿ ರಾಷ್ಟ್ರ ಪ್ರಶಸ್ತಿಗೆ ಭಾಜನವಾಯಿತು. ಸತತವಾಗಿ ಮೂರು ಬಾರಿ ರಾಷ್ಟ್ರ ಪ್ರಶಸ್ತಿ ಪಡೆಯುವ ಮೂಲಕ ಶೇಷಾದ್ರಿ ಹ್ಯಾಟ್ರಿಕ್ ನಿರ್ದೇಶಕ ಎಂಬ ಕೀರ್ತಿ ಪಡೆದರು. ಇವರ ಮುಂದಿನ ಚಿತ್ರಗಳಾದ ತುತ್ತೂರಿ, ವಿಮುಕ್ತಿ, ಬೆಟ್ಟದ ಜೀವ,

ಭಾರತ್ ಸ್ಟೋರ್ಸ್, ಹಾಗೂ ಡಿಸೆಂಬರ್ –1 ಚಿತ್ರಗಳೂ ಕೂಡ ರಾಷ್ಟ್ರ ಪ್ರಶಸ್ತಿ ಪಡೆಯುವ ಮೂಲಕ ಎಂಟು ಬಾರಿ ರಾಷ್ಟ್ರಪ್ರಶಸ್ತಿ ಪಡೆದ ಭಾರತದ ಏಕೈಕ ನಿರ್ದೇಶಕ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.



ಪ್ರವಾಹ, ಮುಸ್ಸಂಜೆ, ಮೊಗ್ಗಿನ ಜಡೆ, ಬೇಲಿ ಮತ್ತು ಹೊಲ, ಹೆಜ್ಜೆಗಳು ಚಿತ್ರಗಳ ಮೂಲಕ ಪಿ.ಆರ್.ರಾಮದಾಸ್ ನಾಯ್ಡು ಗಮನ ಸೆಳೆದಿದ್ದಾರೆ. ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ. ದೇವೀರಿ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಕವಿತಾ ಲಂಕೇಶ್ ನಂತರದ ದಿನಗಳಲ್ಲಿ ಕಮರ್ಷಿಯಲ್ ಚಿತ್ರಗಳತ್ತ ಹೊರಳಿದರು.





ಯು.ಆರ್.ಅನಂತಮೂರ್ತಿ ಅವರ ಸಣ್ಣಕತೆ ಮೌನಿಯನ್ನಾಧರಿಸಿ ಅದೇ ಹೆಸರಿನ ಚಿತ್ರವನ್ನು ನಿರ್ದೇಶಿಸಿದ ಬಿ.ಎಸ್.ಲಿಂಗದೇವರು ಮಹತ್ವದ ಪ್ರಯೋಗಶೀಲ ನಿರ್ದೇಶಕರಾಗಿದ್ದಾರೆ. "ಕಾಡ ಬೆಳದಿಂಗಳು" ಅವರ ನಿರ್ದೇಶನದ ಮತ್ತೊಂದು ಪ್ರಯೋಗ. "ವಿರಾಟಪುರದ ವಿರಾಗಿ" ಕೂಡ ಹಲವಾರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾಗವಹಿಸಿದೆ. ಬಿ.ಸುರೇಶ್ "ಅರ್ಥ" ಚಿತ್ರದ ಮೂಲಕ ಜಾಗತೀಕರಣ ಉದಾರೀಕರಣದ ಪರಿಣಾಮಗಳನ್ನು ಹೇಳಿದರು. "ಪುಟ್ಟಕ್ಕನ ಹೈವೇ" ಅವರ ಮತ್ತೊಂದು ಚಿತ್ರ. :ಗುಬ್ಬಚ್ಚಿಗಳು" ಚಿತ್ರದ ಮೂಲಕ ಭರವಸೆ ಮೂಡಿಸಿದ್ದ ಅಭಯಸಿಂಹ ಶಿಕಾರಿಯಲ್ಲಿ ಭರವಸೆಯ ನಿರ್ದೇಶಕರೆನಿಸಿದ್ದಾರೆ. ಎನ.ಆರ್.ನಂಜುಂಡೇಗೌಡ ಅವರ "ನಾನು ಗಾಂಧಿ", ಉಮಾಶಂಕರ ಸ್ವಾಮಿ ಅವರ ಬನದ ನೆರಳು, ಮನ್ಸೋರೆ ಅವರ ಅರಿವು, ಸಿ.ವಿ.ಪಂಚಾಕ್ಷರಿ ಅವರ "ಪ್ರಕೃತಿ" ಗಮನ ಸೆಳೆಯುವ ಪ್ರಯೋಗಗಳಾಗಿವೆ. ಕನ್ನಡದಲ್ಲಿ ಹೊಸ ಪ್ರಯೋಗವೆನಿಸಿದ ತಿಥಿ ಚಿತ್ರದ ನಿರ್ದೇಶಕ ರಾಮಿರೆಡ್ಡಿ, "ಪೆದ್ರೋ" ಮೂಲಕ ಬೆಳಕಿಗೆ ಬಂದ ನಟೇಶ್ ಹೆಗಡೆ ಅವರುಗಳು ಹೊಸ ಪ್ರಯೋಗಗಳಿಗೆ ತಮ್ಮನ್ನು ಒಡ್ಡಿಕೊಂಡಿದ್ದಾರೆ









ಕೆ.ಶಿವರುದ್ರಯ್ಯ ಅವರು ನಿರ್ದೇಶಿಸಿದ "ಮಾಗಿಯ ಕಾಲ" ಭಾರತೀಯ ಚಿತ್ರರಂಗದಲ್ಲಿಯೇ ವಿಶಿಷ್ಟ ಕಥನ ಪ್ರಯೋಗವೆನಿಸಿದೆ. ಸಾಹಿತ್ಯ ಕೃತಿಗಳನ್ನು ದೃಶ್ಯ ಮಾಧ್ಯಮಕ್ಕೆ ಪರಿಣಾಮಕಾರಿಯಾಗಿ ನಿರೂಪಿಸುವ ಶಿವರುದ್ರಯ್ಯ ದಾಟು, ಅಮಾಸ, ಭಗವತಿ ಕಾಡು, ಸಿಗ್ನಲ್ ಮ್ಯಾನ್ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇವರ ಚಿತ್ರಗಳು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮಹತ್ವ ಪಡೆದಿವೆ.





ಪೃಥ್ವಿ ಕೊಣನೂರು ನಿರ್ದೇಶನದ ರೈಲ್ವೇ ಚಿಲ್ಡ್ರನ್, ಹದಿನೇಳೆಂಟು, ಪಿಂಕಿ ಎಲ್ಲಿ ಮಹತ್ವದ ಪ್ರಯೋಗಗಳಾಗಿವೆ. ಕೃಷ್ಣೇಗೌಡ ಅವರ ನಿರ್ದೇಶನದ ನಾನು ಕುಸುಮ ಗಮನಾರ್ಹ ಚಿತ್ರವಾಗಿದೆ. ಚಂಪಾಶೆಟ್ಟಿ ಅವರ ನಿರ್ದೇಶನದ "ಕೋಳಿ ಎಸ್ರು" ಉತ್ತಮ ಪ್ರಯತ್ನವಾಗಿ ಗಮನ ಸೆಳೆದಿದೆ.


# 90 ವರ್ಷದ ಕನ್ನಡ ಚಿತ್ರರಂಗ
# ಪ್ರಾತಿನಿಧಿಕ ಕನ್ನಡ ಚಲನಚಿತ್ರಗಳು



# ಹರಿಶ್ಚಂದ್ರ

**(1943 / ಕಪ್ಪು–ಬಿಳುಪು / ಪೌರಾಣಿಕ)**

**ಕಥಾಸಾರ**: ಹರಿಶ್ಚಂದ್ರ ಮಹಾರಾಜ ಸತ್ಯಕ್ಕಾಗಿ ರಾಜ್ಯ, ಕೋಶ, ಹೆಂಡತಿ, ಮಕ್ಕಳನ್ನು ಬಿಟ್ಟು ಕಷ್ಟಪಡುವ ಪೌರಾಣಿಕ ಕಥಾನಕವೇ ಈ ಚಿತ್ರದ ಸಾರಾಂಶ. ವಿಶ್ವಾಮಿತ್ರನನ್ನು ಖಳನಾಯಕನಂತೆ ಚಿತ್ರಿಸದೇ ತಮ್ಮಲ್ಲಿನ ತಪಃಶಕ್ತಿಯನ್ನು ಹರಿಶ್ಚಂದ್ರನಿಗೆ ಧಾರೆಯೆರೆಯಲು ಪರೀಕ್ಷಿಸುವ ಸಲುವಾಗಿ ಈ ಕಠಿಣ ಪರೀಕ್ಷೆಗಳನ್ನು ಒಡ್ಡುವಂತೆ ಚಿತ್ರನಾಟಕ ರಚಿತವಾಗಿತ್ತು.



**ಆರ್.ನಾಗೇಂದ್ರರಾವ್** ನಿರ್ದೇಶನದ ಮೊದಲ ಚಿತ್ರ. ರಾಜಯ್ಯಂಗಾರ್ ಅಭಿನಯಿಸಿದ ಚಿತ್ರ. ಬೇರೆ ಭಾಷೆಯೊಂದಕ್ಕೆ ಡಬ್ ಆದ ಭಾರತದ ಮೊದಲ ಚಿತ್ರ. ತಮಿಳು ಭಾಷೆಗೆ ಡಬ್ ಆದ ಈ ಚಿತ್ರಕ್ಕೆ ಕನ್ನಡ ಕಲಾವಿದರೇ ಸಂಭಾಷಣೆ ಹೇಳಿದರು. ಧಾರವಾಡದಲ್ಲಿ ಶತದಿನೋತ್ಸವ ಆಚರಿಸಿಕೊಂಡಿತು. 11,000 ಅಡಿಗಿಂತಲೂ ಯಾವುದೇ ಚಲನಚಿತ್ರ ಉದ್ದವಿರಬಾರದೆಂಬ ಸರ್ಕಾರದ ನಿಷೇಧಾಜ್ಞೆಯಂತೆ ಆ ಮಿತಿಯೊಳಗೆ ಚಿತ್ರವನ್ನು ತಯಾರಿಸಲಾಯಿತು. ಹುಬ್ಬಳ್ಳಿಯಲ್ಲಿ 29 ವಾರಗಳ ಕಾಲ ಪ್ರದರ್ಶಿತವಾದ ಮೊದಲ ಚಿತ್ರ.

**ನಿರ್ಮಾಪಕ**: ಆರ್.ನಾಗೇಂದ್ರರಾವ್

**ನಿರ್ದೇಶನ**: ಆರ್.ನಾಗೇಂದ್ರರಾವ್

**ಸಂಕಲನ**: ಎಂ.ವಿ.ರಾಮನ್

**ಛಾಯಾಗ್ರಹಣ**: ಪಿ.ವಿ.ಕೃಷ್ಣ ಅಯ್ಯರ್

**ತಾರಾಗಣ**: ಎಂ.ವಿ. ಸುಬ್ಬ ಯ್ಯನಾಯ್ಡು (ಹರಿಶ್ಚಂದ್ರ), ಆರ್.ನಾಗೇಂದ್ರರಾವ್ (ವಿಶ್ವಾಮಿತ್ರ), ಜಿ.ವಿ.ಕೃಷ್ಣಮೂರ್ತಿರಾವ್ (ನಕ್ಷತ್ರಿಕ), ಬಿ.ಎಸ್. ರಾಜಯ್ಯಂಗಾರ್ (ನಾರದ), ಎಂ.ಜಿ.ಮರಿರಾವ್ (ಮೈತ್ರೇಯ), ಲಕ್ಷ್ಮೀಬಾಯಿ (ಚಂದ್ರಮತಿ), ಮಾ।ನರಸಿಂಹನ್, ಸಿ.ವಿ.ಯೋಗೀಶ್ವರ, ಡಿ.ಜಯರಾವ್, ಎಂ.ಎನ್.ಸುಬ್ಬಯ್ಯ, ವಿ.ಕೃಷ್ಣಪ್ಪ, ಗಣಪತಿಭಟ್, ಬಿ.ರಾಘವೇಂದ್ರರಾವ್, ಕಮಲಾಬಾಯಿ



# ಜಗಜ್ಯೋತಿ ಬಸವೇಶ್ವರ

**(1959 / ಕಪ್ಪು-ಬಿಳುಪು / ಪೌರಾಣಿಕ)**

**ಕಥಾಸಾರ**: ಬಸವೇಶ್ವರನ ಬಾಲ್ಯದಿಂದ ಹಿಡಿದು ಬಿಜ್ಜಳನ ಬಳಿ ಮಹಾಮಂತ್ರಿಯಾಗಿ ಶಿವಶರಣರ ಸೇವೆ ಮಾಡಿ ಮೇಲು-ಕೀಳು ಎನ್ನದೆ ಎಲ್ಲಾ ಜಾತಿಗಳನ್ನು ಒಂದುಗೂಡಿಸುವ ವರೆಗೆ ಕಥಾ ಹಂದರ ಹರಡಿದೆ.



**ಟಿ.ವಿ.ಸಿಂಗ್ ಠಾಕೂರ್** (1911-1995)ಕನ್ನಡದಲ್ಲಿ ಹೆಸರಾಂತ ನಿರ್ದೇಶಕ, ನಿರ್ಮಾಪಕ ಹಾಗೂ ಚಿತ್ರಸಾಹಿತಿ. ಜೆಮಿನಿ ಪಿಕ್ಚರ್ಸ್ ಸಂಸ್ಥೆಯಲ್ಲಿ ಕ್ಯಾಮರಾಮನ್ ಆಗಿದ್ದ ಸಿಂಗ್ ಠಾಕೂರ್, ಮಹಾತ್ಮ ಪಿಕ್ಚರ್ಸ್ ಇಬ್ಭಾಗವಾದಾಗ, ವಿಶ್ವನಾಥ ಶೆಟ್ಟಿಯವರ ಕರೆಯ ಮೇಲೆ ನಿರ್ದೇಶಕರಾಗುತ್ತಾರೆ. ಮಂತ್ರಾಲಯ ಮಹಾತ್ಮೆ (1996), ಕರುಣೆಯೇ ಕುಟುಂಬದ ಕಣ್ಣು (1962), ಓಹಿಲೇಶ್ವರ (1956) ಚಲನಚಿತ್ರಗಳ ನಿರ್ದೇಶಕರು. "ಚಂದವಳ್ಳಿಯ ತೋಟ" ಚಿತ್ರದ ನಿರ್ದೇಶನಕ್ಕಾಗಿ ಸಿಂಗ್ ಠಾಕೂರ್ ರಾಷ್ಟ್ರಪತಿಗಳ ಸ್ವರ್ಣ ಪ್ರಶಸ್ತಿ ಪಡೆದಿದ್ದಾರೆ.

**ನಿರ್ಮಾಪಕ**: ಜಿ.ಎಸ್.ಎಸ್.ಮೂರ್ತಿ

**ನಿರ್ದೇಶನ**: ಟಿ.ವಿ.ಸಿಂಗ್ ಠಾಕೂರ್

**ಸಂಕಲನ**: ಎನ್.ಸಿ. ರಾಜನ್ ವೆಂಕಟರಾಮ್

**ಛಾಯಾಗ್ರಹಣ**: ಬಿ.ದೊರೈರಾಜ್

**ಸಂಗೀತ**: ಜಿ.ಕೆ.ವೆಂಕಟೇಶ್

**ತಾರಾಗಣ**: ಹೊನ್ನಪ್ಪ ಭಾಗವತರ್, ರಾಜ್‌ಕುಮಾರ್, ಕೆ.ಎಸ್.ಅಶ್ವತ್ಥ್, ಬಿ.ಸರೋಜಾದೇವಿ, ಟಿ.ಎನ್.ಬಾಲಕೃಷ್ಣ, ಜಿ.ವಿ.ಅಯ್ಯರ್, ಸಂಧ್ಯಾ, ಲೀಲಾವತಿ, ಜಿ.ಸದಾಶಿವಯ್ಯ, ನರಸಿಂಹರಾಜು, ಹೆಚ್. ರಾಮಚಂದ್ರಶಾಸ್ತ್ರಿ, ಈಶ್ವರಪ್ಪ, ವೀರಭದ್ರಪ್ಪ, ವೆಂಕಟಸುಬ್ಬಯ್ಯ, ಆರ್.ಎನ್.ಮಾಗಡಿ, ಹುಲಿಮನೆ ಸೀತಾರಾಮಶಾಸ್ತ್ರಿ, ಸಿದ್ದಯ್ಯಸ್ವಾಮಿ, ಅನಿಲ್‌ಕುಮಾರ್, ಜಿ.ಉದಯಶಂಕರ್, ಚಂದ್ರಯ್ಯಸ್ವಾಮಿ, ಪದ್ಮಿನಿ ಪ್ರಿಯದರ್ಶಿನಿ,



## ಭಕ್ತ ಕನಕದಾಸ

**(1960 / ಕಪ್ಪು-ಬಿಳುಪು / ಪೌರಾಣಿಕ)**

**ಕಥಾಸಾರ**: ಪಾಳೇಗಾರ ವೀರನಾಯಕ ಹಾಗು ಹುಚ್ಚಮ್ಮ ದಂಪತಿಗಳ ಪುತ್ರನಾಗಿ ಜನಿಸಿದ ತಿಮ್ಮಪ್ಪನಾಯಕ ಮಲ್ಲನಾಯಕನ ಪುತ್ರಿ ಲಚ್ಚಿಯನ್ನು ಪ್ರೀತಿಸುತ್ತಾನೆ. ಶ್ರೀನಿವಾಸ ಕನಸಿನಲ್ಲಿ ಕಾಣಿಸಿಕೊಂಡು ನೀಡಿದ ಅಪ್ಪಣೆಯಂತೆ ಭೂಮಿಯನ್ನು ಅಗೆದಾಗ ಶ್ರೀನಿವಾಸ ವಿಗ್ರಹ ಹಾಗೂ ಹೇರಳ ಚಿನ್ನ ದೊರೆತು ಮುಂದೆ ಕನಕನಾಯಕನಾಗುತ್ತಾನೆ. ಲಚ್ಚಿಯ ವಿಷಯದಲ್ಲಿ ನಡೆದ ಹೊಡೆದಾಟದಿಂದ ಬೇಸತ್ತ ಕನಕನಾಯಕ ದೇಶ ಸಂಚಾರ ಹೋಗುತ್ತಾನೆ. ವ್ಯಾಸರಾಯರಿಂದ ಅನುಗ್ರಹೀತನಾಗಿ ವಿಷ್ಣು ಭಕ್ತನಾಗಿ ಕನಕದಾಸನಾಗುತ್ತಾನೆ. ಉಡುಪಿಯಲ್ಲಿ ಕೃಷ್ಣನೇ ಹಿಂದಕ್ಕೆ ತಿರುಗಿ ನಿಂತು ಕನಕದಾಸನಿಗೆ ದರ್ಶನ ನೀಡುತ್ತಾನೆ. ಅಪೂರ್ವ ಸಾಹಿತ್ಯ ಸೃಷ್ಟಿ ಕನಕದಾಸರಿಂದ ಆಗುತ್ತದೆ.



**ವೈ.ಆರ್.ಸ್ವಾಮಿ** ಭಾರತೀಯ ಚಲನಚಿತ್ರ ನಿರ್ದೇಶಕ ಮತ್ತು ಚಿತ್ರಕಥೆಗಾರ ಮತ್ತು ನಿರ್ಮಾಪಕರು, ಅವರು ಪ್ರಾಥಮಿಕವಾಗಿ ಕನ್ನಡ ಚಿತ್ರರಂಗದಲ್ಲಿ ಕೆಲಸ ಮಾಡಿದರು. ಅವರು ತಮ್ಮ ವೃತ್ತಿಜೀವನದಲ್ಲಿ 35 ಕ್ಕೂ ಹೆಚ್ಚು ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ, ಅವುಗಳಲ್ಲಿ 17 ಚಿತ್ರಗಳಲ್ಲಿ ರಾಜ್‌ಕುಮಾರ್ ಅವರು ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ, ರಾಜ್‌ಕುಮಾರ್ ಅವರ ಅತಿ ಹೆಚ್ಚು ಚಿತ್ರಕ್ಕೆ ನಿರ್ದೇಶಿಸಿದ ದಾಖಲೆಯನ್ನೂ ಅವರು ಹೊಂದಿದ್ದಾರೆ.

**ನಿರ್ದೇಶನ**: ವೈ.ಆರ್.ಸ್ವಾಮಿ

**ನಿರ್ಮಾಣ**: ಶ್ಯಾಮಪ್ರಸಾದ್ ಮೂವೀಸ್

**ನಿರ್ಮಾಪಕ**: ಡಿ.ಆರ್.ನಾಯ್ಡು

**ನಿರ್ದೇಶನ**: ವೈ.ಆರ್.ಸ್ವಾಮಿ

**ಚಿತ್ರಕಥೆ**: ಹುಣಸೂರು ಕೃಷ್ಣಮೂರ್ತಿ

**ಛಾಯಾಗ್ರಹಣ**: ಆರ್.ಮಧು

**ಸಂಗೀತ**: ಎಂ.ವೆಂಕಟರಾಜು

**ಧ್ವನಿಮುದ್ರಣ**: [illegible]ಯಪ್ಪನ್, ಮೋಹನ್‌ಸುಂದರಂ, ನಾಗೇಶ್ವರನ್

**ತಾರಾಗಣ**: ರಾಜಕುಮಾರ್, ಉದಯಕುಮಾರ್, ಕೃಷ್ಣಕುಮಾರಿ, ಕೆ.ಎಸ್.ಅಶ್ವತ್ಥ್, ಹೆಚ್. ರಾಮಚಂದ್ರಶಾಸ್ತ್ರಿ, ಜಯಾ, ಸೋರಟ್ ಅಶ್ವತ್ಥ್, ಸಿ.ವಿ.ಶಿವಶಂಕರ್, ರತ್ನಾಕರ್, ವಾಸುದೇವ ಗಿರಿಮಾಜಿ, ಎಂ.ಎಸ್.ಸುಬ್ಬಣ್ಣ, ಜಯಶ್ರೀ, ಲಕ್ಷ್ಮೀದೇವಿ



# ಅಮರಶಿಲ್ಪಿ ಜಕಣಾಚಾರಿ

**(1964 / ವರ್ಣಚಿತ್ರ / ಜಾನಪದ)**

**ಕಥಾಸಾರ:** ನರ್ತಕಿಯೆಬ್ಬಳಿಗೆ ಮನಸೋತ ನಿಪುಣ ಶಿಲ್ಪಿ ಜಕಣಾಚಾರಿ, ವಿವಾಹದ ನಂತರ ಒತ್ತಡಕ್ಕೆ ಮಣಿದು ರಾಜನ ಮುಂದೆ ನರ್ತಿಸುವ ಆಕೆಯನ್ನು ತೊರೆದು ಶಿಲ್ಪಕಲೆಯಲ್ಲಿ ಮೈಮರೆಯುತ್ತಾನೆ. ಅವನ ಮಗ ಅವನನ್ನು ಮೀರಿಸುವ ಶಿಲ್ಪಿ. ದೂರವಾಗಿದ್ದ ಅವನಿಂದ ಅಪ್ಪ-ಅಮ್ಮ ಒಂದಾಗುತ್ತಾರೆ. ಇದು ಕನ್ನಡದ ಪ್ರಥಮ ಸಂಪೂರ್ಣ ವರ್ಣ ಚಿತ್ರ.



**ಬಿ.ಎಸ್. ರಂಗಾ** (1917-2010) (ಬಿಂಡಿಗನವಿಲೆ ಶ್ರೀನಿವಾಸ ಅಯ್ಯಂಗಾರ್ ರಂಗ 17 ನೇ ವಯಸ್ಸಿಗೇ ಫೋಟೋಗ್ರಾಫರ್ ಆಗಿ ವೃತ್ತಿ ಆರಂಭಿಸಿದ ಬಿ.ಎಸ್. ರಂಗ, ಮಾಗಡಿಯವರು.ಛಾಯಾಗ್ರಹಣದಲ್ಲಿ ಅದ್ಭುತ ಕಲೆಗಾರಿಕೆ ಪ್ರದರ್ಶಿಸಿದ ರಂಗಾ, ಲಂಡನ್‌ನ ರಾಯಲ್ ಸಲೂನ್‌ನಲ್ಲಿ ಅದನ್ನು ಪ್ರದರ್ಶಿಸಿದರು. ರಾಯಲ್ ಫೋಟೋಗ್ರಾಫಿಕ್ ಸೊಸೈಟಿ ಅವರಿಗೆ ಫೆಲೋಶಿಪ್ ನೀಡಿತು. ನಂತರ ಕನ್ನಡದ ಚಲನಚಿತ್ರ ನಿರ್ಮಾಪಕರಾಗಿ ಮದ್ರಾಸಿನಲ್ಲಿ ವಿಕ್ರಂ ಸ್ಟುಡಿಯೋ ಸ್ಥಾಪಿಸಿದರು. ಕನ್ನಡ ದ ಮೊದಲ ಬಣ್ಣದ ಚಿತ್ರವಾದ "ಅಮರಶಿಲ್ಪಿ ಜಕಣಾಚಾರಿ" ನಿರ್ದೇಶಿಸಿದರು. ನಂತರದ ದಿನಗಳಲ್ಲಿ ಅವರು "ಭಲೇ ಬಸವ" ಎನ್ನುವ ಚಿತ್ರವನ್ನೂ ಬಣ್ಣದಲ್ಲಿ ನಿರ್ಮಿಸಿದರು. ಮಹಾಸತಿ ಅನುಸೂಯ, ಹಾಸ್ಯರತ್ನ ರಾಮಕೃಷ್ಣ, ದಶಾವತಾರ ಮೊದಲಾದ ಚಿತ್ರಗಳು ದಾಖಲೆ ಚಿತ್ರಗಳಾಗಿವೆ.

**ನಿರ್ಮಾಪಕ:** ಬಿ.ಎಸ್. ರಂಗಾ


**ನಿರ್ದೇಶನ:** ಬಿ.ಎಸ್. ರಂಗಾ

**ಸಂಕಲನ:** ಪಿ.ಜಿ. ಮೋಹನ್

**ಛಾಯಾಗ್ರಹಣ:** ಬಿ.ಎಸ್.ರಂಗಾ

**ಸಂಗೀತ:** ಎಸ್. ರಾಜೇಶ್ವರರಾವ್


**ತಾರಾಗಣ:** ಕಲ್ಯಾಣ್‌ಕುಮಾರ್, ಬಿ.ಸರೋಜಾದೇವಿ, ರಾಜಾ, ವಿ.ನಾಗಯ್ಯ, ನರಸಿಂಹರಾಜು, ಸೀತಾರಾಮಶಾಸ್ತ್ರೀ, ಉದಯಕುಮಾರ್, ಎ.ವಿ.ಸುಬ್ಬರಾವ್, ಚಿ।ಬಾಬು, ರಮಾದೇವಿ, ಗಿರಿಜಾ, ಪುಷ್ಪವಲ್ಲಿ, ಶಕುಂತಲಾ, ಎಚ್.ಪಿ.ಸರೋಜ, ಚಿ।ಕಾಳೇಶ್ವರೀ, ರಾಜಶ್ರೀ, ಜಯಲಲಿತ-ರತನ್ (ನೃತ್ಯ)




# ಬೆಳ್ಳಿಮೋಡ

**(1967 / ಕಪ್ಪು-ಬಿಳುಪು / ಸಾಮಾಜಿಕ)**

**ಕಥಾಸಾರ**: ಎಸ್ಟೇಟ್ ಮಾಲೀಕರ ಒಬ್ಬಳೇ ಮಗಳನ್ನು ನೋಡಲು ಬರುವ ನಾಯಕ ಅವಳಿಗೆ ಮನಸೋತು, ವಿದೇಶಕ್ಕೆ ತೆರಳುತ್ತಾನೆ. ನಾಯಕಿಗೊಬ್ಬ ತಮ್ಮ ಹುಟ್ಟುತ್ತಾನೆ. ಆಸ್ತಿಯ ಮೇಲೆ ಕಣ್ಣಿದ್ದ ನಾಯಕನಿಗೆ ಆ ಮಗುವಿನ ಹುಟ್ಟು ಸರಿಬರುವುದಿಲ್ಲ. ನಾಯಕಿಯ ಮನಸ್ಸು ಒಡೆಯುತ್ತದೆ. ನಾಯಕನಿಗೆ ತಪ್ಪಿನ ಅರಿವಾದರೂ ನಾಯಕಿ ಒಪ್ಪಿಕೊಳ್ಳುವುದಿಲ್ಲ.



**ಎಸ್.ಆರ್.ಪುಟ್ಟಣ್ಣಕಣಗಾಲ್** ಕನ್ನಡ ಚಿತ್ರರಂಗದ ಹೆಸರಾಂತ ನಿರ್ದೇಶಕರು. ಮಹಿಳಾ ಪ್ರಧಾನ ಚಿತ್ರಗಳಿಗೆ ಆದ್ಯತೆ ನೀಡಿ, ನಾಯಕಿ ಪ್ರಧಾನ ಚಿತ್ರಗಳನ್ನು ಆಯ್ಕೆ ಮಾಡಿಕೊಂಡದ್ದು ಪುಟ್ಟಣ್ಣ ಅವರ ವೈಶಿಷ್ಟ್ಯ. ಅಲ್ಲದೆ ಕಾದಂಬರಿ ಆಧಾರಿತ ಚಲನಚಿತ್ರಗಳನ್ನು ಅವರು ನೀಡಿದರು. ಕನ್ನಡವೇ ಅಲ್ಲದೆ ಮಲಯಾಳಂ, ತಮಿಳು, ತೆಲುಗು ಹಾಗೂ ಹಿಂದಿ ಚಿತ್ರಗಳನ್ನು ಅವರು ನಿರ್ದೇಶಿಸಿದ್ದಾರೆ. "ಬೆಳ್ಳಿಮೋಡ" ಚಿತ್ರದ ಮೂಲಕ ಕನ್ನಡದಲ್ಲಿ ಹೊಸಬಗೆಯ ಚಿತ್ರಗಳ ಯುಗವನ್ನಾರಂಭಿಸಿದ ಪುಟ್ಟಣ್ಣ, ಶರಪಂಜರ, ಎಡಕಲ್ಲು ಗುಡ್ಡದ ಮೇಲೆ, ನಾಗರಹಾವು, ಸಾಕ್ಷಾತ್ಕಾರ, ಕಥಾಸಂಗಮ, ಮಾನಸ ಸರೋವರ ಮೊದಲಾದ ಸದಾ ಸ್ಮರಣೀಯ ಚಿತ್ರಗಳನ್ನು ನಿರ್ದೇಶಿದ್ದಾರೆ.

**ನಿರ್ಮಾಪಕ**: ಟಿ.ಎನ್. ಶ್ರೀನಿವಾಸನ್

**ನಿರ್ದೇಶನ**: ಎಸ್.ಆರ್.ಪುಟ್ಟಣ್ಣಕಣಗಾಲ್

**ಸಂಕಲನ**: ವಿ.ಪಿ.ಕೃಷ್ಣನ್

**ಛಾಯಾಗ್ರಹಣ**: ಆರ್.ಎನ್.ಕೆ.ಪ್ರಸಾದ್

**ಸಂಗೀತ**: ವಿಜಯಭಾಸ್ಕರ್


**ತಾರಾಗಣ**: ಕಲ್ಯಾಣ್‌ಕುಮಾರ್, ಕಲ್ಪನಾ, ಕೆ.ಎಸ್.ಅಶ್ವತ್ಥ್, ಪಂಢರಿಬಾಯಿ, ಬಾಲಕೃಷ್ಣ, ಗಣಪತಿಭಟ್, ಜಯಾ, ರಾಘವೇಂದ್ರರಾವ್, ದ್ವಾರಕೀಶ್,



## ಚೋಮನ ದುಡಿ

**(1975 / ಕಪ್ಪು– ಬಿಳುಪು / ಸಾಮಾಜಿಕ)**

**ಕಥಾಸಾರ**: ತುಂಡು ಭೂಮಿಗಾಗಿ ಜೀವನವಿಡೀ ಹಂಬಲಿಸುವ ಚೋಮ ಎಂಬ ಜೀತದಾಳಿನ ಕಥೆ. ತುಂಡು ಭೂಮಿ ನೀಡುವ ಆಸೆಯನ್ನು ತೋರುತ್ತ ಚೋಮ ಹಾಗೂ ಅವನ ಇಡೀ ಸಂಸಾರವನ್ನು ಶೋಷಿಸುತ್ತಾರೆ. ಮಗ, ಮಗಳು ಎಲ್ಲವನ್ನೂ ಕಳೆದುಕೊಂಡು ಏಕಾಂಗಿಯಾಗುವ ಚೋಮ ದುಡಿಯೊಂದನ್ನೆ ನೆಚ್ಚಿಕೊಂಡು ಬದುಕುತ್ತಾನೆ. ಕಡೆಗೆ ಅದನ್ನು ಬಡಿಯುತ್ತ ಬಡಿಯುತ್ತಲೇ ಸಾಯುತ್ತಾನೆ.



**ಬಿ.ವಿ.ಕಾರಂತ್** ಎಂದೇ ಪ್ರಖ್ಯಾತರಾಗಿರುವ ಬಾಬುಕೊಡಿ ವೆಂಕಟರಾಮಣ್ಣ ಕಾರಂತ (1929–2002) ರಂಗಭೂಮಿ ತಜ್ಞರು. ಚಲನಚಿತ್ರ ನಿರ್ದೇಶಕರು, ರಂಗ ನಿರ್ದೇಶಕರು, ನಟ, ಚಿತ್ರ ಸಾಹಿತಿಯಾಗಿ ಸಂಗೀತ ನಿರ್ದೇಶಕರಾಗಿ ಪ್ರಖ್ಯಾತರು. ಕನ್ನಡ, ಹಿಂದಿ ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಹೊಸ ಅಲೆ ಸಿನಿಮಾ ಚಳವಳಿಯಲ್ಲಿ ಮುಂಚೂಣಿಯ ಲ್ಲಿದ್ದ ಕಾರಂತರು ಗಿರೀಶ್ ಕಾರ್ನಾಡರ ಜೊತೆಗೂಡಿ "ವಂಶವೃಕ್ಷ" ಚಲನಚಿತ್ರವನ್ನು ನಿರ್ದೇಶಿಸಿದರು. ರಾಷ್ಟ್ರೀಯ ನಾಟಕ ಶಾಲೆಯಲ್ಲಿ (1962) ಕಲಿತವರು. ಹಾಗೂ ಅದರ ನಿರ್ದೇಶಕರಾಗಿದ್ದರು. 1976 ರಲ್ಲಿ ಅವರಿಗೆ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಸಂದಿದೆ. ಚಲನಚಿತ್ರ ನಿರ್ದೇಶನಕ್ಕಾಗಿ ಅವರು ಆರು ರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಕಲಾಪ್ರಕಾರದಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ನಿರ್ಮಾಪಕ**: ಅಶೋಕ್‌ಕುಮಾರ್, ಕಟಪಾಡಿ

**ನಿರ್ದೇಶನ**: ಬಿ.ವಿ.ಕಾರಂತ್

**ಸಂಕಲನ**: ಪಿ.ಭಕ್ತವತ್ಸಲಂ

**ಛಾಯಾಗ್ರಹಣ**: ಎಸ್.ರಾಮಚಂದ್ರ

**ಸಂಗೀತ**: ಬಿ.ವಿ.ಕಾರಂತ್ (ಸಹಾಯ – ವೈದ್ಯನಾಥನ್)

**ತಾರಾಗಣ**: ವಾಸುದೇವರಾವ್, ಜಯರಾಜನ್, ಸುಂದರರಾಜ್, ನಾಗರಾಜ, ನಾಗೇಂದ್ರ, ಶಂಕರಭಟ್, ಗೋವಿಂದಭಟ್, ಎಸ್.ಎಲ್.ಎನ್., ಹೊನ್ನಯ್ಯ, ವೆಂಕಟೇಶ್, ಡೆನಿಸ್, ಕರುಣಾಕರನ್, ರಾಮಕೃಷ್ಣ, ವೆಂಕ, ಪದ್ಮ ಕುಮುಟ, ಸರೋಜಿನಿ, ಲಕ್ಷ್ಮೀಬಾಯಿ, ಲೀನಾ ಗೋವಿಯಾಸ್, ಮಹಾಲಕ್ಷ್ಮೀ, ಬಾಡು (ನಾಯಿ), ರೋಹಿದಾಸ್ ಕದ್ರಿ



# ಮಯೂರ

(1975 / ವರ್ಣಚಿತ್ರ / ಐತಿಹಾಸಿಕ)

**ಕಥಾಸಾರ**: ಕದಂಬ ವಂಶದ ಖ್ಯಾತ ಅರಸ ಮಯೂರ ವರ್ಮನ ಸಾಹಸಮಯ ಬದುಕನ್ನು ವರ್ಣಿಸುವ ಚಿತ್ರಕತೆ. ಕದಂಬ ರಾಜನನ್ನು ಮೋಸದಿಂದ ಕೊಂದ ಪಲ್ಲವರು ರಾಜ್ಯವನ್ನಾಕ್ರಮಿಸುವರು. ಕದಂಬನ ಪುತ್ರ ಬ್ರಾಹ್ಮಣ ಯುವಕ ಮಯೂರವರ್ಮನಾಗಿ ಬೆಳೆದು ಕ್ಷತ್ರಿಯರಿಗೆ ಅಗತ್ಯವಾದ ವಿದ್ಯೆಗಳಲ್ಲಿ ಪರಿಣತನಾಗುತ್ತಾನೆ. ರಾಜನ ಎರಡನೆಯ ಮಗನಿಗೆ ನೆರವಾಗುತ್ತಾನೆ. ರಾಜಕುಮಾರಿಯ ಒಲವು ಗಳಿಸುತ್ತಾನೆ. ತನ್ನ ಜನ್ಮರಹಸ್ಯ ತಿಳಿದ ಮೇಲೆ ಮಯೂರ, ತನ್ನ ತಂದೆಯನ್ನು ಕೊಂದು ರಾಜ್ಯ ಅಪಹರಿಸಿದ ಪಲ್ಲವ ರಾಜನ ಮೇಲೆ ಸೇಡು ತೀರಿಸಿಕೊಳ್ಳುವ ಪ್ರತಿಜ್ಞೆ ಮಾಡಿ, ಗೆಲುವು ಸಾಧಿಸುತ್ತಾನೆ.



**ವಿಜಯ್ ರೆಡ್ಡಿ** (1936–2020) ಎಂದೇ ಹೆಸರಾದ ವಿಜಯ್ ಸುಮಾರು 50 ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. 1970 ರಲ್ಲಿ ರಂಗಮಹಲ್ ರಹಸ್ಯ ಎನ್ನುವ ಕನ್ನಡ ಚಲನಚಿತ್ರವನ್ನು ನಿರ್ದೇಶಿಸುವುದರೊಂದಿಗೆ ಚಿತ್ರ ನಿರ್ದೇಶಕರಾದ ವಿಜಯ್, ಡಾ.ರಾಜ್ ಕುಮಾರ್ ಅವರ ಅಭಿನಯದ ಚಿತ್ರಗಳನ್ನು ನಿರ್ದೇಶಿಸುವ ಮೂಲಕ ಅವರ ಸಾಮರ್ಥ್ಯವನ್ನು ತೋರಿದರು. ಗಂಧದಗುಡಿ (1970), ಮಯೂರ (1975), ನಾ ನಿನ್ನ ಮರೆಯಲಾರೆ (1976) ಮತ್ತು ಸನಾದಿ ಅಪ್ಪಣ್ಣ (1977)ಅವರ ನಿರ್ದೇಶನದ ವೈವಿಧ್ಯತೆಯನ್ನು ತೋರುತ್ತವೆ.

**ನಿರ್ಮಾಪಕ**: ಟಿ.ಪಿ.ವೇಣುಗೋಪಾಲ್

**ನಿರ್ದೇಶನ**: ವಿಜಯ್

**ಸಂಕಲನ**: ಬಾಬು, ಎನ್.ಸಿ.ರಾಜನ್

**ಛಾಯಾಗ್ರಹಣ**: ಅಣ್ಣಯ್ಯ, ಮಲ್ಲಿಕ್

**ಸಂಗೀತ**: ಜಿ.ಕೆ.ವೆಂಕಟೇಶ್, (ಸಹಾಯ – ವೈದ್ಯನಾಥನ್)

**ತಾರಾಗಣ**: ರಾಜಕುಮಾರ್, ಶ್ರೀನಾಥ್, ಕೆ.ಎಸ್. ಅಶ್ವತ್ಥ್, ರಾಜಾಶಂಕರ್, ಎಂ.ಪಿ.ಶಂಕರ್, ತೂಗುದೀಪ ಶ್ರೀನಿವಾಸ್, ಶನಿ ಮಹದೇವಪ್ಪ, ಬಿ.ಎಂ.ವೆಂಕಟೇಶ್, ಗುಗ್ಗು, ಸೂರ್ಯಕುಮಾರ್, ರಾಜಾನಂದ್, ಶಿವಯ್ಯ, ಮಂಜುಳ, ಶಶಿಕಲಾ, ಆದವಾನಿ ಲಕ್ಷ್ಮೀದೇವಿ, ಹುಣಸೂರು ಜಯಕುಮಾರಿ, ವಜ್ರಮುನಿ, ಶಕ್ತಿ ಪ್ರಸಾದ್, ಭಟ್ಟಿ ಮಹದೇವಪ್ಪ, ರಾಮಚಂದ್ರಶಾಸ್ತ್ರಿ, ಶ್ಯಾಮ್, ಪ್ರಭಾಕರ್, ವೆಂಕಟರಾಜು, ಹೆಚ್.ಟಿ.ಅರಸ್, ಶಿವಾಜಿ, ಎಲ್ಲಪ್ಪ, ಕೃಷ್ಣ, ಮಲ್ಲೇಶ್, ನಾರಾಯಣ್, ತಿಪಟೂರು ಸಿದ್ಧರಾಮಯ್ಯ



# ಒಂದಾನೊಂದು ಕಾಲದಲ್ಲಿ

**(1978 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ:** ಒಂದು ಕಾಲಘಟ್ಟದಲ್ಲಿ ನಡೆಯುವ ಕತೆ. ಸಹೋದರರೇ ಆದರೂ ಆಸ್ತಿ ಸಂಚಯದ ಹಿನ್ನೆಲೆಯಲ್ಲಿ ವಿರೋಧಿಗಳಾದ ಶ್ರೀಮಂತರು. ಅವರವರ ರಕ್ಷಣೆಗೆ ಬಾಡಿಗೆ ಬಂಟರನ್ನಿಟ್ಟು ಯುದ್ಧ ಸಾರುವುದು. ಧಣಿಯ ರಕ್ಷಣೆಗೆ ನಿಂತ ಊಳಿಗದವರೇ ಒಂದಾದಾಗ ಧಣಿಗಳೆಲ್ಲ ಒಂದಾಗುತ್ತಾರೆ. ಪರಸ್ಪರ ಸಂಶಯಗಳಲ್ಲೇ ಹೋರಾಟವೂ ಇರುತ್ತದೆ. ಕರ್ನಾಟಕದ ಇತಿಹಾಸದಲ್ಲಿಯ ಒಂದು ಕಾಲಘಟ್ಟದ ಅಸ್ಪಷ್ಟ ಪುಟ.



**ಗಿರೀಶ್ ಕಾರ್ನಾಡ್** ಜ್ಞಾನ ಪೀಠ ಪ್ರಶಸ್ತಿ(1998) ಪಡೆದಿರುವ ಮಹತ್ವದ ಸಾಹಿತಿ. ನಾಟಕಕಾರರಾಗಿ, ಸಿನಿಮಾ ನಟರಾಗಿ, ಸಿನಿಮಾ ನಿರ್ದೇಶಕರಾಗಿ ಪ್ರಖ್ಯಾತಿ ಪಡೆದವರು. ಕನ್ನಡದ ಹೊಸ ಅಲೆ ಸಿನಿಮಾ ಸಂಸ್ಕಾರ ಚಿತ್ರಕ್ಕೆ ಚಿತ್ರಕತೆ ಬರೆದು ಅಭಿನಯಿಸಿದರು. ಅವರ ನಾಟಕಗಳು ಭಾರತದ ಹಲವು ಭಾಷೆಗಳಲ್ಲಿ ಅನುವಾದಗೊಂಡಿವೆ. ಅವರ ನಾಟಕಗಳನ್ನು ಹೆಸರಾಂತ ನಿರ್ದೇಶಕರು ರಂಗಗಭೂಮಿಗೆ ಅಳವಡಿಸಿದ್ದಾರೆ. ಕೇಂದ್ರ ಸರ್ಕಾರವು ಅವರಿಗೆ ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.

**ನಿರ್ಮಾಪಕ:** ಜಿ.ಎನ್.ಲಕ್ಷ್ಮೀಪತಿ – ಕೆ.ಎನ್.ನಾರಾಯಣ್

**ನಿರ್ದೇಶನ:** ಗಿರೀಶ್ ಕಾರ್ನಾಡ್

**ಸಂಕಲನ:** ಪಿ.ಭಕ್ತವತ್ಸಲಂ

**ಛಾಯಾಗ್ರಹಣ:** ಅಪೂರ್ವ ಕಿಶೋರ್ ಬೀರ್

**ಸಂಗೀತ:** ಭಾಸ್ಕರ್ ಚಂದಾವರ್ಕರ್

**ತಾರಾಗಣ:** ಶಂಕರ್‌ನಾಗ್, ಸುಂದರಕೃಷ್ಣ ಅರಸ್, ಅಕ್ಷತಾರಾವ್, ಸುಂದರರಾಜನ್, ಅನಿಲ್ ಠಕ್ಕರ್, ನಾಗಾಭರಣ, ಲಕ್ಷ್ಮೀಪತಿ, ಲಕ್ಷ್ಮೀ ಕೃಷ್ಣಮೂರ್ತಿ, ಸುಶೀಲೇಂದ್ರ ಜೋಶಿ, ಪಿ.ರಾಮಮೂರ್ತಿ, ವಸಂತರಾವ್ ನಾಕೋಡ್, ರೇಖಾ ಸಬನೀಸ್, ಅಜೀತ್ ಸಾಲ್ಡಾನಾ, ಸೂರಿ, ರೂಬಿಕೃಷ್ಣ, ಸುರೇಶ್ ಕುಲಕರ್ಣಿ



# ಅಂತ

(1981 / ವರ್ಣಚಿತ್ರ / ಸಾಮಾಜಿಕ)

**ಕಥಾಸಾರ**: ಪೊಲೀಸ್ ಅಧಿಕಾರಿಯೊಬ್ಬನ ಸಾಹಸ, ಅವನ ಕುಟುಂಬದ ದುರಂತದ ಜೊತೆಜೊತೆಯಲ್ಲಿ ಹೆಣೆದ ಘಟನೆಗಳು, ದೊಡ್ಡದೊಂದು ಕಳ್ಳಸಾಗಣೆದಾರರ ತಂಡ. ಅವರನ್ನು ಹಿಡಿಯಲು ಆ ಗ್ಯಾಂಗಿನ ಖೈದಿಯೊಬ್ಬನ ಮೂಲಕ ಪ್ರಯತ್ನಿಸಿ ಖೈದಿಯೂ ಪೊಲೀಸ್ ಅಧಿಕಾರಿಯೂ ಒಂದೇ ರೀತಿ ಇದ್ದ ಕಾರಣ ಪೊಲೀಸ್ ಅಧಿಕಾರಿ ಖೈದಿಯಾಗಿ ಪ್ರವೇಶಿಸಿ ಆ ಗ್ಯಾಂಗನ್ನು ನಾಶ ಮಾಡುತ್ತಾನೆ. ಹಿಂಸೆ, ಕೌರ್ಯಗಳು ಇಲ್ಲಿ ಅನಾವರಣಗೊಂಡಿವೆ.



**ಎಸ್.ವಿ.ರಾಜೇಂದ್ರಸಿಂಗ್ (ಬಾಬು)** ಕನ್ನಡ ಚಲನಚಿತ್ರರಂಗದ ಪ್ರಖ್ಯಾತ ನಿರ್ದೇಶಕರು. ನಿರ್ಮಾಪಕರು. ಮೈಸೂರಿನಲ್ಲಿ ಜನನ್. ಕನ್ನಡ ಚಿತ್ರರಂಗದಲ್ಲಿ ಆರಂಭದ ದಿನಗಳಲ್ಲಿ ಮೈಸೂರಿನಲ್ಲೇ ಕನ್ನಡ ಚಲನಚಿತ್ರಗಳನ್ನು ತಯಾರಿಸುವ ಪಣ ತೊಟ್ಟು ಕನ್ನಡಕ್ಕೆ ಮಹತ್ವದ ಮೈಲುಗಲ್ಲುಗಳನ್ನು ನಿರ್ಮಿಸಿದ ಶಂಕರ್ ಸಿಂಗ್ ಅವರ ಪುತ್ರ. "ನಾಗರಹೊಳೆ" ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾದ ರಾಜೇಂದ್ರ ಸಿಂಗ್ ಬಾಬು, ರಾಜ್ ಕುಮಾರ್ ಅಭಿನಯದ "ಭಕ್ತ ಚೇತ" ಚಲನಚಿತ್ರದಲ್ಲಿ ಬಾಲನಟನಾಗಿ ಅಭಿನಯಿಸಿದ್ದರು"ಬಂಧನ", ಮುತ್ತಿನ ಹಾರ, ಗಂಡಭೇರುಂಡ", ಕುರಿಗಳು ಸಾರ್ ಕುರಿಗಳು ಅವರು ನಿರ್ದೇಶಿಸಿದ ಅಪಾರ ಯಶಸ್ಸು ಪಡೆದ ಚಿತ್ರಗಳು.

**ನಿರ್ಮಾಪಕ**: ಹೆಚ್.ಎನ್.ಮಾರುತಿ, ವೇಣುಗೋಪಾಲ್

**ನಿರ್ದೇಶನ**: ಎಸ್.ವಿ.ರಾಜೇಂದ್ರಸಿಂಗ್ (ಬಾಬು)

**ಸಂಕಲನ**: ಕೆ.ಬಾಲು

**ಛಾಯಾಗ್ರಹಣ**: ಪಿ.ಎಸ್.ಪ್ರಕಾಶ್

**ಸಂಗೀತ**: ಜಿ.ಕೆ.ವೆಂಕಟೇಶ್

**ತಾರಾಗಣ**: ಅಂಬರೀಷ್, ಲಕ್ಷ್ಮೀ, ಪಂಢರಿಬಾಯಿ, ಶಕ್ತಿಪ್ರಸಾದ್, ಸುಂದರಕೃಷ್ಣ ಅರಸ್, ವಜ್ರಮುನಿ, ಪ್ರಭಾಕರ್, ಜಯಮಾಲಾ, ಲತಾ, ವತ್ಸಲ, ಉಮೇಶ್, ಡಿಕ್ಕಿ ಮಾಧವರಾವ್, ಮುಸುರಿ ಕೃಷ್ಣಮೂರ್ತಿ



## ಸಂಕ್ರಾಂತಿ

**(1989 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ:** ಮುಗ್ಧ, ಆದರೆ ಹಠಮಾರಿ ಗಂಡನನ್ನು ವಂಚಿಸುವ ರಾಜಕೀಯ ಮಹತ್ವಾಕಾಂಕ್ಷೆಯ ವ್ಯಕ್ತಿ. ಅವನಿಂದಾಗಿ ಗಂಡನನ್ನು ತೊರೆದು ತಾಯಿ ಮನೆ ಸೇರುವ ಹೆಣ್ಣು, ಗಂಡನನ್ನು ಸರಿದಾರಿಗೆ ತಂದು ಕತ್ತಲಾದ ಬಾಳಿನಲ್ಲಿ ತಾನೇ ಬೆಳಕು ತರುವ ಸಾಹಸ ಮಾಡಿ ಆ ನಿಟ್ಟಿನಲ್ಲಿ ಗೆಲ್ಲುತ್ತಾಳೆ. ಆ ಗೆಲುವಿಗಾಗಿ ಅವಳು ಪಡುವ ಪ್ರಯತ್ನ – ಬವಣೆಗಳೇ ಕಥಾಹಂದರ. ನಾಗತಿಹಳ್ಳಿ ಚಂದ್ರಶೇಖರ್ 'ಬನ್ನೇರಿ' ಕಥೆ ಆಧಾರಿಸಿದ ಚಿತ್ರ.



**ಎನ್.ಆರ್.ನಂಜುಂಡೇಗೌಡ** ಕನ್ನಡ ಚಲನಚಿತ್ರರಂಗದ ಹೆಸರಾಂತ ನಿರ್ದೇಶಕರು. "ಸಂಕ್ರಾಂತಿ" ಚಿತ್ರದ ಮೂಲಕ ಹೆಸರಾದ ನಂಜುಂಡೇಗೌಡರು, ಗ್ರಾಮೀಣ ಪ್ರದೇಶದ ನೈಜ ಚಿತ್ರಣವನ್ನು ನೀಡುವ ನಿರ್ದೇಶಕರೆಂದೇ ಹೆಸರಾದವರು. ಅಮಾನುಷ, ನವತಾರೆ, ಚುಕ್ಕಿ ಚಂದ್ರಮ, ಅಪೂರ್ವ ಜೋಡಿ, ವೀರಭದ್ರ, ಹೆಬ್ಬೆಟ್ಟು ರಾಮಕ್ಕ ಹಾಗೂ ಕಾಸಿನ ಸರ ಅವರ ನಿರ್ದೇಶನದ ಚಿತ್ರಗಳು.

**ನಿರ್ಮಾಪಕ:** ಕೆ.ಸಚ್ಚಿದಾನಂದ, ಹೆಚ್.ಬಿ.ಧರ್ಮರಾಜ್

**ನಿರ್ದೇಶನ:** ಎನ್.ಆರ್.ನಂಜುಂಡೇಗೌಡ

**ಸಂಕಲನ:** ಕೆ.ಬಾಲು


**ಛಾಯಾಗ್ರಹಣ:** ಕಬೀರ್‌ಲಾಲ್



## ತಾಯಿಸಾಹೇಬ

**(1998 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ**: ಸ್ವಾತಂತ್ರ್ಯ ಬಂದ ತರುಣದಲ್ಲಿನ ಸಾಮಾಜಿಕ ಬದಲಾವಣೆಗಳು ತಾಯಿಸಾಹೇಬಳ ವೈಯಕ್ತಿಕ ಪ್ರಪಂಚದಲ್ಲಿ ಮಾಡುವ ಪರಿಣಾಮಗಳ ಚಿತ್ರಣ. ಸಾಮಾಜಿಕವಾಗಿ ಸ್ವಾತಂತ್ರ್ಯ ಹೋರಾಟಗಾರರಾದರೂ ವೈಯಕ್ತಿಕವಾಗಿ ಜಮೀನ್ದಾರಿ ನಿಲುವುಳ್ಳವರು. ಮೊದಲ ಹೆಂಡತಿ ವಿರಕ್ತೆ. ತಾಯಿಸಾಹೇಬ ಎರಡನೇ ಹೆಂಡತಿ. ಚಂದ್ರಿ 'ಇಟ್ಟುಕೊಂಡ' ಹೆಂಡತಿ. ತಾಯಿಸಾಹೇಬಳ ಒಂಟಿತನ ನೀಗಲು ಸೋದರ ಸಂಬಂಧಿಯ ಮಗನನ್ನು ದತ್ತು ತೆಗೆದುಕೊಳ್ಳುತ್ತಾರೆ. ತಾಯಿಸಾಹೇಬ ಪ್ರೀತಿಯಿಂದ ಸಾಕುತ್ತಾಳೆ. ಸೋದರ ಸಂಬಂಧಿ ಮನೆಯ ವ್ಯವಹಾರದಲ್ಲಿ ಮೂಗು ತೂರಿಸತೊಡಗಿದಾಗ ತಾಯಿಸಾಹೇಬ ಮತ್ತು ಚಂದ್ರಿ ಒಂದಾಗುತ್ತಾರೆ. ಬೆಳೆದ ದತ್ತು ಮಗ ಚಂದ್ರಿಯ ಮಗಳನ್ನೇ ಮದುವೆಯಾಗುವ ನಿರ್ಧಾರ ಮಾಡಿದಾಗ ತಾಯಿಸಾಹೇಬ ದತ್ತಕವನ್ನು ರದ್ದು ಮಾಡುತ್ತಾಳೆ. ಸೋದರ ಸಂಬಂಧಿಯಿಂದ ತನಗೆ ತೊಂದರೆಯಾಗಬಹುದೆಂಬ ಅರಿವಿನ ನೆಲೆಯಲ್ಲಿ ಪೋಲೀಸರಿಗಾಗಿ ಕಾಯುತ್ತಾ ಕೂರುತ್ತಾಳೆ. ಉದಾತ್ತ ಗುಣದ ತ್ಯಾಗಜೀವಿ ಹೆಣ್ಣಿನ ಸುತ್ತ ಹೆಣೆದ ಕಥೆ.



**ಗಿರೀಶ್ ಕಾಸರವಳ್ಳಿ** ಅವರು ಭಾರತೀಯ ಚಲನಚಿತ್ರ ನಿರ್ದೇಶಕರು, ಅವರ ಕೃತಿಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿವೆ, ಕಾಸರವಳ್ಳಿ ಅವರ ನಾಲ್ಕು ಅತ್ಯುತ್ತಮ ಚಲನಚಿತ್ರಗಳು ಸೇರಿದಂತೆ ಹದಿನಾಲ್ಕು ಚಿತ್ರಗಳಗೆ ರಾಷ್ಟ್ರೀಯ ಪ್ರಶಸ್ತಿಗಳು ದೊರಕಿವೆ, ಘಟಶ್ರಾದ್ಧ (1977), ತಬರನ ಕಥೆ (1986), ತಾಯಿ ಸಾಹೇಬ (1997) ಮತ್ತು ದ್ವೀಪ (2002) ಇವರ ಪ್ರಮುಖ. 2011 ರಲ್ಲಿ ಭಾರತ ಸರ್ಕಾರ ನಾಲ್ಕನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

**ನಿರ್ಮಾಪಕ**: ಜಯಮಾಲಾ ರಾಮಚಂದ್ರ

**ನಿರ್ದೇಶನ**: ಗಿರೀಶ್ ಕಾಸರವಳ್ಳಿ

**ಸಂಕಲನ**: ಎಂ.ಎನ್.ಸ್ವಾಮಿ

**ಛಾಯಾಗ್ರಹಣ**: ಎಂ.ರಾಮಚಂದ್ರ ಹಾಲ್ಕೆರೆ

**ಸಂಗೀತ**: ಐಸಾಕ್ ಥಾಮಸ್ ಕೊಟ್ಟುಕಪಲ್ಲಿ

**ತಾರಾಗಣ**: ತಾರಾಗಣ: ಜಯಮಾಲಾ, ಸುರೇಶ್ ಹೆಬ್ಳೀಕರ್, ಶಿವರಾಂ, ಹರೀಶ್ ರಾಜು, ಸುಧಾ ಬೆಳವಾಡಿ, ರೇಣುಕಮ್ಮ ಮುರಗೋಡ್



# ದೇವೀರಿ

**(2000 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ**: ಅಕ್ಕನನ್ನು ಬಿಟ್ಟರೆ ಬೇರಾರೂ ಇಲ್ಲದ ಕೊಳೆಗೇರಿಯ ಬಾಲಕ ಕ್ಯಾತ. ಅಕ್ಕನದು ವೇಶ್ಯಾವೃತ್ತಿಯ ಬದುಕು. ಮೈಮಾರಿ ಬದುಕುವ ಅಕ್ಕನಿಗೆ ತಮ್ಮನನ್ನು ವಿದ್ಯಾವಂತನನ್ನಾಗಿಸುವ ಹಂಬಲ. ನೆರೆಯ ಪದ್ದಿ. ಅವಳಿಗೆ ಸಿನಿಮಾ ತಾರೆಯಾಗುವ ಹಂಬಲ. ಆ ಪರಿಸರದಲ್ಲೇ ಕುಡುಕ ಜೂಜುಕೋರನ ಕುಟುಂಬ. ಬೆಳಗ್ಗೆ ಕೂಲಿ ಮಾಡಿ ರಾತ್ರಿ ಸೂಳೆಗಾರಿಕೆ ಮಾಡುವ ಅಕ್ಕನನ್ನು ತಮ್ಮ ಆಕ್ಷೇಪಿಸುತ್ತಾನೆ. ಕೊನೆಗೆ ಕೊಳಗೇರಿ ಬಿಟ್ಟು ಅನಾಥಾಶ್ರಮ ಸೇರುತ್ತಾನೆ ತಮ್ಮ. ಕನ್ನಡ ಚಳವಳಿ ಹೆಸರಿನಲ್ಲಿ ಹಣ ಸಂಗ್ರಹಿಸಿ ಕುಡಿಯುವುದು, ರಾಜಕೀಯ, ಚುನಾವಣೆ, ಶಾಲೆಗಳಲ್ಲಿನ ಡೊನೇಷನ್ ಹಾವಳಿ, ವಿದ್ಯಾರ್ಥಿಗಳ ವಿಚಿತ್ರ ರೀತಿ – ನೀತಿ, ಅಧ್ಯಾಪಕರ ಅಸಡ್ಡೆ ಎಲ್ಲದರ ದರ್ಶನವೂ ಆಗುತ್ತದೆ.ಪಿ.ಲಂಕೇಶ್‌ರ 'ಅಕ್ಕ' ಕಾದಂಬರಿ ಆಧರಿಸಿದ ಚಿತ್ರ.



**ಕವಿತಾ ಲಂಕೇಶ್** ಕನ್ನಡ ಚಿತ್ರರಂಗದ ಪ್ರತಿಭಾವಂತ ನಿರ್ದೇಶಕಿ. ಹೆಸರಾಂತ ಕತೆಗಾರರೂ, ಪತ್ರಕರ್ತರೂ, ಚಲನಚಿತ್ರ ನಿರ್ದೇಶಕರೂ ಆದ ಪಿ.ಲಂಕೇಶ್ ಅವರ ಪುತ್ರಿ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಎಂ.ಎ. ಹಾಗೂ ಡಿಪ್ಲೋಮಾ ಇನ್ ಅಡ್ವರ್ಟೈಸಿಂಗ್ ಪದವಿ ಪಡೆದಿರುವ ಕವಿತಾ, ಸಾಕ್ಷ್ಯ ಚಿತ್ರಗಳನ್ನು ಆರಂಭದಲ್ಲಿ ತಯಾರಿಸಿದ್ದಾರೆ. ಲಂಕೇಶರ ಸಣ್ಣ ಕತೆ ಆಧರಿಸಿ ಅವರು ನಿರ್ದೇಶಿಸಿದ ಮೊದಲ ಚಿತ್ರ "ದೇವೀರಿ" ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿದೆ.

**ನಿರ್ಮಾಪಕ**: ಭಾರತಿಗೌಡ, ಆರತಿ ಗಡಸಲ್ಳಿ, ಹನುಮಂತ ರೆಡ್ಡಿ, ಕವಿತಾ ಲಂಕೇಶ್

**ನಿರ್ದೇಶನ**: ಕವಿತಾ ಲಂಕೇಶ್

**ಸಂಕಲನ**: ಎಂ.ಎನ್.ಸ್ವಾಮಿ

**ಛಾಯಾಗ್ರಹಣ**: ಎಸ್.ರಾಮಚಂದ್ರ

**ಸಂಗೀತ**: ಇಸಾಕ್ ಥಾಮಸ್ ಕೊಟಕಪಲ್ಲಿ

**ತಾರಾಗಣ**: ತಾರಾಗಣ: ಮಾ।ಮಂಜು, ನಂದಿತಾ ದಾಸ್, ಭಾವನಾ, ಕಾಶಿ, ಬಿ.ಜಯಶ್ರೀ, ಆಸಿಫ್ ಫರೂಕಿ, ರಾಜೇಂದ್ರಕುಮಾರ್ ಆರ್ಯ, ತಾರಾ



## ಮುನ್ನುಡಿ

**(2000 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ:** ಇಸ್ಲಾಂನಲ್ಲಿ ವ್ಯಭಿಚಾರ ಕ್ರೂರ ಶಿಕ್ಷಾರ್ಹ ಮಹಾಪರಾಧ. 'ನಿಖಾಹ್' ಮತ್ತು 'ತಲಾಖ್'ಗಳನ್ನು ತನಗನುಕೂಲವಾಗುವಂತೆ ಅರ್ಥೈಸುವ ಗಂಡು, ಹೆಣ್ಣನ್ನು ಭೋಗದ ವಸ್ತುವನ್ನಾಗಿ ಬಳಸಿಕೊಳ್ಳುವುದರ ವಿರುದ್ಧ ಬಂಡಾಯ ಏಳುವ ಹೆಣ್ಣೊಬ್ಬಳ ಕಥೆ.

**ಪಿ.ಶೇಷಾದ್ರಿ:** ಪತ್ರಕರ್ತರಾಗಿದ್ದ ಪಿ,ಶೇಷಾದ್ರಿ, 12 ಚಲನಚಿತ್ರಗಳನ್ನು ನಿರ್ದೇಶಿಸುವ ಮೂಲಕ ಹಲವಾರು ಸಾಧನೆಗಳನ್ನು ಮಾಡಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಶೇಷಾದ್ರಿ, ಆರಂಭದಲ್ಲಿ ಟೆಲಿವಿಷನ್ ಧಾರಾವಾಹಿಗಳಲ್ಲಿ ನಿರ್ದೇಶಕರಾಗಿ ಅನುಭವ ಪಡೆದಿದ್ದಾರೆ. 2000 ದಲ್ಲಿ ಮುನ್ನುಡಿ ಚಿತ್ರ ವನ್ನು ನಿರ್ದೇಶಿಸಿದ ಪಿ. ಶೇಷಾದ್ರಿ, ಬೆಳ್ಳಿತೆರೆಗೆ ಬಂದ ಮುಸ್ಲಿಂ ಸಂವೇದನೆಯ ಪ್ರಥಮ ಚಿತ್ರವೆನಿಸಿ ಕನ್ನಡ ಚಿತ್ರರಂಗದಲ್ಲಿ ಒಂದು ಮೈಲಿಗಲ್ಲನ್ನು ನಿರ್ಮಿಸಿತು. ಮೊದಲನೆಯ ಚಿತ್ರಕ್ಕೇ ಎರಡು ರಾಷ್ಟ್ರ ಪ್ರಶಸ್ತಿ ಹಾಗೂ ಆರು ರಾಜ್ಯ ಪ್ರಶಸ್ತಿಗಳಿಸಿದ ಚಿತ್ರವೆನಿಸಿತು ಮುನ್ನುಡಿ. ಶೇಷಾದ್ರಿ ಅವರು ನಿರ್ದೇಶಿಸಿದ ಎರಡನೇ –ಚಿತ್ರ ಅತಿಥಿ ಕೂಡ ರಾಷ್ಟ್ರ ಪ್ರಶಸ್ತಿ ಪಡೆಯಿತು. ಮೂರನೇ ಚಿತ್ರ "ಬೇರು" 2004ರಲ್ಲಿ ರಾಷ್ಟ್ರ ಪ್ರಶಸ್ತಿಗೆ ಭಾಜನವಾಯಿತು. ಸತತವಾ ಗಿ ಮೂರು ಬಾರಿ ರಾಷ್ಟ್ರ ಪ್ರಶಸ್ತಿ ಪಡೆಯುವ ಮೂಲಕ ಶೇಷಾದ್ರಿ ಹ್ಯಾಟ್ರಿಕ್ ನಿರ್ದೇಶಕ ಎಂಬ ಕೀರ್ತಿ ಪಡೆದರು. ಎಂಟು ಬಾರಿ ರಾಷ್ಟ್ರ ಪ್ರಶಸ್ತಿ ಪಡೆದ ಭಾರತದ ಏಕೈಕ ನಿರ್ದೇಶಕ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ



**ನಿರ್ಮಾಪಕ:** ಪಿ.ಶೇಷಾದ್ರಿ

**ನಿರ್ದೇಶನ:** ಪಿ.ಶೇಷಾದ್ರಿ

**ಸಂಕಲನ:** ಬಿ.ಎಸ್.ಕೆಂಪರಾಜ್

**ಛಾಯಾಗ್ರಹಣ:** ಬಿ.ಎಸ್.ಶಾಸ್ತ್ರಿ

**ಸಂಗೀತ:** ವಿ.ಮನೋಹರ್

**ತಾರಾಗಣ:** ತಾರಾ, ದತ್ತಾತ್ರೇಯ ಹೆಚ್ ಜಿ, ಶಶಿಕುಮಾರ್, ಚಚಯ ಸಿಂಗ್, ಶಿವಮೊಗ್ಗ ವೆಂಕಟೇಶ್, ವೆಂಕಟರಾವ್ ಮ್.ಪಿ, ಸುಧೀರಜ್, ಸುರೇಶ ಮ್.ನ್, ನಂದಿತಾ, ವಿದ್ಯಾಧ



## ಏಕಾಂಗಿ

**(2002 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ**: ರಾಜ ಮಧ್ಯವಯಸ್ಕ. ನಗರ ಜೀವನದಿಂದ ಬೇಸತ್ತು ಹೋಗಿದ್ದಾನೆ. "ಒಂಟಿಯಾಗಿರು, ಆನಂದದಿಂದಿರು" ಎನ್ನುವುದೇ ಅವನ ಜೀವನ ಮಂತ್ರ. ಹೇರಳವಾದ ಸಂಪತ್ತು ತುಂಬಿ ತುಳುಕುತ್ತಿದ್ದರೂ ಏಕಾಂಗಿಯಾಗಿರುವುದರ ಖುಷಿ ಇನ್ನೆಲ್ಲೂ ಸಿಗುವುದಿಲ್ಲ ಎನ್ನುವುದೇ ಅವನ ಧೋರಣೆ. ಇವನ ಜೀವನದಲ್ಲಿ ಕ್ಯಾಬರೆ ಡ್ಯಾನ್ಸರ್ ಶಿಲ್ಪ ಪ್ರವೇಶಿಸಿದ ನಂತರ, ಅವನು ಸೌಂದರ್ಯಾರಾಧಕನಾಗುತ್ತಾನೆ.



**ವಿ ರವಿಚಂದ್ರನ್** ಕನ್ನಡ ಚಿತ್ರರಂಗದ ನಟ, ನಿರ್ದೇಶಕ, ನಿರ್ಮಾಪಕ, ಸಂಗೀತ ನಿರ್ದೇಶಕ ಮತ್ತು ಚಿತ್ರಸಾಹಿತಿ. ಅವರ ತಂದೆ ಎನ್.ವೀರಾಸ್ವಾಮಿ ಕನ್ನಡದ ಅತಿದೊಡ್ಡ ನಿರ್ಮಾಪಕರು. ವಿ.ರವಿಚಂದ್ರನ್ ಅವರು ಅವರ ಈಶ್ವರೀ ಪ್ರೊಡಕ್ಷನ್ಸ್ ಸಂಸ್ಥೆಯನ್ನು ನಿರ್ವಹಿಸುತ್ತಿದ್ದಾರೆ. ಕ್ರೇಜಿಸ್ಟಾರ್ ಎಂದೇ ಜನಪ್ರಿಯರಾಗಿರುವ ರವಿಚಂದ್ರನ್, ಪ್ರೇಮಲೋಕ" ಎನ್ನುವ ಚಲನಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿ ಕನ್ನಡದಲ್ಲಿ ದೊಡ್ಡ ಸಾಧನೆ ಮಾಡಿದರು. ಪ್ರೇಮಲೋಕ ಕನ್ನಡದಲ್ಲಿ ಟ್ರೆಂಡ್ ಸೃಷ್ಟಿಸಿತು. ಕನ್ನಡ ಚಲನಚಿತ್ರ ಇತಿಹಾಸದಲ್ಲಿ ಇದೊಂದು ಮೈಲುಗಲ್ಲು. ಈ ಚಿತ್ರದಲ್ಲಿ ಅಂದಿನ ಬಾಲಿವುಡ್ ನಟಿ ಜ್ಯೂಹಿ ಚಾವ್ಲಾ ನಾಯಕಿಯಾಗಿದ್ದರು. ಚಿತ್ರದಲ್ಲಿ ಬಹುತಾರಾ ಬಳಗವೇ ಇತ್ತು. ಹಂಸಲೇಖ–ರವಿಚಂದ್ರನ್ ಜೋಡಿ ಪ್ರಖ್ಯಾತರಾಗಿದ್ದೇ ಈ ಚಿತ್ರದಿಂದ.

**ನಿರ್ಮಾಪಕ**: ವಿ ರವಿಚಂದ್ರನ್

**ನಿರ್ದೇಶನ**: ವಿ ರವಿಚಂದ್ರನ್

**ಸಂಕಲನ**: ಶ್ಯಾಮ್ ಯಾದವ್

**ಛಾಯಾಗ್ರಹಣ**: ಜಿ. ಎಸ್. ವಿ. ಸೀತಾರಾಮ್

**ಸಂಗೀತ**: ವಿ ರವಿಚಂದ್ರನ್


**ತಾರಾಗಣ**: ತಾರಾಗಣ: ರವಿಚಂದ್ರನ್, ರಮ್ಯಾ ಕೃಷ್ಣ, ಪ್ರಕಾಶ್ ರೈ



## ಚಿಗುರಿದ ಕನಸು

(2003 / ವರ್ಣಚಿತ್ರ / ಸಾಮಾಜಿಕ)

**ಕಥಾಸಾರ:** ಎಲೆಕ್ಟ್ರಿಕಲ್ ಇಂಜಿನಿಯರ್ ಆಗಿರುವ ಯುವಕನ ಕತೆ. ನಗರ ಜೀವನಕ್ಕಿಂತ ಹಳ್ಳಿಯ ವಾತಾವರಣವೇ ಅವನಿಗೆ ಬಹಳ ಇಷ್ಟ. ಬರಡು ಭೂಮಿಯೊಂದನ್ನು ಕೊಂಡುಕೊಂಡು ಅಲ್ಲಿ ಹಸಿರು ನಳನಳಿಸುವಂತೆ ಮಾಡುತ್ತಾನೆ. ತನ್ನದೇ ಕೃಷಿ ಸಂಬಂಧಿಸಿದ ಆವಿಷ್ಕಾರಗಳ ಮೂಲಕ ಕೃಷಿಯಲ್ಲಿ ಹೊಸಹೊಸ ಸಾಹಸಗಳನ್ನು ಮಾಡುತ್ತಾನೆ. ಶಿವರಾಮ ಕಾರಂತರ ಕಾದಂಬರಿ ಆಧರಿಸಿದ ಚಿತ್ರ.



**ಟಿ.ಎಸ್.ನಾಗಾಭರಣ:** ಕನ್ನಡದಲ್ಲಿ ಹೆಸರಾಂತ ನಿರ್ದೇಶಕರು. ರಂಗಭೂಮಿಯಲ್ಲೂ ಜನಪ್ರಿಯ. 26 ವರ್ಷಗಳ ಸಿನಿಮಾ ವೃತ್ತಿಯಲ್ಲಿ ಮೂವತ್ತು ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಎಂಟು ರಾಷ್ಟ್ರೀಯ ಪ್ರಶಸ್ತಿ ಹಾಗೂ 14 ರಾಜ್ಯ ಸರ್ಕಾರದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಹೊಸ ಅಲೆ ಚಲನಚಿತ್ರಗಳಲ್ಲದೆ, ಕಮರ್ಷಿಯಲ್ ಸಿನಿಮಾಗಳಲ್ಲೂ ಅತ್ಯಂತ ಯಶಸ್ವಿ ಚಿತ್ರಗಳನ್ನು ನಿರ್ದೇಶಿಸಿದ್ದಾರೆ, ಜನುಮದ ಜೋಡಿ, ನಾಗಮಂಡಲ, ಚಿನ್ನಾರಿ ಮುತ್ತ ಅತ್ಯಂತ ಯಶಸ್ಸು ಪಡೆದ ಚಿತ್ರಗಳಾಗಿವೆ. ನಾಗಮಂಡಲ 1998 ರ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿತು. ಮೂರು ಮಕ್ಕಳ ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಅವರ ನಿರ್ದೇಶನದ "ನಾವಿದ್ದೇವೆ ಎಚ್ಚರಿಕೆ" ಚಿತ್ರಕ್ಕೆ ರಾಜ್ಯ ಸರ್ಕಾರದ ಪ್ರಶಸ್ತಿ ಬಂದಿದೆ. ಅಲ್ಲದೆ ಅಂತಾರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದಲ್ಲಿ ಭಾಗವಹಿಸಿದೆ. ನಾಗಾಭರಣ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

**ನಿರ್ಮಾಪಕ:** ಪಾರ್ವತಮ್ಮ ರಾಜಕುಮಾರ್

**ನಿರ್ದೇಶನ:** ಟಿ.ಎಸ್.ನಾಗಾಭರಣ

**ಸಂಕಲನ:** ಎಸ್. ಮನೋಹರ್

**ಛಾಯಾಗ್ರಹಣ:** ಬಿ. ಸಿ. ಗೌರಿಶಂಕರ್

**ಸಂಗೀತ:** ವಿ. ಮನೋಹರ್


**ತಾರಾಗಣ:** ತಾರಾಗಣ: ರಾಜಕುಮಾರ್, ಅನಂತ್ ನಾಗ್, ಅವಿನಾಶ್, ವಿದ್ಯಾ ವೆಂಕಟೇಶ್, ರೇಖಾ ಉನ್ನಿಕೃಷ್ಣನ್



# ಅಮೃತಧಾರೆ

(2005 / ವರ್ಣಚಿತ್ರ / ಸಾಮಾಜಿಕ)

**ಕಥಾಸಾರ**: ಪುರು ಮತ್ತು ಅಮೃತ ದಂಪತಿಯಾದರೂ, ಪ್ರೇಮಿಗಳ ಹಾಗೆ ಇದ್ದಾರೆ. ಅಷ್ಟೊಂದು ಪ್ರೀತಿ ಅವರಿಬ್ಬರ ಮಧ್ಯೆ ಇದ್ದರೂ ಆಗಾಗ ಜಗಳವಾಡುವುದು ವಾಡಿಕೆ. ಕುಟುಂಬ ಬೆಳೆಸಲು ಮಗು ಬೇಕು ಎನ್ನುವುದು ಅಮೃತಳ ವಾದವಾದರೆ, ಮನೆಕಟ್ಟಬೇಕು ಎನ್ನುವುದು ಪುರುವಿನ ವಾದ. ಹೀಗೆ ನಿತ್ಯ ಸಂಸಾರದ ಜಂಜಾಟದಲ್ಲಿ ಅವರಿಬ್ಬರೂ ಸಂಸಾರ ತೂಗಿಸಲು ಪರದಾಡುತ್ತಿದ್ದಾರೆ. ??ಧ್ಯಮವರ್ಗದ ಸಂಸಾರದ ಜಂಜಾಟವನ್ನು ಚಿತ್ರ ಕಟ್ಟಿಕೊಡುತ್ತದೆ.



### ನಾಗತಿಹಳ್ಳಿ ಚಂದ್ರಶೇಖರ್

ನಾಗತೀಹಳ್ಳಿ ಚಂದ್ರಶೇಖರ್:ಕರ್ನಾ ಟಕದ ಮಂಡ್ಯ ಜಿಲ್ಲೆಯ ನಾಗತೀಹಳ್ಳಿಯಲ್ಲಿ ಜನಿಸಿದ ಚಂದ್ರಶೇಖರ್, ಅವರಿಗೆ ಬಾಲ್ಯದಿಂದಲೂ ಕನ್ನಡಸಾಹಿತ್ಯದ ಬಗ್ಗೆ ಒಲವು. ಕನ್ನಡ ಚಿತ್ರರಂಗದಲ್ಲಿ ನಿರ್ದೇಶಕ, ನಿರ್ಮಾಪಕ, ಸಾಹಿತಿಯಾಗಿ ಗುರುತಿಸಿಕೊಂಡಿದ್ದಾರೆ. 1986 ರಲ್ಲಿ "ಕಾಡಿನ ಬೆಂಕಿ" ಎನ್ನುವ ಚಿತ್ರವನ್ನು ನಿರ್ದೇಶಿಸುವುದರೊಂದಿಗೆ ಚಿತ್ರ ಪಯಣ ಆರಂಭಿಸಿದ ನಾಗತೀಹಳ್ಳಿ, ಆ ಚಿತ್ರಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ ಪಡೆದರು. ಅಮೆರಿಕ ಅಮೆರಿಕ ಅವರ ನಿರ್ದೇಶನದ ಜನಪ್ರಿಯ ಚಿತ್ರ. 15 ಕಥಾ ಚಿತ್ರಗಳನ್ನು, 10 ಟೆಲಿ ಸೀರಿಸ್ ಗಳನ್ನು ನಿರ್ದೇಶಿಸಿದ್ದಾರೆ. ಕಾದಂಬರಿಕಾರರೂ ಆಗಿರುವ ನಾಗತೀಹಳ್ಳಿ ಚಂದ್ರಶೇಖರ್, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದಾರೆ.

**ನಿರ್ಮಾಪಕ**: ನಾಗತಿಹಳ್ಳಿ ಚಂದ್ರಶೇಖರ್

**ನಿರ್ದೇಶನ**: ನಾಗತಿಹಳ್ಳಿ ಚಂದ್ರಶೇಖರ್

**ಸಂಕಲನ**: ಬಿ.ಎಸ್. ಕೆಂಪರಾಜು

**ಛಾಯಾಗ್ರಹಣ**: ಕೃಷ್ಣಕುಮಾರ್

**ಸಂಗೀತ**: ಮನೋ ಮೂರ್ತಿ

**ತಾರಾಗಣ**: ತಾರಾಗಣ: ಧ್ಯಾನ್, ರಮ್ಯಾ, ಅಮಿತಾಬ್ ಬಚ್ಚನ್



## ಶಾಂತಿ

**(2005 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ**: ಕನ್ನಡ ಚಲನಚಿತ್ರರಂಗದಲ್ಲಿ ಹೊಸ ಪ್ರಯೋಗವಾಗಿ ಗಮನ ಸೆಳೆದ ಚಿತ್ರ. ಇಡೀ ಚಿತ್ರ ಏಕಪಾತ್ರದ ಮೂಲಕವೇ ಸಾಗುತ್ತದೆ. ಶಾಂತಿ ಕಲಾವಿದೆಕ. ವಿಶ್ವ ಶಾಂತಿ ಸಮ್ಮೇಳನದ ಲೋಗೋ ರಚಿಸಲು ಅಂತಾರಾಷ್ಟೀಯ ಶಾಂತಿ ಸಮಿತಿ ಇವರನ್ನು ಆಯ್ಕೆ ಮಾಡುತ್ತದೆ. ಚಿತ್ರ ರಚನೆಗೆ ಸ್ಫೂರ್ತಿ ಪಡೆಯಲು ಶಾಂತಿ ಗಿರಿಶ್ರೇಣಿಗಳಿರುವ ಪ್ರದೇಶದಲ್ಲಿ ಸಂಚರಿಸುತ್ತಾಳೆ. ಅಲ್ಲಿ ಅವಳು ಭಯೋತ್ಪಾದಕರ ಬಲೆಗೆ ಬೀಳುತ್ತಾಳೆ. ಶಾಂತಿಯನ್ನು ಅಪಹರಿಸುವ ಭಯೋತ್ಪಾದಕರು, ಅವರನ್ನು ಅವಳ ಸಹಾಯಕರನ್ನಾಗಿ ವಿಶ್ವ ಸಮ್ಮೇಳನಕ್ಕೆ ಕರೆದುಕೊಂಡು ಹೋಗುವಂತೆ ಒತ್ತಾಯಿಸುತ್ತಾರೆ. ಸಮ್ಮೇಳನ ಆವರಣವನ್ನು ಸ್ಫೋಟಿಸುವುದು ಅವರ ಸಂಚು. ಇಲ್ಲಿ ಶಾಂತಿ ಮತ್ತು ಸಮರ ಆರಂಭವಾಗುತ್ತದೆ. ಶಾಂತಿ ಕದಡಿದೆ. ಈ ಬಲೆಯಿಂದ ಶಾಂತಿ ಹೇಗೆ ಹೊರಬರುತ್ತಾಳೆ..



**ಬರಗೂರು ರಾಮಚಂದ್ರಪ್ಪ**: ಕನ್ನಡ ಸಾಹಿತಿಯಾಗಿ, ಚಿಂತಕರಾಗಿ ಜನಪ್ರಿಯ. ಕಾದಂಬರಿಕಾರರಾಗಿ, ಕತೆ, ಕವನ, ನಾಟಕಗಳನ್ನು ರಚಿಸಿದ್ದಾರೆ, ಬಂಡಾಯ ಸಾಹಿತ್ಯ ಸಂಘಟನೆಯ ಅಧ್ಯಕ್ಷರಾಗಿ ಕನ್ನಡ ಸಾಹಿತ್ಯ ಲೋಕವನ್ನು ಕಟ್ಟಿದ್ದಾರೆ. 23 ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. "ತಾಯಿ" ಚಿತ್ರಕ್ಕೆ ರಾಷ್ಟ್ರಪ್ರಶಸಿಯೂ ದೊರಕಿದೆ. ಅತ್ಯುತ್ತಮ ಗೀತ ರಚನೆಗಾಗಿ ರಾಷ್ಟೀಯ ಅತ್ಯುತ್ತಮ ಗೀತರಚನಕಾರ ಪ್ರಶಸ್ತಿಯನ್ನೂ ಪಡೆದಿದ್ದಾರೆ ಪಂಪ ಪ್ರಶಸ್ತಿಯನ್ನು ಪಡೆದಿದ್ದಾರೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು. ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

**ನಿರ್ಮಾಪಕ**: ರಮೇಶ್ ಯಾದವ್ ಮೂವೀಸ್


**ನಿರ್ದೇಶನ**: ಬರಗೂರು ರಾಮಚಂದ್ರಪ್ಪ

**ಸಂಕಲನ**: ಸುರೇಶ ಅರಸ್

**ಛಾಯಾಗ್ರಹಣ**: ನಾಗರಾಜ್ ಆದವಾನಿ

**ಸಂಗೀತ**: ಹಂಸಲೇಖ


**ತಾರಾಗಣ**: ಭಾವನ



# ಮುಂಗಾರು ಮಳೆ

(2006 / ವರ್ಣಚಿತ್ರ / ಸಾಮಾಜಿಕ)

**ಕಥಾಸಾರ**: ಪ್ರೀತಂ ನಂದಿನಿಯನ್ನು ಪ್ರೀತಿಸುತ್ತಾನೆ. ಬಹಳ ದಿನಗಳ ನಂತರ ಅವಳ ಮದುವೆ ಮೊದಲೇ ನಿರ್ಧಾರವಾಗಿದೆ ಎನ್ನುವ ಸಂಗತಿ ತಿಳಿದು ಹೃದಯ ಚೂರುಚೂರಾಗುತ್ತದೆ. ಆದರೂ ಅವಳ ಹೃದಯ ಗೆಲ್ಲುವ ಸವಾಲುಗಳನ್ನು ಅವನು ಸ್ವೀಕರಿಸಿ ಅದರಲ್ಲಿ ಗೆಲ್ಲುತ್ತಾನೆ. ಅತ್ಯಂತ ಜನಪ್ರಿಯ ಚಿತ್ರ. ಗಣೇಶ್ ಅವರಿಗೆ ಹೊಸ ಇಮೇಜ್ ನೀಡಿದ ಚಿತ್ರ. ಪೂಜಾಗಾಂಧಿ ಅವರು ಚಿತ್ರರಂಗ ಪ್ರವೇಶಿಸಿದ ಮೊದಲ ಚಿತ್ರ.



**ಯೋಗರಾಜ್ ಭಟ್**: ಕರ್ನಾಟಕದ ಉಡುಪಿಜಿಲ್ಲೆಯ ಮಂದರ್ತಿಯಲ್ಲಿ ಜನನ. 2006 ರಲ್ಲಿ ಮುಂಗಾರು ಮಳೆಯ ನಂತರ, ನಿರ್ದೇಶಕರಾಗಿ, ಗೀತರಚನಕಾರರಾಗಿ, ನಿರ್ಮಾಪಕರಾಗಿ ಜನಪ್ರಿಯರಾದರು. ಕನ್ನಡ ಚಿತ್ರರಂಗಕ್ಕೆ ಹೊಸಬರನ್ನು ಪರಿಚಯಿಸುವಲ್ಲಿ ಸದಾ ಮುಂದು. ಗಾಳಿಪಟ, ಡ್ರಾಮಾ,ಪಂಚರಂಗಿ ಸೇರಿದಂತೆ ಹಲವಾರು ಸಿನಿಮಾಗಳು ಜನಪ್ರಿಯವಾಗಿವೆ.

**ನಿರ್ಮಾಪಕ**: ಇ. ಕೃಷ್ಣಪ್ಪ

**ನಿರ್ದೇಶನ**: ಯೋಗರಾಜ್ ಭಟ್

**ಸಂಕಲನ**: ಈ ಕೆ ಎಂಟರ್ಟೈನ್ಸ್

**ಛಾಯಾಗ್ರಹಣ**: ಎಸ್. ಕೃಷ್ಣ

**ಸಂಗೀತ**: ಮನೋ ಮೂರ್ತಿ

**ತಾರಾಗಣ**: ತಾರಾಗಣ: ಗಣೇಶ್, ಪೂಜಾ ಗಾಂಧಿ, ಅನಂತ್ ನಾಗ್



## ದುನಿಯಾ

**(2007 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ:** ಶಿವಲಿಂಗು ಬಂಡ ಒಡೆಯುವ ಕೆಲಸ ಮಾಡುವ ವ್ಯಕ್ತಿ. ಚಿಕಿತ್ಸೆಗೆ ಹಣವಿಲ್ಲದೆ ಅವನ ತಾಯಿ ಸಾಯುತ್ತಾಳೆ. ಅಪಾರ ಹಣ ಮಾಡಬೇಕು ಎಂಬ ಛಲ ಶಿವಲಿಂಗುವಿನದಾಗುತ್ತದೆ. ಅದಕ್ಕಾಗಿ ಅವನು ತುಳಿದ ಹಾದಿಯೇ ತಪ್ಪಾಗಿತ್ತು. ಅದು ಅವನನು ಕ್ರಿಮಿನಲ್ ಆಗುವಂತೆ ಮಾಡಿತು.



**ಸೂರಿ:** ಕನ್ನಡ ಚಿತ್ರರಂಗದ ಹೆಸರಾಂತ ನಿರ್ದೇಶಕರು. ಅವರ ಮೊದಲ ಚಿತ್ರ "ದುನಿಯಾ" ಅತ್ಯಂತ ಜನಪ್ರಯವಾದ ನಂತರ ಅವರನ್ನು ಎಲ್ಲರೂ ದುನಿಯಾ ಸೂರಿ ಎಂದೇ ಕರೆಯಲಾರಂಭಿಸಿದರು. ದುನಿಯಾ ಚಿತ್ರ 2006-2007 ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಪ್ರಶಸ್ತಿ ಪಡೆಯಿತು. ಇಂತಿ ನಿನ್ನ ಪ್ರೀತಿಯ,, ಜಂಗ್ಲಿ ಅವರ ಮತ್ತಷ್ಟು ಯಶಸ್ವಿ ಚಿತ್ರಗಳು.

**ನಿರ್ಮಾಪಕ:** ಟಿ. ಪಿ. ಸಿದ್ದರಾಜು

**ನಿರ್ದೇಶನ:** ಸೂರಿ

**ಸಂಕಲನ:** ದೀಪು ಎಸ್. ಕುಮಾರ್

**ಛಾಯಾಗ್ರಹಣ:** ಸತ್ಯ ಹೆಗ್ಡೆ

**ಸಂಗೀತ:** ವಿ. ಮನೋಹರ್, ಸಾಧು ಕೋಕಿಲ

**ತಾರಾಗಣ:** ತಾರಾಗಣ: ವಿಜಯ ಕುಮಾರ್, ರಶ್ಮಿ, ರಂಗಾಯಣ ರಘು, ಕಿಶೋರ್, ಯೋಗೇಶ್ ಶಿವಲಿಂಗು



## ಲೂಸಿಯಾ

**(2013 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ**: ಇದೊಂದು ಸೈಕಲಾಜಿಕಲ್ ಥ್ರಿಲ್ಲರ್. ನಿದ್ರಾಹೀನತೆಯಿಂದ ಬಳಲುತ್ತಿರುವ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವ ನಿಕ್ಕಿ ಎಂಬ ಉತ್ಸಾಹಿಯ ಸುತ್ತ ಕತೆ ಸುತ್ತುತ್ತದೆ. ವಿಶೇಷವಾದ ಮಾತ್ರೆಗಳನ್ನು ಸೇವಿಸಿ, ಬೇರೆಯದೇ ರೀತಿಯ ಕನಸುಗಳಲ್ಲಿ ಸಿಕ್ಕಿಹಾಕಿಕೊಳ್ಳುವ ನಿಕ್ಕಿ, ಒಂದೇ ವ್ಯಕ್ತಿಯ ಎರಡು ಕತೆಗಳ ಪಾತ್ರಧಾರಿಯಾಗುತ್ತಾನೆ. ಕ್ರೌಡ್ ಫಂಡಿಂಗ್ ಮೂಲಕ ನಿರ್ಮಿಸಿದ ಮೊದಲ ಕನ್ನಡ ಚಿತ್ರ.



**ಪವನ್ ಕುಮಾರ್:** ಮನಸಾರೆ ಮತ್ತು ಪಂಚರಂಗಿ ಚಿತ್ರಗಳಿಗೆ ಚಿತ್ರಕತೆ ಬರೆಯುವ ಮೂಲಕ ಚಿತ್ರರಂಗ ಪ್ರವೇಶಿಸಿದ ಪವನ್ ಕುಮಾರ್, ಲೈಫು ಇಷ್ಟೇನೆ ಮೂಲಕ ನಿರ್ದೇಶಕರಾದರು. ಯೂ ಟರ್ನ್, ಪವನ್ ಅವರ ಮತ್ತೊಂದು ಯಶಸ್ವಿ ಚಿತ್ರ.

**ನಿರ್ಮಾಪಕ**: ಆಡಿಯನ್ಸ್ ಫಿಲಂಸ್

**ನಿರ್ದೇಶನ**: ಪವನ್ ಕುಮಾರ್

**ಸಂಕಲನ**: ಸನತ್ ಸುರೇಶ, ಪವನ್ ಕುಮಾರ್

**ಛಾಯಾಗ್ರಹಣ**: ಸಿದ್ಧಾರ್ಥ ನೂನಿ

**ಸಂಗೀತ**: ಪೂರ್ಣಚಂದ್ರ ತೇಜಸ್ವಿ, ಮೋನಿಶ್ ಕುಮಾರ್ ಮ್. ಕೆ, ಸಂತೋಷ್ ನಾರಾಯಣನ್

**ತಾರಾಗಣ**: ತಾರಾಗಣ: ಸತೀಶ್ ನೀನಾಸಂ, ಶ್ರುತಿ ಹರಿಹರನ್, ಅಚ್ಯುತ್ ಕುಮಾರ್, ರಿಷಬ್ ಶೆಟ್ಟಿ



## ಉಳಿದವರು ಕಂಡಂತೆ

**(2014 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ**: ಘಟನೆಯೊಂದಕ್ಕೆ ಸಂಬಂಧಿಸಿದಂತೆ ಸತ್ಯ ಮುಚ್ಚಿಟ್ಟ ಸತ್ಯವನ್ನು ಹುಡುಕಲು ಪತ್ರಕರ್ತನೊಬ್ಬನ ಪ್ರಯತ್ನದಲ್ಲಿ ಹಲವಾರು ಜನರ ಸಂಪರ್ಕ ಬರುತ್ತದೆ. ಒಬ್ಬೊಬ್ಬರದೂ ಒಂದೊಂದು ವಿವರಣೆ ಒಬ್ಬರ ಜೀವನ ಘಟನೆಗಳು ಒಂದರೊಳಗೊಂದು ಹೇಗೆ ಮಿಳಿತವಾಗಿದೆ ಎನ್ನುವುದನ್ನು ಹೇಳುತ್ತದೆ.



**ರಕ್ಷಿತ್ ಶೆಟ್ಟಿ** 2014 ರಲ್ಲಿ "ಸಿಂಪಲ್ಲಾಗಿ ಒಂದ್ ಲವ್ ಸ್ಟೋರಿ" ಯಲ್ಲಿ ಅಭಿನಯಿಸುವ ಮೂಲಕ ಚಿತ್ರರಂಗ ಪ್ರವೇಶಿಸಿದ ರಕ್ಷಿತ್ ಶೆಟ್ಟಿ, "ಉಳಿದವರು ಕಂಡಂತೆ ಚಿತ್ರದ ಮೂಲಕ ನಿರ್ದೇಶಕರಾದರು. ಅಲ್ಲದೆ ಆ ಚಿತ್ರದಲ್ಲಿ ನಾಯಕನಾದರು. ರಿಕಿ (2016), ಗೋಧಿ ಬಣ್ಣ ಸಾಧಾರಣ ಮೈಕಟ್ಟು (2016), ಕಿರಿಕ್ ಪಾರ್ಟಿ (2016) ಈ ಮೂರೂ ಚಿತ್ರಗಳು ಅಪಾರ ಯಶಸ್ಸಾಗಿ ರಕ್ಷಿತ್ ಅವರನ್ನು ಚಿತ್ರರಂಗದ ಪ್ರಯೋಗ ಶೀಲ ನಟರಾಗಿ, ನಿರ್ದೇಶಕರಾಗಿ ಗುರುತಿಸಿತು. ಅವನೇ ಶ್ರೀಮನ್ ನಾರಾಯಣ, ಚಾರ್ಲಿ 777 ಅವರ ನಿರ್ದೇಶನದ ಮಹತ್ವದ ಚಿತ್ರಗಳು.

**ನಿರ್ಮಾಪಕ**: ಹೇಮಂತ್, ಸುನಿ, ಅಭಿ

**ನಿರ್ದೇಶನ**: ರಕ್ಷಿತ್ ಶೆಟ್ಟಿ

**ಸಂಕಲನ**: ಸಚಿನ್ ಬಿ. ರವಿ

**ಛಾಯಾಗ್ರಹಣ**: ಕಾರಂ ಚಾವ್ಲಾ

**ಸಂಗೀತ**: ಬಿ. ಅಜನೀಶ್ ಲೋಕಃನಾಥ್

**ತಾರಾಗಣ**: ರಕ್ಷಿತ್ ಶೆಟ್ಟಿ, ಕಿಶೋರ್, ತಾರಾ, ಶೀತಲ್ ಶೆಟ್ಟಿ, ರಿಷಬ್ ಶೆಟ್ಟಿ, ಅಚ್ಯುತ್ ಕುಮಾರ್, ಯಜ್ಞ ಶೆಟ್ಟಿ



## ತಿಥಿ

**(2016 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ**: ಹಳ್ಳಿಯೊಂದರಲ್ಲಿ 101 ವರ್ಷ ವಯಸ್ಸಿನ ವೃದ್ಧ ಸೆಂಚುರಿ ಗೌಡ ನಿಧನನಾಗುತ್ತಾನೆ. ಅವನ ಮಗ, ಮೊಮ್ಮಗ ಹೀಗೆ ಮೂರು ತಲೆಮಾರಿನ ಯುವಕರು ಈ ಸಾವಿಗೆ ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವುದೇ ಕತೆ. ಸೆಂಚುರಿ ಗೌಡನ ತಿಥಿಗೆ ಮುನ್ನವೇ ನಡೆವ ಘಟನಾವಳಿಗಳೇ ಚಿತ್ರದ ತಿರುಳು.



**ರಾಮ್ ರೆಡ್ಡಿ** ಕಿರುಚಿತ್ರಗಳನ್ನು ನಿರ್ಮಿಸುವ ಮೂಲಕ ಸಿನಿಮಾ ಒಲವು ಬೆಳೆಸಿಕೊಂಡ ರಾಮ್ ರೆಡ್ಡಿ, ಚಲನಚಿತ್ರ ನಿರ್ದೇಶನದಲ್ಲಿ ತರಬೇತಿ ಪಡೆಯಲು ಪ್ರಾಗ್ ಚಲನಚಿತ್ರ ಸಂಸ್ಥೆಗೆ ತೆರಳಿದರು. ಅದರ ಫಲವೇ ತಿಥಿ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಮೊದಲ ಚಿತ್ರದಲ್ಲೇ ಪಡೆದರು. ಕರ್ನಾಟಕದ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಮೊಮ್ಮಗ ರಾಮ್.

**ನಿರ್ಮಾಪಕ**: ಪ್ರತಾಪ್ ರೆಡ್ಡಿ, ಸುಂಮಿನ್ ಪಾರ್ಕ್

**ನಿರ್ದೇಶನ**: ರಾಮ್ ರೆಡ್ಡಿ

**ಸಂಕಲನ**: ಜಾನ್ ಝಿಮ್ಮೆರ್ಮ್ಯಾನ್, ರಾಮ್ ರೆಡ್ಡಿ

**ಛಾಯಾಗ್ರಹಣ**: ಡೊರೊನ್ ಟೆಂಪೆರ್ಟ್



## ತಮಟೆ

**(2023 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ:** ತಮಟೆ ಬಾರಿಸುವ ಬಡ ಮುನಿಯನ ಬದುಕಿನ ಕತೆ. ತಮಟೆ ಬಾರಿಸುವುದನ್ನೇ ನಂಬಿಕೊಂಡು ಬದುಕುತ್ತಿದ್ದ ಮುನಿಯನ ಬದುಕಿಗೆ ಆಧುನಿಕತೆ ಹೇಗೆಲ್ಲಾ ಸವಾಲಾಯಿತು ಎನ್ನುವುದನ್ನು ಈ ಚಿತ್ರ ನಿರೂಪಿಸುತ್ತದೆ. ಮದನ್ ಪಟೇಲ್ ಮುನಿಯನಾಗಿ ಅಭಿನಯಿಸಿದ್ದಾರೆ. ಅವರ ಪುತ್ರ ನಟ ಮಯೂರ್ ಪಟೇಲ್ ನಿರ್ದೇಶಿಸಿದ್ದಾರೆ. ಮದನ್ ಪಟೇಲರು ಬರೆದ ಕಾದಂಬರಿ ಆಧರಿಸಿದ ಚಿತ್ರ.



**ಮಯೂರ್ ಪಟೇಲ್**

**ನಿರ್ಮಾಪಕ:** ವಂದನಾ ಎಂ

**ನಿರ್ದೇಶನ:** ಮಯೂರ್ ಪಟೇಲ್

**ಸಂಕಲನ:** ಗುರುರಾಜ್

**ಛಾಯಾಗ್ರಹಣ:** ಮದನ್ ಪಟೇಲ್, ವಿರೇಶ್

**ಸಂಗೀತ:** ಮದನ್ ಪಟೇಲ್




## ಅಕ್ಷಿ

**(2023 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ**: ರಾಮು ಮತ್ತು ಅವನ ಕುಟುಂಬವು ಒಂದು ಸಣ್ಣ ಹಳ್ಳಿಯಲ್ಲಿ ವಾಸಿಸುತ್ತಿದೆ. ಅವನ ತಂಗಿ ಲಕ್ಷ್ಮಿ 6 ವರ್ಷದ ಹುಡುಗಿ ಹುಟ್ಟಿನಿಂದ ಕುರುಡಳಾಗಿರುವುದರಿಂದ ಅವನು ಅವಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ. ಒಂದು ಒಳ್ಳೆಯ ದಿನ ಅವರಿಗೆ ಲಕ್ಷ್ಮಿಯ ಕಣ್ಣಿನ ದೃಷ್ಟಿಯನ್ನು ಆಪರೇಷನ್ ಮೂಲಕ ಮರಳಿ ತರಬಹುದು ಅದಕ್ಕಾಗಿ ಅವರಿಗೆ ದಾನಿಯ ಅಗತ್ಯವಿದೆ ಎಂದು ತಿಳಿಯುತ್ತದೆ. ದೀರ್ಘಾವಧಿಯ ಕಾಯುವಿಕೆಯ ನಂತರ ಆಕೆಗೆ ಕಸಿ ಮಾಡಲು ಒಂದು ಕಣ್ಣು ಸಿಕ್ಕಿತು, ಆದರೆ ಅಪಘಾತದಿಂದಾಗಿ ಲಕ್ಷ್ಮಿಯು ಕಣ್ಣು ಕಾಣುವ ಮೊದಲೇ ತೀರಿಕೊಂಡಳು. ಆಕೆಯ ಮರಣದ ನಂತರ, ಒಂದು ಒಳ್ಳೆಯ ದಿನ ಜಗತ್ತಿನಲ್ಲಿ ಅನೇಕ ಅಂಧರು ಇದ್ದಾರೆ, ಅವರಿಗೆ ಕಣ್ಣಿನ ಕಸಿ ಅಗತ್ಯವಿದೆ ಎಂದು ತಿಳಿಯುತ್ತದೆ. ಆದ್ದರಿಂದ, ಅವರು ನೇತ್ರದಾನದ ಮಹತ್ವದ ಬಗ್ಗೆ ಜನರಿಗೆ ತಿಳಿಸಲು ಪ್ರಾರಂಭಿಸುತ್ತಾರೆ. ರಾಮು ತನ್ನ ಇತಿಮಿತಿಯಲ್ಲಿ ಅದನ್ನು ಹೇಗೆ ಸಾಧ್ಯವಾಗಿಸುವಲ್ಲಿ ಯಶಸ್ವಿಯಾಗುತ್ತಾನೆ ಎಂಬುದು ಉಳಿದ ಕಥೆಯನ್ನು ರೂಪಿಸುತ್ತದೆ.



**ಮನೋಜ್ ಕುಮಾರ್**

ಶ್ರೀ ಮನೋಜ್ ಕುಮಾರ್ ಅವರು ಕನ್ನಡ ಚಲನಚಿತ್ರ ನಿರ್ದೇಶಕ ಓಂ ಪ್ರಕಾಶ್ ರಾವ್ ಅವರ ಮಾರ್ಗದರ್ಶನದಲ್ಲಿ ಸಹಾಯಕ ಮತ್ತು ಸಹಾಯಕ ನಿರ್ದೇಶಕರಾಗಿ ಸುಮಾರು 6 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ, ಈ ಹಲವು ವರ್ಷಗಳ ಅನುಭವವನ್ನು ಹಿಡಿದ ನಂತರ ಅವರು ಅಂತಿಮವಾಗಿ ತಮ್ಮದೇ ಆದ ಆಲೋಚನೆಗಳ ಮೇಲೆ ನಿಲ್ಲಲು ಮುಂದಾದರು. ಅವರು ಕಿರುಚಿತ್ರಗಳು, ವೆಬ್‌ಸರಣಿಗಳು ಮತ್ತು ಕಾರ್ಪೊರೇಟ್ ಜಾಹೀರಾತುಗಳಂತಹ ಕೆಲವು ಡಿಜಿಟಲ್ ವಿಷಯಗಳಿಗಾಗಿ ಕೆಲಸ ಮಾಡಿದ್ದಾರೆ.

**ನಿರ್ಮಾಪಕ**: ಶ್ರೀನಿವಾಸ್ ಕಲಾದೇಗುಲ

**ನಿರ್ದೇಶನ**: ಮನೋಜ್ ಕುಮಾರ್

**ಸಂಕಲನ**: ಮನೋಜ್ ಕುಮಾರ್

**ಛಾಯಾಗ್ರಹಣ**: ಮುಕುಲ್ ಗೌಡ

**ಸಂಗೀತ**: ಕಲಾದೇಗುಲ ಶ್ರೀನಿವಾಸ್

**ತಾರಾಗಣ**: ಗೋವಿಂದೆ ಗೌಡ, ದೇವೇಂದ್ರ ಮೆದರಮೆಟ್ಟ, ಮಾಸ್ಟರ್ ಮಿಥುನ್, ಬೇಬಿ ಸೌಮ್ಯ ಪ್ರಭು, ಕಲಾದೇಗುಲ ಶ್ರೀನಿವಾಸ್, ಇಲಾ ವಿಟ್ಲ

# 2023ನೇ ಸಾಲಿನ ಕನ್ನಡ ಚಲನಚಿತ್ರಗಳು



# ದ್ವಂದ್ವ

**(2023 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ:** ಉಡುಪಿ ನಗರದಲ್ಲಿರುವ ಸುಖೇಶನನ್ನು ಸ್ನೇಹಿತರು ಹಾಗೂ ಕುಟುಂಬದ ಸದಸ್ಯರು ಚುಕ್ಕಿ ಎಂದೇ ಕರೆಯುತ್ತಾರೆ. ಯಕ್ಷಗಾನದಲ್ಲಿ ಮಹಿಳೆಯ ಪಾತ್ರ ವಹಿಸುವುದರಲ್ಲಿ ಚುಕ್ಕಿ ಪ್ರಸಿದ್ಧನಾಗಿದ್ದಾನೆ. ರಂಗವನ್ನು ಬಿಟ್ಟು ಆತ ಸಮಾಜದಲ್ಲಿ ಎಂದಿನಂತೆ ಬಾಳಲು ಆಗುತ್ತಿಲ್ಲ. ಚುಕ್ಕಿ ಎಲ್ಲರಂತಿಲ್ಲ ಎಂದು ಸ್ನೇಹಿತರೂ, ಕುಟುಂಬದವರೂ ಭಾವಿಸಿದ್ದರಿಂದ ಕುಗ್ಗಿ ಹೋಗಿದ್ದಾನೆ. ಜೀವನದ ಎಲ್ಲ ಹಂತಗಳಲ್ಲೂ ಚುಕ್ಕಿ ಎದುರಿಸಿದ ಸವಾಲುಗಳು ಇಲ್ಲವೆ.



**ಕ್ಲಿಂಗ್ ಜಾನ್ಸನ್**

**ನಿರ್ಮಾಪಕ:** ಬೆಂಕಿ ಬಾಟ್ಲ್ಯಾಟ್ಸ್ ಪ್ರೊಡಕ್ಷನ್

**ನಿರ್ದೇಶನ:** ಕ್ಲಿಂಗ್ ಜಾನ್ಸನ್

**ಸಂಕಲನ:** ಪ್ರಜ್ವಲ್ ಸುವರ್ಣ

**ಛಾಯಾಗ್ರಹಣ:** ಸೈಥೇಶ್ ಸಿ ಗೋವಿಂದ್

**ಸಂಗೀತ:** ಗಿರಿಧರ್ ದಿವಾನ್

**ತಾರಾಗಣ:** ಗಿರಿಧರ್ ದಿವಾನ್



## ಇನಾಂದಾರ್

**(2023 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ**: ಒಂದೆಡೆ ಉತ್ತರ ಕರ್ನಾಟಕದ ಶಿವಾಜಿ ಮಹಾರಾಜರನ್ನು ಆರಾಧಿಸುವ ಪ್ರತಿಷ್ಠಿತ ಇನಾಮ್ದಾರ್ ಮನೆತನ. ಮತ್ತೊಂದೆಡೆ ಪಶ್ಚಿಮಘಟ್ಟದ ದಟ್ಟ ಕಾನನದಲ್ಲಿ ಶಿವನನ್ನು ಆರಾಧಿಸುವ ಆದಿವಾಸಿ ಜನಾಂಗ. ಇನಾಮ್ದಾರ್ ಮನೆತನಕ್ಕೂ ಪಶ್ಚಿಮಘಟ್ಟದ ಕಾನನದಲ್ಲಿರುವ ಶಿವನಿಗೂ ಒಂದು ದೈವಿಕ ನಂಟು. ಈ ದೈವಿಕ ನಂಟು ಶತಶತಮಾನಗಳಿಂದ ಇನಾಮ್ದಾರ್ ಮನೆತನ ಮತ್ತು ಆದಿವಾಸಿ ಜನಾಂಗವನ್ನು ಬೆಸೆದಿರುತ್ತದೆ. ಹೀಗಿರುವಾಗಲೇ ನಡೆಯುವ ಘಟನೆಯೊಂದು ಆದಿವಾಸಿಗಳು ಇನಾಮ್ದಾರ್ ಮನೆತನವನ್ನು ದ್ವೇಷಿಸುವಂತೆ ಮಾಡುತ್ತದೆ. ಜನಾಂಗೀಯ ಸಂಘರ್ಷಕ್ಕೆ ಕಾರಣವಾಗುತ್ತದೆ.



**ಸಂದೇಶ್ ಶೆಟ್ಟಿ ಅಜ್ರಿ**

**ನಿರ್ಮಾಪಕ**: ನಿರಂಜನ್ ಶೆಟ್ಟಿ

**ನಿರ್ದೇಶನ**: ಸಂದೇಶ್ ಶೆಟ್ಟಿ ಅಜ್ರಿ

**ಸಂಕಲನ**: ನಿರಂಜನ್ ಶೆಟ್ಟಿ

**ಛಾಯಾಗ್ರಹಣ**: ಮುರುಳೀಧರ್

**ಸಂಗೀತ**: ರಾಕೇಶ್ ಆಚಾರ್ಯ

**ತಾರಾಗಣ**: ರಂಜಾನ್ ಛತ್ರಪತಿ,ಸಂದೇಶ್ ಶೆಟ್ಟಿ ಅಜ್ರಿ, ಡಾ.ಥ್ರಿಲ್ಲರ್ ಮಂಜು, ಪ್ರಮೋದ್ ಶೆಟ್ಟಿ,ಶರತ್ ಲೋಹಿತಾಶ್ವ, ಎಮ್ ಕೆ ಮಠ



## ಹನುಮಂತಪ್ಪನ ಎರಡು ಎಕರೆ ಜಾಗ

**(2023 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ**: ವಿಯಾನ್, ಶೇಖರ್, ಆದರ್ಶ್ ಸಂಜೀವಈ ಹಳ್ಳಿಯಲ್ಲಿ ಎರಡು ಎಕರೆ ಜಮೀನು ಹನುಮಂತಪ್ಪ ದೇವರ ಹೆಸರಿನಲ್ಲಿದೆ. ಈ ಹನುಮಂತಪ್ಪ ದೇವರು ಯಾರು ಎಂದು ಯಾರಿಗೂ ಗೊತ್ತಿಲ್ಲ. ದೇವರ ಹೆಸರಿನಲ್ಲಿ ರಿಜಿಸ್ಟರ್ ಆಗಿದ್ದ ಎರಡು ಎಕರೆ ಜಾಗವನ್ನು ಹನುಮಂತಪ್ಪ ಎಂಬ ವ್ಯಕ್ತಿಯದು ಎಂದು ಬಿಂಬಿಸಿ, 50 ವರ್ಷಗಳ ಹಿಂದೆಯೇ ರಿಯಾಜ್ ಎನ್ನುವವರಿಗೆ ಮಾರಲಾಗಿದೆ. ಪ್ರಸ್ತುತ ಈ ಜಾಗ ರಿಯಾಜ್‌ನ ಮೊಮ್ಮಗ ಗೌಸ್‌ಪೀರ್‌ನ ಹೆಸರಿನಲ್ಲಿದೆ. ಧಾರ್ಮಿಕ ದತ್ತಿನಿಧಿ ಇಲಾಖೆ ಅಧಿಕಾರಿ ಕೃಷ್ಣಮೂರ್ತಿ ಈ ಹಳ್ಳಿಗೆ ಬಂದು ದೇವರ ಹೆಸರಿನಲ್ಲಿರುವ ಜಾಗ ಪರಭಾರೆ ಆಗಿದ್ದು ಹೇಗೆ ಎನ್ನುವುದನ್ನು ತನಿಖೆ ಮಾಡುತ್ತಾನೆ. ಆಗ ದೇವಸ್ಥಾನದ ಹೆಸರಿನಲ್ಲಿರುವ ಸ್ವತ್ತು ಪತ್ರಗಳನ್ನು ನಕಲು ಮಾಡಿ ಪರಭಾರೆ ಮಾಡಿರುವುದು ಪತ್ತೆಯಾಗುತ್ತದೆ. ಆಗ ಅಧಿಕಾರಿ, ಗೌಸ್‌ಪೀರ್‌ನ ಮನ ಒಲಿಸಿ ದೇವಸ್ಥಾನದ ಜಾಗವನ್ನು ವಾಪಸು ದೇವಸ್ಥಾನಕ್ಕೆ ಮರಳಿ ಪಡೆಯುತ್ತಾನೆ. ಸಾಮರಸ್ಯ ಮೂಡುತ್ತದೆ.




**ವಿಷ್ಣು ಗಿರಿ**

**ನಿರ್ಮಾಪಕ**: ತ್ರಿಶಿಕಾ ಫಿಲಂಸ್

**ನಿರ್ದೇಶನ**: ವಿಷ್ಣು ಗಿರಿ

**ಸಂಕಲನ**: ಅಮೀತ್ ಜವಲ್ಕರ್

**ಛಾಯಾಗ್ರಹಣ**: ವಿನೋದ್ ಮೌರ್ಯ

**ಸಂಗೀತ**: ಅನಿಲ್

**ತಾರಾಗಣ**: ವಿರಾಜ್ ಉಮಿ, ರಾಜೀವ್ ಕೊಠಾರಿ, ನಾಗಾರ್ಜುನ ಆರಾಧ್ಯ, ವಿಷು ಬಸವರಾಜ್, ಸಹನಾ ವಿಯಾನ್, ಶೇಖರ್, ಆದರ್ಶ್ ಸಂಜೀವ



## ಕನ್ನಡಿ

**(2023 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ:** ಪಲ್ಲವಿ ಬಡವಿ. ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾಳೆ.ಆಟೋ ಚಾಲಕನನ್ನು ಪ್ರೀತಿಸಿ, ಮದುವೆಯಾಗುತ್ತಾಳೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಬೇಕು, ಹೊಸ ಆಟೋವೊಂದನ್ನು ಕೊಳ್ಳಬೇಕು ಎಂಬ ಆಸೆ ಇಟ್ಟುಕೊಂಡಿದ್ದ ಶಂಕರ್, ಚಿಟ್ ಫಂಡ್ ಒಂದರಲ್ಲಿ ಹಣ ಹಾಕಲಾರಂಭಿಸುತ್ತಾನೆ. ಆಕಸ್ಮಿಕವಾಗಿ ಅಪಘಾತವೊಂದರಲ್ಲಿ ಸಾಯುತ್ತಾನೆ. ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ, ಸಾಲ ತೀರಿಸುವ ಜವಾಬ್ದಾರಿ ಪಲ್ಲವಿಯದಾಗುತ್ತದೆ. ಸಂಸಾರ ನಿಭಾಯಿಸಲು ಗತ್ಯಂತರವಿಲ್ಲದೆ ಪಲ್ಲವಿ, ವೇಶ್ಯಾವಾಟಿಕೆ ದಾರಿ ಹಿಡಿಯುತ್ತಾಳೆ. ಬೇಗನೆ ತನ್ನ ತಪ್ಪಿನ ಅರಿವಾಗಿ, ದುಡಿಯುವ ದಾರಿ ಹುಡುಕುತ್ತಾಳೆ. ಘನತೆಯಿಂದ, ಬಾಳುವುದು ಹೇಗೆ ಎಂಬುದನ್ನು ಕಲಿಯುತ್ತಾಳೆ. ಇತರ ಮಹಿಳೆಯರಿಗೂ ಮಾದರಿಯಾಗುತ್ತಾಳೆ.



**ಶರಣ್ ಗದ್ವಾಲ್**

**ನಿರ್ಮಾಪಕ:** ಡಿ. ಸಿ. ವೀರೇಂದ್ರ, ಬೆಳ್ಳಿದೀಪ ಪ್ರೊಡಕ್ಷನ್ಸ್

**ನಿರ್ದೇಶನ:** ಶರಣ್ ಗದ್ವಾಲ್

**ಸಂಕಲನ:** ಟಿ. ಮುತ್ತುರಾಜ್

**ಛಾಯಾಗ್ರಹಣ:** ಆರ್. ಗಿರಿ

**ಸಂಗೀತ:** ಶಿವಸತ್ಯ

**ತಾರಾಗಣ:** ನಮಿತಾ ರಾವ್, ಶಶಾಂಕ್ ಸಿಂಹ, ರೇಣು ಶಿಕಾರಿಪುರ, ಅಲಕನಂದಾ, ನಟರಾಜ್, ಪವನ್ ಕುಮಾರ್, ಎಸ್ಕಾರ್ಟ್ ಶ್ರೀನಿವಾಸ್, ಆ ಗೋವಿಂದ್, ಮಂಜುಳಾ ಮೈಸೂರು, ವೀರೇಂದ್ರ ಡಿ. ಸಿ



## ರಂಗಸಮುದ್ರ

(2023 / ವರ್ಣಚಿತ್ರ / ಸಾಮಾಜಿಕ)

**ಕಥಾಸಾರ**: ರಂಗಸಮುದ್ರ ಎನ್ನುವುದು ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಯಲ್ಲಿರುವ ಸಣ್ಣ ಹಳ್ಳಿ. ಅಲ್ಲೊಬ್ಬ ಅತಿ ಶ್ರೀಮಂತ. ಇಡೀ ಊರಿಗೆ ಕಾರು ಹೊಂದಿರುವ ಏಕೈಕ ಶ್ರೀಮಂತ. ದುರಂಹಕಾರಿ, ಜನರನ್ನು ತಿರಸ್ಕಾರದಿಂದ ಕಾಣುತ್ತಿದ್ದ ಕೊಬ್ಬಿನ ಮನುಷ್ಯ. ಅವನ ಅತಿರೇಕ ಎಲ್ಲಿಗೆ ಹೋಯಿತೆಂದರೆ, ಸ್ಥಳೀಯ ಗೌರವಾನ್ವಿತ ಜನಪದ ಕಲಾವಿದನೊಬ್ಬನನ್ನು ಅವಮಾನಿಸುತ್ತಾನೆ. ಇದು ಕಲಾವಿದನ ಮೊಮ್ಮಗನಿಗೆ ಕೋಪ ತರಿಸುತ್ತದೆ. ಶ್ರೀಮಂತನಿಗೆ ತಕ್ಕ ಶಾಸ್ತಿ ಮಾಡಬೇಕೆಂದು ನಿರ್ಧರಿಸಿದ ಆತ, ತಾನೇ ಸಾಧನೆ ಮಾಡಿ, ಹಣ ಸಂಪಾದಿಸಿ, ತನ್ನ ತಾತನನ್ನು ಅದೇ ಊರಿನಲ್ಲಿ ಸ್ವಂತ ಕಾರಿನಲ್ಲಿ ಓಡಾಡಿಸುತ್ತಾನೆ. ಅಹಂ ಮತ್ತು ಮಾನವೀಯತೆಯ ಘರ್ಷಣೆಯೇ ಚಿತ್ರದ ಸಾರಂಶ.



**ರಾಜಕುಮಾರ್ ಅಸ್ಕಿ**

**ನಿರ್ಮಾಪಕ**: ಹೊಯ್ಸಳ ಕ್ರಿಯೇಷನ್ಸ್

**ನಿರ್ದೇಶನ**: ರಾಜಕುಮಾರ್ ಅಸ್ಕಿ

**ಸಂಕಲನ**: ಶ್ರೀಕಾಂತ್ ಗೌಡ

**ಛಾಯಾಗ್ರಹಣ**: ಆರ್ ಗಿರಿ

**ಸಂಗೀತ**: ದೇಸಿ ಮೋಹನ್

**ತಾರಾಗಣ**: ರಾಘವೇಂದ್ರ ರಾಜಕುಮಾರ್, ರಂಗಾಯಣ ರಘು, ಸಂಪತ್ ರಾಜ್, ಕೆ.ವಿ.ಆರ್, ದಿವ್ಯ ಗೌಡ, ಸ್ಕಂದ, ಮಹೇಂದ್ರ



## ಸಮರಸ

**(2023 / ವರ್ಣಚಿತ್ರ / ಸಾಮಾಜಿಕ)**

**ಕಥಾಸಾರ:** ಭಾರತ ಹಳ್ಳಿಗಳ ದೇಶ. ರೈತನೇ ರಾಷ್ಟ್ರದ ಬೆನ್ನೆಲಬು. ರೈತರಲ್ಲಿಸಾಮರಸ್ಯವಿದ್ದರಷ್ಟೇ ದೇಶದ ಪ್ರಗತಿ. ಹಳ್ಳಿಗಳಲ್ಲಿ, ರೈತರಲ್ಲಿ ಬಿಕ್ಕಟ್ಟು, ಕಲಹ ಮೂಡಿ ಜನ ಹೇಗೆ ಸಾಮರಸ್ಯವನ್ನು ಹಾಳು ಮಾಡುತ್ತಾರೆ ಎನ್ನುವುದನ್ನುನಿರೂಪಿಸುವ "ಸಮರಸ" ನೈಜ ಕತೆಯನ್ನಾಧರಿಸಿದೆ. ಬೆಳಗೆರೆ ಕೃಷ್ಣಮೂರ್ತಿ ಅವರ "ಹಳ್ಳಿಚಿತ್ರ" ಕೃತಿಯನ್ನಾಧರಿಸಿದೆ.



**ಹಿರಿಯೂರು ರಾಘವೇಂದ್ರ**

**ನಿರ್ಮಾಪಕ:** ಧೀಮಂತ ಕ್ರಿಯೇಷನ್ಸ್

**ನಿರ್ದೇಶನ:** ಹಿರಿಯೂರು ರಾಘವೇಂದ್ರ

**ಸಂಕಲನ:** ಮುತ್ತುರಾಜು ಟಿ

**ಛಾಯಾಗ್ರಹಣ:** ಎಸ್ ಬಾಲು

**ಸಂಗೀತ:** ಮನೋಜವಂ ಆತ್ರೇಯಾ

**ತಾರಾಗಣ:** ಆತ್ರೇಯಾ



# ತಾರಿಣಿ

(2023 / ವರ್ಣಚಿತ್ರ / ಸಾಮಾಜಿಕ)

**ಕಥಾಸಾರ:** ರಂಜನ್‌ನ ಹೆಂಡತಿ ಗರ್ಭಿಣಿ. ಆತ ಪತ್ನಿಯನ್ನು ಸ್ಕ್ಯಾನಿಂಗ್ ಕೇಂದ್ರಕ್ಕೆ ಕರೆದೊಯ್ದಾಗ ಹುಟ್ಟಲಿರುವ ಮಗು ಹೆಣ್ಣು ಎಂದು ಗೊತ್ತಾಗುತ್ತದೆ. ರಂಜನ್, ತನ್ನ ಪತ್ನಿಗೆ ಗೊತ್ತಾಗದ ಹಾಗೆ ವೈದ್ಯರೊಂದಿಗೆ ಪಿತೂರಿ ಮಾಡಿ ಹೆಣ್ಣುಭ್ರೂಣ ಹತ್ಯೆ ಮಾಡುವ ಸಂಚು ಹೂಡುತ್ತಾನೆ. ಮಗುವನ್ನು ಉಳಿಸಿಕೊಳ್ಳಲು ಪತ್ನಿ ಹರ ಸಾಹಸ ಪಡುತ್ತಾಳೆ. ಸ್ಕ್ಯಾನಿಂಗ್ ಕೇಂದ್ರಗಳು ಕಾನೂನುಬಾಹಿರವಾಗಿ ಹೆಣ್ಣು ಭ್ರೂಣಹತ್ಯ ದಂಧೆ ನಡೆಸುತ್ತಿವೆ, ಮಹಿಳಾ ಶೋಷಣೆ ಅವ್ಯಾಹತವಾಗಿ ನಡೆಯುತ್ತದೆ, ವೈದ್ಯರ ಧನದಾಹಕ್ಕೆ ಇಂತಹ ಅಕ್ರಮಗಳು ನಡೆಯುತ್ತಿವೆ ಎನ್ನುವುದನ್ನು ಸಿನಿಮಾ ಹೇಳುತ್ತದೆ.



**ಸಿದ್ದು ಪೂರ್ಣಚಂದ್ರ**

**ನಿರ್ಮಾಪಕ:**

**ನಿರ್ದೇಶನ:** ಸಿದ್ದು ಪೂರ್ಣಚಂದ್ರ

**ಸಂಕಲನ:** ದೀಪಕ್ ಸಿ. ಎಸ್

**ಛಾಯಾಗ್ರಹಣ:** ರಾಜು ಹೆಮ್ಮಿಗೆಪುರ

**ಸಂಗೀತ:** ಅನಂತ್ ಆರ್ಯನ್

**ತಾರಾಗಣ:** ಮಮತಾ ರಾಹುತ್, ರೋಹಿತ್, ಭವಾನಿ ಪ್ರಕಾಶ್, ಸುಧಾ ಪ್ರಸನ್ನ, ಪ್ರಮೀಳಾ ಸುಬ್ರಮಣ್ಯಮ್, ವಿಜಯಲಕ್ಷ್ಮಿ

ಬೆಂಗಳೂರು
ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ

Bengaluru
International
Film Festival

29 FEB - 07 MAR | 2024